# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-39 ಶೋಭಕೃತ್ ನಾಮ ಸಂವತ್ಸರ, ನಿಜ ಶ್ರಾವಣ – ಭಾದ್ರಪದ, ಸೆಪ್ಟಂಬರ್ – 2023, ಸಂಚಿಕೆ-7, ಪುಟಗಳು-36 ಬೆಲೆ ರೂ.15/-

## ಹರಿಹರಪುರ ಶ್ರೀಗಳ ಚಾತುರ್ಮಾಸ್ಯ – "ಶ್ರೀಮದದ್ವೈತಸಿದ್ಧಿಮಹಾವಾಕ್ಯಾರ್ಥ ಸಭೆ"









## ಬಾಗಲಕೋಟೆ ಜಿಲ್ಲಾ 'ಪ್ರತಿಭಾ ಪುರಸ್ಕಾರ' ಸಮಾರಂಭ




ವಿಜಯಪುರದಲ್ಲಿ ಬ್ರಹತ್ ಅಭಿನಂಧನಾ ಸಮಾರಂಭ




ಹರಿಹರಪುರ ಶ್ರೀಗಳಿಂದ ವಾಣಿಜ್ಯೋದ್ಯಮಿಗಳ ಬೆಂಗಳೂರು ಸಮಾವೇಶದ ಅಧಿಕೃತ ಭಿತ್ತಿಪತ್ರ ಬಿಡುಗಡೆ



ಬ್ರಾಹ್ಮಣ ವ್ಯಾಪಾರಿ ಮತ್ತು
ವಾಣಿಜ್ಯೋದ್ಯಮಿಗಳ ವೇದಿಕೆ ಸಮಾವೇಶ, ಕಲಬುರ್ಗಿ



ಜ್ಞಾನಯೋಗಾಶ್ರಮದ ಸಿದ್ಧೇಶ್ವರ ಶ್ರೀ ಪವಿತ್ರ ಸ್ಥಳಕ್ಕೆ
ಮಾನ್ಯ ಅಧ್ಯಕ್ಷರ ಭೇಟಿ



ಲೋಕಾಪುರ ವಿಪ್ರ ಸಮಾಜದೊಂದಿಗೆ
ಸಮಾಲೋಚನೆ ಸಂದರ್ಭ



ಕುಂದಗೋಳದಲ್ಲಿ ಗೀತಾ ಸಪ್ತಾಹ,
ಸದಸ್ಯತ್ವ ಅಭಿಯಾನ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
ಜ್ಯೋತಿಷಿ ಬ॥ ಡಾ। ಮುದ್ರಾಡಿ ವಾಸುದೇವ ಭಟ್
ನಾರಾಯಣ ಭಟ್ ಹುಳೇಗಾರು
ಪ್ರಭಾಕರ ಕೆ.ಸಿ
ಕಾರ್ತಿಕ್ ಬಾಪಟ್
ಟಿ.ಎಲ್.ಎಸ್. ಕುಮಾರ್
ಹೆಚ್.ವಿ. ಸುಬ್ಬರಾವ್

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಭೇತವ್ಯಂ ನ ತಥಾ ಶತ್ರೋಃ ನ ಅಹೇಃ ನ ಚ ಅಶನೇ ।**
**ಇಂದ್ರಿಯೇಭ್ಯೋ ಯಥಾ ಸ್ವೇಭ್ಯಃ ತೈಃ ರಜಸ್ರಂ ಹಿ ಹನ್ಯತೇ ॥**

**ಶತ್ರುಗಳಿಗಾಗಲೀ, ಬೆಂಕಿಗಾಗಲೀ, ವಿಷಹಾವಿಗಾಗಲೀ, ಸಿಡಿಲಿಗಾಗಲೀ ಯಾರೂ ಹೆದರಬೇಕಾಗಿಲ್ಲ, ಇಂದ್ರಿಯಗಳಿಗೆ ಹೆದರಬೇಕಾಗಿದೆ. ಅವು ಸದಾ ಪೀಡಿಸುತ್ತಿರುತ್ತವೆ, ಕೊಲ್ಲುತ್ತಿರುತ್ತವೆ !**

ಸಿಥಿಯನ್ ದೇಶದ ಕನಿಷ್ಕ ಚಕ್ರವರ್ತಿಯ ಆಸ್ಥಾನ ಕವಿಯಾಗಿದ್ದ ಅಶ್ವಘೋಷನು ಸೌಂದರಾನಂದ ಎಂಬ ತನ್ನ ಸಂಸ್ಕೃತ ಮಹಾಕಾವ್ಯದಲ್ಲಿ ಬರೆದ ಸುಭಾಷಿತವಿದು. ಒಳ್ಳೆಯ ಚಿಂತನೆ ಹೊಂದಿರುವ, ಒಳ್ಳೆಯ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಮಾಡುವ ಜನರಿಗೆ ಬಾಹ್ಯ ಶತ್ರುಗಳು ಜನಿಸಬಹುದು. ದ್ವೇಷ–ಅಸೂಯೆಗಳಿಂದ ಕೂಡಿದ ಅವರು ಸಜ್ಜನರನ್ನೂ ಪೀಡಿಸುತ್ತಾರೆ. ಅನಾವಶ್ಯಕವಾಗಿ ತೊಂದರೆ ಕೊಡುತ್ತಾರೆ. ಅದನ್ನು ನಿವಾರಿಸಿಕೊಳ್ಳಲು ಬಹಳ ಕಷ್ಟಪಡಬೇಕಾಗುತ್ತದೆ. ಒಂದು ಬೆಂಕಿಕಿಡಿಯು ಬೇಸಿಗೆ ಕಾಲದಲ್ಲಿ ಒಂದು ಕಾಡನ್ನೇ ನಾಶಮಾಡಬಹುದು, ಮನೆಯನ್ನು, ವ್ಯಕ್ತಿಯನ್ನು ಸುಟ್ಟುಹಾಕಬಹುದು. ವಿಷಪೂರಿತ ಹಾವು ಕಚ್ಚಿ ವ್ಯಕ್ತಿ ಸಾಯಬಹುದು, ದಿಢೀರನೇ ಉಂಟಾಗುವ ಸಿಡಿಲು ಧರೆಗೆ ಬಡಿದು ಮನೆ, ಕಾಡು, ಜನರನ್ನು ಕ್ಷಣಾರ್ಧದಲ್ಲಿ ಕರಕಲಾಗಿಸಬಹುದು. ಈ ನೈಸರ್ಗಿಕ ಆಘಾತಗಳಿಂದ ಚೇತರಿಸಿಕೊಳ್ಳಲು ಬಹಳ ಪ್ರಯತ್ನಿಸಬೇಕಾಗಬಹುದು, ಇವೆಲ್ಲವೂ ಬಹಿರಂಗ ಶತ್ರುಗಳು. ಇವಕ್ಕಿಂತ ಪ್ರಬಲವಾದವು ಅಂತರಂಗದ ಶತ್ರುಗಳಾದ ಐದು ಇಂದ್ರಿಯಗಳು. ಅವೇ ಒಂದು ಜೊತೆ ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ. ಇವು ನಮ್ಮ ಹುಟ್ಟಿನೊಂದಿಗೆ ಬಂದು ಗೆಳೆಯರಂತೆ ಸೋಗು ಹಾಕಿ ನಮ್ಮ ಹೊರಗಿನ–ಒಳ, ಆಸೆ–ಅಕಾಂಕ್ಷೆಗಳನ್ನು ತಣಿಸಿ, ಉಪಕಾರ ಮಾಡುವ ನೆಪದಲ್ಲಿ ನಮ್ಮನ್ನು ಅಧಃಪತನಕ್ಕೆ ತಳ್ಳುತ್ತವೆ. ಕಠೋಪನಿಷತ್ತಿನಲ್ಲಿ ಐದು ಜ್ಞಾನೇಂದ್ರಿಯಗಳನ್ನು, ಐದು ಕರ್ಮೇಂದ್ರಿಯಗಳನ್ನು ತುಂಟು ಕುದುರೆಗಳಿಗೆ ಹೋಲಿಸಲಾಗಿದೆ.

**ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು । ಬುದ್ಧಿಂ ತು ಸಾರಥಿಂ ವಿದ್ಧಿ**
**ಮನಃ ಪ್ರಗ್ರಹಮೇವ ಚ । ಇಂದ್ರಿಯಾಣಿ ಹಯಾನ್ಯಾಹುಃ ವಿಷಯಾನ್ ತೇಷು**
**ಗೋಚರಾನ್ । ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುಃ ಮನೀಷಿಣಃ ॥**

ಆತ್ಮವೇ ಯಜಮಾನ. ಶರೀರವೇ ರಥ. ಮನಸ್ಸೇ ಲಗಾಮು. ಬುದ್ಧಿಯೇ ಸಾರಥಿ. ಈ ಹತ್ತು ಕುದುರೆಗಳು, ಮನಸ್ಸು, ಬುದ್ಧಿ, ಅಹಂಕಾರಗಳನ್ನು, ಎಲ್ಲೆಲ್ಲೋ ಸೆಳೆದುಕೊಂಡು ಹೋಗುತ್ತವೆ. ವಿಷಯಗಳಿಗೆ ದಾಸನಾದ ಮನುಷ್ಯನು ವಿವೇಕತಪ್ಪಿ ನಾಶವಾಗುತ್ತಾನೆ. ಆದ್ದರಿಂದ ಈ ಪಂಚೇಂದ್ರಿಯಗಳನ್ನು, ಮನಸ್ಸನ್ನು ಭೋಕ್ತಾ ಎನ್ನಲಾಗಿದೆ. ಆದ್ದರಿಂದ ಇವುಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಅದಕ್ಕೆ ವಶನಾಗಬಾರದು. ಅಂತಹವನೇ ಇಂದ್ರಿಯಗಳನ್ನು ಗೆದ್ದವನು, ಜಿತೇಂದ್ರಿಯ. ಈ ಇಂದ್ರಿಯಜಯತ್ವವೇ ವ್ಯಕ್ತಿ ಕಲ್ಯಾಣಕ್ಕೆ ಸೋಪಾನ. ನಮ್ಮ ದೇಶದ, ಜನನಾಯಕರಿಗೆ ಜಿತೇಂದ್ರಿಯತ್ವ ಬಹಳ ಮುಖ್ಯ. ಇಂದ್ರಿಯಗಳಿಗೆ ದಾಸರಾದ ನಾಯಕರ ಕೈಲಿ ರಾಜ್ಯಾಡಳಿತ ಸೂತ್ರವಿದ್ದರೆ, ಅಂತಹ ರಾಜ್ಯಗಳು, ದೇಶಗಳು ಅಧಃಪತನ ಹೊಂದುತ್ತವೆ ಎಂದು ಚಾಣಕ್ಯ ಹೇಳಿದ್ದಾನೆ.

**– ಪ್ರೊ. ಎಂ.ಕೆ. ಶ್ರೀಧರ್**

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**–ಸಂಪಾದಕ ಮಂಡಳಿ**

# ಬ್ರಹ್ಮಜ್ಞಾನಾವಲೀಮಾಲಾ

– ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ವೇದಾಂತದ ಪ್ರಕರಣಗ್ರಂಥಗಳಲ್ಲಿ ಅಪೂರ್ವವಾದ ಒಂದು ಗ್ರಂಥವು ಬ್ರಹ್ಮಜ್ಞಾನಾವಲೀಮಾಲೆ. ವೇದಾಂತದ ಸಿದ್ಧಾಂತವು ಉಪನಿಷತ್ತುಗಳು, ಭಗವದ್ಗೀತೆ ಹಾಗೂ ಬ್ರಹ್ಮಸೂತ್ರಗಳೆಂಬ ಪ್ರಸ್ಥಾನತ್ರಯದಲ್ಲಿ ಪ್ರತಿಷ್ಠಿತವಾಗಿದೆ. ಈ ಗ್ರಂಥಗಳನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಎಲ್ಲರಿಗೂ ಸಾಧ್ಯವಿಲ್ಲವೆಂಬುದನ್ನು ತಿಳಿದ ಆಚಾರ್ಯರು ವೇದಾಂತದ ಸಾರವನ್ನು ಸರಳವಾಗಿ ಹಾಗೂ ಸಂಕ್ಷಿಪ್ತವಾಗಿ ಪ್ರತಿಪಾದಿಸುವ ಹಲವಾರು ಲಘು ಪ್ರಕರಣ ಗ್ರಂಥಗಳನ್ನು ರಚಿಸಿದ್ದಾರೆ. ಅಂತಹ ಲಘು ಗ್ರಂಥಗಳಲ್ಲಿ ಒಂದಾಗಿರುವ "ಬ್ರಹ್ಮಜ್ಞಾನಾವಲೀಮಾಲಾ" ಗ್ರಂಥದ ಕನ್ನಡ ಅನುವಾದ ಹಾಗೂ ವ್ಯಾಖ್ಯಾನವನ್ನು ಮಾಡಲಾಗಿದೆ.**

**ಸಕೃಚ್ಛ್ರವಣಮಾತ್ರೇಣ ಬ್ರಹ್ಮಜ್ಞಾನಂ ಯತೋ ಭವೇತ್ ।**
**ಬ್ರಹ್ಮಜ್ಞಾನಾವಲೀಮಾಲಾ ಸರ್ವೇಷಾಂ ಮೋಕ್ಷಸಿದ್ಧಯೇ ॥1॥**

**ಅನುವಾದ : ಯಾವುದರಿಂದ ಕೇವಲ ಒಂದು ಬಾರಿ ಶ್ರವಣದಿಂದ ಬ್ರಹ್ಮಜ್ಞಾನವಗುವುದೋ ಅಂತಹ ಬ್ರಹ್ಮಜ್ಞಾನಾವಲೀಮಾಲೆಯನ್ನು ಎಲ್ಲರ ಮೋಕ್ಷಸಿದ್ಧಿಗಾಗಿ (ರಚಿಸಲಾಗುತ್ತಿದೆ).**

**ವಿವರಣೆ :** ಗ್ರಂಥಕಾರರು ಗ್ರಂಥಾರಂಭಪ್ರತಿಜ್ಞೆಯೊಂದಿಗೆ ಗ್ರಂಥವನ್ನು ಆರಂಭಿಸುತ್ತಿದ್ದಾರೆ. ಈ ಗ್ರಂಥದ ವಿಷಯವು ಏನೆಂಬುದು ಗ್ರಂಥದ ಹೆಸರಿನಿಂದಲೇ ಸ್ಪಷ್ಟವಾಗುತ್ತದೆ. ವೇದಾಂತದಲ್ಲಿ ಪ್ರತಿಪಾದಿಸಲ್ಪಡುವ ಪರಬ್ರಹ್ಮವೇ ಈ ಗ್ರಂಥದ ವಿಷಯ. ಈ ಬ್ರಹ್ಮದ ಜ್ಞಾನವು ಮೋಕ್ಷಕ್ಕೆ ಸಾಧನ ಎಂದು ಶಾಸ್ತ್ರಗಳಿಂದ ತಿಳಿದುಬರುತ್ತದೆ. ಹಾಗಿರುವಾಗ ಮೋಕ್ಷವನ್ನು ಬಯಸುವ ಮುಮುಕ್ಷುವು ಬ್ರಹ್ಮಜ್ಞಾನಕ್ಕಾಗಿ ಪ್ರಯತ್ನಿಸಬೇಕು ಎಂದಾಯಿತು. "ಆತ್ಮಾ ವಾ ಅರೇ ದ್ರಷ್ಟವ್ಯಃ, ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ" ಎನ್ನುವ ಶ್ರುತಿಯು ಶ್ರವಣ ಮನನ ಹಾಗೂ ನಿದಿಧ್ಯಾಸನ ಎನ್ನುವ ಸಾಧನಗಳು ಆತ್ಮಜ್ಞಾನದ ಉಪಾಯ ಎಂದು ತಿಳಿಸುತ್ತದೆ. ಅವುಗಳಲ್ಲಿ ಮುಖ್ಯವಾದ ಸಾಧನವು ಶ್ರವಣ. ಗುರುಗಳ ಮುಖದಿಂದ ವೇದಾಂತದ ಉಪದೇಶವನ್ನು ಕೇಳಿಸಿಕೊಳ್ಳುವುದು ಶ್ರವಣ. ಇದುವೇ ಆತ್ಮಜ್ಞಾನದ ಪ್ರಮುಖ ಉಪಾಯವಾಗಿದೆ.

**ಅಸಂಗೋಽಹಮಸಂಗೋಽಹಮಸಂಗೋಽಹಂ ಪುನಃ ಪುನಃ ।**
**ಸಚ್ಚಿದಾನಂದರೂಪೋಽಹಮಹಮೇವಾಹಮವ್ಯಯಃ ॥2॥**

**ಅನುವಾದ : ನಾನು ಅಸಂಗನು, ನಾನು ಅಸಂಗನು, ನಾನು ಅಸಂಗನು ಎಂದು ಪುನಃ ಪುನಃ (ತಿಳಿದುಕೊಳ್ಳಬೇಕು). ನಾನು ಸಚ್ಚಿದಾನಂದರೂಪನು. ಕೇವಲ ನಾನು ಮಾತ್ರ (ಸತ್ಯ). ನಾನು ಅವ್ಯಯನು.**

**ವಿವರಣೆ :** ನಮ್ಮ ವಾಸ್ತವ ಸ್ವರೂಪವು ದೇಹೇಂದ್ರಿಯಾದಿಗಳಿಂದ ವಿಲಕ್ಷಣವಾದ ಆತ್ಮ ಎಂದು ವೇದಾಂತವು ಪ್ರತಿಪಾದಿಸುತ್ತದೆ. ಈ ಆತ್ಮವನ್ನೇ ಜ್ಞಾನಿಯು ನಾನು ಎಂದು ಗುರುತಿಸುತ್ತಾನೆಯೇ ಹೊರತು ಅಜ್ಞಾನಿಗಳಂತೆ ದೇಹಾದಿಗಳಿಂದ ಪರಿಚ್ಛಿನ್ನವಾದ ರೂಪವನ್ನಲ್ಲ. ಆತ್ಮನು ಸಚ್ಚಿದಾನಂದರೂಪವಾದ ಬ್ರಹ್ಮವೇ ಆಗಿದೆ. ಅದು ಅಸಂಗ ಎಂದರೆ ಯಾವುದೇ ವಸ್ತುವಿನ ಸಂಬಂಧವೂ ಇಲ್ಲ. ಸಂಸಾರದ ಕೊಳೆಗಳಿಂದಾಗಲೀ ಸುಖದುಃಖಾದಿಗಳಿಂದಾಗಲೀ ಆತ್ಮವು ಕಲುಷಿತವಾಗುವುದಿಲ್ಲ. ಬ್ರಹ್ಮವೊಂದೇ ಸತ್ಯವಾದ ವಸ್ತು. ಆತ್ಮವು ಅವ್ಯಯ ಎಂದರೆ ಅದರಲ್ಲಿ ಯಾವುದೇ ಬದಲಾವಣೆ ಇಲ್ಲ. ಈ ರೀತಿಯಾಗಿ ಆತ್ಮನ ವಾಸ್ತವ ಸ್ವರೂಪವನ್ನು ಪದೇ ಪದೇ ಧ್ಯಾನಿಸಿ ಅದು ಚಿತ್ತದಲ್ಲಿ ನೆಲೆನಿಲ್ಲುವಂತೆ ಮಾಡಿಕೊಳ್ಳಬೇಕು.

**ನಿತ್ಯಶುದ್ಧವಿಮುಕ್ತೋಽಹಂ ನಿರಾಕಾರೋಽಹಮವ್ಯಯಃ ।**
**ಭೂಮಾನಂದಸ್ವರೂಪೋಽಹಮಹಮೇವಾಹಮವ್ಯಯಃ ॥3॥**

**ಅನುವಾದ : ನಾನು ನಿತ್ಯನೂ ಶುದ್ಧನೂ ವಿಮುಕ್ತನೂ ಆಗಿರುವೆನು. ನಾನು ನಿರಾಕಾರನೂ ಅವ್ಯಯನೂ ಆಗಿರುವೆನು. ನಾನು ಭೂಮಾನಂದಸ್ವರೂಪನು. ನಾನೇ ಸತ್ಯ. ನಾನು ಅವ್ಯಯನು.**

**ವಿವರಣೆ :** ಆತ್ಮವು ನಿತ್ಯ ಎಂದರೆ ಅದು ಕಾಲದಿಂದ ಪರಿಚ್ಛಿನ್ನವಾದುದಲ್ಲ. ಹುಟ್ಟು ಸಾವು ಹಾಗೂ ಪರಿವರ್ತನೆಗಳುಳ್ಳ ವಸ್ತುಗಳು ಕಾಲದಿಂದ ಪರಿಚ್ಛಿನ್ನವಾಗಿವೆ. ಆದರೆ ಆತ್ಮಕ್ಕೆ ಜನ್ಮಾದಿ ವಿಕಾರಗಳು ಇಲ್ಲ. ಹಾಗಾಗಿ ಆತ್ಮವು ನಿತ್ಯ. ಆತ್ಮದಲ್ಲಿ ಯಾವುದೇ ಅಶುದ್ಧಿಗಳ ಸಂಬಂಧ ಇಲ್ಲದ್ದರಿಂದ ಅದು ಅತ್ಯಂತ ಶುದ್ಧವಾಗಿದೆ. ಆತ್ಮವು ಸದಾ ವಿಮುಕ್ತ. ಅದಕ್ಕೆ ಯಾವುದೇ ಬಂಧನವೂ ಇಲ್ಲ. ಛಾಂದೋಗ್ಯೋಪನಿಷತ್ತಿನಲ್ಲಿ ಆತ್ಮತತ್ತ್ವವನ್ನು ಭೂಮಾ ಎಂದು ಕರೆದು ಅದನ್ನೇ ನಿಜವಾದ ಸುಖ ಎಂದು ಪ್ರತಿಪಾದಿಸಲಾಗಿದೆ. ಭೂಮವೇ ಆನಂದ. ಅಲ್ಪವಾದ ಬಾಹ್ಯವಸ್ತುವಿನಲ್ಲಿ ಸುಖವಿಲ್ಲ. ಅನಂತವಾದ ಬ್ರಹ್ಮನೇ ಸುಖಸ್ವರೂಪ. ಆ ಸುಖಸ್ವರೂಪವು ನಾನೇ ಎನ್ನವುದನ್ನು ಕಂಡುಕೊಳ್ಳಬೇಕು.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**
**ವಧು–ವರ ಮಾಹಿತಿ ಕೇಂದ್ರ, ಬೆಂಗಳೂರು**
**ಸ್ಥಳ : ಗಾಯತ್ರಿ ಭವನ**
**ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,**
**ಬನಶಂಕರಿ 2ನೆ ಹಂತ, ಬೆಂಗಳೂರು–70.**
**ದೂರವಾಣಿ : 080–26770066/26771695**
**ಸಮಯ : ಸಂಜೆ 5.00 ರಿಂದ 7.00 ರವರೆಗೆ**
**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**
1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು : ಶ್ರೀಮತಿ ಜಯಲತಾ ಸತ್ಯನಾರಾಯಣ್**
**ಮೊ. : 9916325902**
**ಸದಸ್ಯರು**
**ಶ್ರೀಮತಿ ನಳಿನಿ ನಟರಾಜ್, ಮೊ. : 9481788495**
**ಶ್ರೀಮತಿ ಗಾಯತ್ರಿ ರಾವ್, ಮೊ>9980481245**

# ಅಧ್ಯಕ್ಷರ ನುಡಿ

**ವಿಪ್ರ ಬಾಂಧವರಿಗೆ ನನ್ನ ನಮಸ್ಕಾರಗಳು,**

ನಾಡಿನ ಸಮಸ್ತ ವಿಪ್ರ ಭಾಂದವರಿಗೆ ಗೌರಿ ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು, ಗೌರಿ ಗಣೇಶ ಹಬ್ಬದೊಂದಿಗೆ ಸಾಲು ಸಾಲು ಹಬ್ಬದ ವಾತಾವರಣಕ್ಕೆ ನಾಡು ತನ್ನನ್ನ ತಾನು ಸಿದ್ಧಗೊಳಿಸುತ್ತಿದೆ, ಆ ಮೂಲಕ ಸದಾ ದುಡ್ಡು, ಕೀರ್ತಿ ಭವಿಷ್ಯವೆಂದು ಲೌಕಿಕ ವಿಷಯಗಳ ಹಿಂದೆಯೇ ಓಡುವ ಮಾನವ ಸಹಜ ಸ್ವಭಾವಕ್ಕೆ ಒಂದಿಷ್ಟು ವಿರಾಮ ಕೊಟ್ಟು ಮನಸ್ಸು ಭಗವಂತನೆಡೆಗೆ ಕೇಂದ್ರೀಕರಿಸಲು ಹಬ್ಬಗಳು ಸದವಕಾಶವನ್ನು ಕಲ್ಪಿಸಿಕೊಡುತ್ತವೆ, ಆ ಮೂಲಕ ಹಿರಿಯರು, ಕಿರಿಯರು ಎಂಬ ಭೇದಭಾವವಿಲ್ಲದೆ ಎಲ್ಲರೂ ಸಂತಸ ಸಂಭ್ರಮದ ಕ್ಷಣಗಳಲ್ಲಿ ಭಾಗವಹಿಸಿ ಮನಸ್ಸು ಪ್ರಫುಲ್ಲಗೊಳಿಸಲು ವೇದಿಕೆಯನ್ನು ಕಲ್ಪಿಸಿಕೊಡುತ್ತದೆ, ಹೀಗೆ ಹಬ್ಬ ಹರಿದಿನಗಳಿಗೆ ರೀತಿ ರಿವಾಜುಗಳಿಗೆ ತನ್ನದೇ ಆದ ಮಹತ್ವ ಹಾಗು ಪ್ರಾತಿನಿಧ್ಯತೆಯಿದೆ. ಆದರೆ ಇತ್ತೀಚಿನ ದಿನಗಳಲ್ಲಿ ದಿನಗಳಲ್ಲಿ ಅದೇಕೋ ಬ್ರಾಹ್ಮಣರ ಬಗ್ಗೆ ಹಾಗು ಸನಾತನ ಧರ್ಮದ ಬಗ್ಗೆ ಮನಸ್ಸಿಗೆ ಬಂದಂತೆ ಮಾತನಾಡುತ್ತಿದ್ದಾರೆ, ಕೆಲವರಂತೂ ಸನಾತನ ಧರ್ಮವನ್ನೇ ನಿರ್ಮೂಲನೆ ಮಾಡುತ್ತೇವೆಂದು ವಿವೇಚನಾರಹಿತ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಆದರೆ ಈ ರೀತಿಯ ಹೇಳಿಕೆ ನೀಡುತ್ತಿರುವವರು ಒಂದಂಶವನ್ನು ಗಮನದಲ್ಲಿಡಬೇಕು. ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕೆಂದು ಹೊರಟವರೆಲ್ಲ ತಾವೇ ನಿರ್ಮೂಲನೆಗೊಂಡಿದ್ದಾರೆ ಏಕೆಂದರೆ ಯಾವುದು ಸತ್ಯವೋ ಅದಕ್ಕೆ ನಾಶವಿಲ್ಲ ಹಾಗು ಸನಾತನ ಧರ್ಮವು ಸತ್ಯವನ್ನು ಅರಸುವ ಮಾರ್ಗ ಆದ್ದರಿಂದ ಸನಾತನ ಧರ್ಮವೆಂಬುವುದು ಎಂದಿಗೂ ಅಮರ ಹಾಗು ನಾಶವಾಗಲಾರದ್ದು.

ಇತಿಹಾಸದ ಉದ್ದಕ್ಕೂ ಸನಾತನ ಧರ್ಮದ ಮೇಲೆ, ದೇಶದ ಮೇಲೆ ಪರಕೀಯರ ಆಕ್ರಮಣ ನಡೆಯುತ್ತಲೇ ಬಂದಿದೆ. ಆ ರೀತಿಯ ಆಕ್ರಮಣ ವಾದಾಗಲೆಲ್ಲ ಒಬ್ಬ ಶಿವಾಜಿ, ಒಬ್ಬ ಬಾಜಿರಾವ್ ಭರತ ಭೂಮಿಯ ಹಾಗು ಸನಾತನದ ಧರ್ಮದ ಶ್ರೀ ರಕ್ಷೆಗೆ ಟೊಂಕ ಕಟ್ಟಿ ನಿಂತ ಹಲವಾರು ಪ್ರಸಂಗಗಳಿವೆ. ಈ ದೇಶವನ್ನು ಹಾಗು ಸನಾತನ ಧರ್ಮವನ್ನು ಪರಕೀಯರು ನಾನಾ ವಿಧವಾಗಿ ಪೀಡಿಸಿ ಹಿಂಸಿಸಿ ನಾಶಗೊಳಿಸುವ ಪ್ರಯತ್ನ ಪಟ್ಟರೂ ದೇಶದ ಐಕ್ಯಮತ ಉಳಿದಿರುವುದು ಯಾವ ಒಂದು ರಾಜಕೀಯ ಪ್ರಯತ್ನದಿಂದಲ್ಲ.ಈ ದೇಶ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಐಕ್ಯಮತದಲ್ಲಿರಲು ಕಾರಣ ನಮ್ಮ ಸನಾತನ ಧರ್ಮ ಮತ್ತು ಸಾಂಸ್ಕೃತಿಕ ಪರಂಪರೆ ಹಾಗು ಮಹಾ ಪುರುಷರ ತಪಸ್ಸಿನಿಂದ. ಈ ದೇಶ ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ಒಂದು ರಾಷ್ಟ್ರ ಎಂಬುದನ್ನು ತೋರಿಸಿಕೊಟ್ಟವರು ಶ್ರೀ ಶಂಕರಾಚಾರ್ಯರು ಎಂಬುದನ್ನು ಸನಾತನ ಧರ್ಮದ ವಿರುದ್ಧ ಹೇಳಿಕೆ ನೀಡುತ್ತಿರುವವರು ಗಮನಿಸಬೇಕಾದ ಸಂಗತಿ, ಅದಲ್ಲದೆ ಹಿಂದೆಲ್ಲ ಪರಕೀಯರು ನಮ್ಮ ಮೇಲೆ ನಮ್ಮ ಸಂಸ್ಕೃತಿಯ ಆಚಾರ–ವಿಚಾರಗಳ ಮೇಲೆ ದಾಳಿ ನಡೆಸುತ್ತಿದ್ದರು. ಆದರೆ ವಿಪರ್ಯಾಸವೆಂದರೆ ಇಂದು ದಾಳಿ ನಡೆಸುತ್ತಿರುವವರು ನಮ್ಮವರೇ ಆದ್ದರಿಂದ ಹಿಂದೆಂದಿಗಿಂತಲೂ ಇಂದು ನಾವುಗಳು ಮಹಾಸಭೆಯ ಧ್ಯೇಯಗಳಲ್ಲಿ ಒಂದಾದ ಸಂಸ್ಕಾರಕ್ಕೆ ಹೆಚ್ಚಿನ ಮಹತ್ವಕೊಡಬೇಕಾಗಿದೆ. ಈ ನಿಟ್ಟಿನಲ್ಲಿ ಹಿರಿಯರು ನಮ್ಮ ಮಕ್ಕಳಲ್ಲಿ ಬಾಲ್ಯದಿಂದಲ್ಲೇ ಸನಾತನ ಧರ್ಮದೆಡೆಗೆ ಒಲವು ಮೂಡುವ, ಧರ್ಮದ ಜ್ಞಾನವನ್ನು ಪಸರಿಸುವ, ತಿಳಿ ಹೇಳುವ ಕಾರ್ಯಕ್ರಗಳನ್ನು ಹೆಚ್ಚು ಹೆಚ್ಚು ಹಮ್ಮಿ ಕೊಳ್ಳಬೇಕು. ಆ ಮೂಲಕ ಸನಾತನ ಧರ್ಮದ ಮೇಲೆ ವಾಗ್ದಾಳಿಗಳಾದಾಗ ಸಮರ್ಥವಾಗಿ ಎದುರಿಸಿ ಉತ್ತರ ಕೊಡುವ ವೀರ ಸನಾತನಿಗಳನ್ನು ನಿರ್ಮಿಸುವ ಹೊಣೆ ನಮ್ಮೆಲ್ಲ ವಿಪ್ರ ಬಾಂಧವರ ಮೇಲೆ ತುಸು ಹೆಚ್ಚೇ ಇದೆ ಎಂಬುದು ಮರೆಯಬಾರದು.

ಈ ಎಲ್ಲ ಅಂಶಗಳನ್ನು ಮನಗೊಂಡು ಇದಕೆಲ್ಲ ಉತ್ತರ ಸಂಘಟನೆ ಒಂದೇ ಎಂದು ಅರಿತುಕೊಂಡು ಮಹಾಸಭೆಯ ಧ್ಯೇಯಗಳಲ್ಲಿ ಒಂದಾದ ಸಂಘಟನೆಗೆ ಹೆಚ್ಚಿನ ಒತ್ತನ್ನು ಕೊಟ್ಟು ಕಳೆದ ತಿಂಗಳಲ್ಲಿ ಉತ್ತರ ಕರ್ನಾಟಕದ ಸಂಘಟನಾ ಪ್ರವಾಸವನ್ನು ಕೈಗೊಂಡಿದ್ದೆವು, ಹಲವಾರು ಪದಾಧಿಕಾರಿಗಳು ತಮ್ಮ ಕೆಲಸದ ಒತ್ತಡಗಳ ನಡುವೆಯೂ ಮೂರು ದಿವಸಗಳ ಈ ಸಂಘಟನಾ ಪ್ರವಾಸದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದು ವಿಶೇಷವಾಗಿತ್ತು, ಬೆಂಗಳೂರಿನಿಂದ ಹೊರಟು ಹಂಪಿ ಗ್ರಾಮಕ್ಕೆ ಭೇಟಿಕೊಟ್ಟು ಅಲ್ಲಿಯ ವಿಪ್ರರ ಕೆಲವು ಸಮಸ್ಯೆಗಳನ್ನು ಆಲಿಸಿ



ಈಗಾಗಲೇ ಕಾನೂನಾತ್ಮಕವಾಗಿ ಕೈಗೊಂಡ ಕ್ರಮಗಳನ್ನು ಅವರಿಗೆ ತಿಳಿಸಿ ಅಲ್ಲಿಂದ ಮರುದಿನ ಇಳ್ಕಲ್ ಪಟ್ಟಣಕ್ಕೆ ಭೇಟಿ ಕೊಟ್ಟು ಅಲ್ಲಿಯ ಸ್ಥಳೀಯ ಮುಖಂಡರನ್ನು ಭೇಟಿ ಮಾಡಿ ಸಭೆಯನ್ನುದ್ದೇಶಿಸಿ ಮಾತನಾಡಿ ಅದೇ ದಿನ ಬಾಗಲಕೋಟೆಯಲ್ಲಿ ಜರುಗಿದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಂತರ ಸಂಘಟನಾ ಸಭೆಯಲ್ಲೂ ಪಾಲ್ಗೊಳ್ಳಲಾಯಿತು. ಅದಾದ ನಂತರ ಅಂದು ಸಂಜೆ ಬಿಜಾಪುರದಲ್ಲಿ ಆಯೋಜಿಸಿದ್ದ ಬೃಹತ್ ಸಭೆಯಲ್ಲಿ ಪಾಲ್ಗೊಂಡಿದ್ದು ಒಂದು ಅಪೂರ್ವ ಅನುಭವ, ನೆರದಿದ್ದ ಜನರಲ್ಲಿ ಇದ್ದ ಉತ್ಸಾಹ, ಆಯೋಜಕರಲ್ಲಿ ವಿಪ್ರ ಸಮಾಜದ ಬಗ್ಗೆ ಇದ್ದ ಕಳಕಳಿ ಎದ್ದು ಕಾಣುತಿತ್ತು, ಸಭೆಯ ನಂತರ ಮರುದಿನ ಸರಿ ಸುಮಾರು ಹತ್ತಕ್ಕೂ ಹೆಚ್ಚು ವಿಪ್ರ ಸಂಘ, ಸಂಸ್ಥೆಗಳನ್ನು ಭೇಟಿ ಮಾಡಿ ಅವರ ಅಭಿಪ್ರಾಯವನ್ನು ಸಂಗ್ರಹಿಸಲಾಯಿತು. ಬಿಜಾಪುರದಿಂದ ಅನತಿ ದೂರದಲ್ಲಿರುವ ಲೋಕಾಪುರ ಗ್ರಾಮದ ವಿಪ್ರ ಸಮಾಜದ ಭೇಟಿಯು ಮಹತ್ತರವಾದದ್ದು. ಲೋಕಾಪುರದಂತ ಪುಟ್ಟ ಗ್ರಾಮ, ಇರುವ ಬೆಳಣಿಕೆಯಷ್ಟು ವಿಪ್ರರೆಲ್ಲರೂ ಸೇರಿ ಕಟ್ಟಲು ಉದ್ದೇಶಿಸಿರುವ ಸಮುದಾಯ ಭವನ ಹೀಗೆ ನಾನಾ ಯೋಜನೆಗಳು ಅವರ ಕುಂದು ಕೊರತೆಗಳು ಎಲ್ಲವೂ ವಿಪ್ರ ಸಮಾಜದ ಸಂಘಟನೆಯ ಅವಶ್ಯಕತೆಯನ್ನು ಇಡೀ ರಾಜ್ಯಕ್ಕೆ ಸಾರಿ ಹೇಳುವಂತಿತ್ತು.

ಬಿಜಾಪುರದ ಭೇಟಿ ಸಂಘಟನಾ ದೃಷ್ಟಿಯಿಂದ ಒಂದು ಬಗೆಯದಾದರೆ, ಕನ್ನೂರಿನ ಶ್ರೀ ಸಮರ್ಥ ಸದ್ಗುರು ಗಣಪತರಾವ್ ಮಹಾರಾಜರ ದಿವ್ಯ ಕ್ಷೇತ್ರ ಭೇಟಿ, ನಿಂಬಾಳದ ಶ್ರೀ ಗುರುದೇವ ರಾನಡೆ ಅವರ ಆಧ್ಯಾತ್ಮ ಭವನದ ಭೇಟಿ, ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳು ಶಿವೈಕ್ಯರಾದ ಜ್ಞಾನಯೋಗಾಶ್ರಮದ ಭೇಟಿ ಹಾಗು ಲೋಕಾಪುರದ ಶ್ರೀ ಕ್ಷೇತ್ರ ಜ್ಞಾನೇಶ್ವರ ಮಠದ ಭೇಟಿ ನಮ್ಮೆಲರ ಚಿಂತನೆಗಳು, ಯೋಚನೆಗಳು ಇನ್ನಷ್ಟು ಅಧ್ಯಾತ್ಮದತ್ತ ಹೊರಳಲು ಅನುವು ಮಾಡಿ ಕೊಟ್ಟಿತು ಎಂದರೆ ತಪ್ಪಿಲ್ಲ. ಅದಲ್ಲದೆ ಈ ಹಿಂದೆಯೇ ತಿಳಿಸಿದಂತೆ ಬೆಂಗಳೂರು ಮಹಾನಗರದ ಸಂಘಟನೆ ಹಲವಾರು ಕಾರಣಗಳಿಗೆ ಮಹತ್ವವಾದದ್ದು ಆದ್ದರಿಂದ ಮುಂದಿನ ದಿನಗಳಲ್ಲಿ ಬೆಂಗಳೂರು ನಗರದಾದ್ಯಂತ ಕ್ಷೇತ್ರ ಸಂಘಟಕರನ್ನು ನೇಮಿಸಿ ಸಂಘಟನೆಯನ್ನು ಮತ್ತಷ್ಟು ಬಲಪಡಿಸಲಾಗುವುದು ಈ ನಿಟ್ಟಿನಲ್ಲಿ ಈಗಾಗಲೇ ರೂಪು ರೇಷೆಗಳು ಸಿದ್ಧವಾಗಿದ್ದು ಹಂತ ಹಂತವಾಗಿ ಕಾರ್ಯರೂಪಕ್ಕೆ ಬರಲಿದೆ, ಆದ್ದರಿಂದ ಮುಂದಿನ ದಿನಗಳಲ್ಲಿ ಉತ್ಸಾಹಿ ಯುವಕರು, ಯುವತಿಯರು, ಹಿರಿಯರು ಹಾಗು ಕಿರಿಯರು ಮಹಾಸಭೆಯೊಂದಿಗೆ ಹೆಚ್ಚಿನ ಮಟ್ಟದಲ್ಲಿ ಕೈ ಜೋಡಿಸಬೇಕೆಂದು ಆಶಿಸುತ್ತೇನೆ, ಮುಂದಿನ ಸಂಚಿಕೆಯಲ್ಲಿ ಮತ್ತಷ್ಟು ವಿವರಗಳೊಂದಿಗೆ ಭೇಟಿಯಾಗೋಣ.

**ಅಶೋಕ ಹಾರನಹಳ್ಳಿ**
ಅಧ್ಯಕ್ಷರು,

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ಭಾರತೀಯ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯಲ್ಲಿ ಹಬ್ಬ-ಹರಿದಿನಗಳ, ಉತ್ಸವ, ವ್ರತಗಳ ಪಾತ್ರ ಮಹತ್ವದ್ದು, ಜನವರಿ ಇಂದ ಡಿಸೆಂಬರ್‌ರವರೆಗೆ ಅಥವಾ ಚೈತ್ರದಿಂದ ಫಾಲ್ಗುಣದವರೆಗೆ ಒಂದಲ್ಲಾ ಒಂದು ಹಬ್ಬವಿದ್ದು, ಎಲ್ಲರೂ ಸಡಗರದಿಂದ ಪಾಲ್ಗೊಳ್ಳುತ್ತಾರೆ. ಶ್ರಾವಣ-ಭಾದ್ರಪದ ಮಾಸಗಳಲ್ಲಿ ಬರುವ ಹಬ್ಬಗಳು, ವ್ರತಗಳು ಹಲವಾರು. ಉದಾಹರಣೆಗೆ, ನಾಗಚತುರ್ಥಿ, ನಾಗರಪಂಚಮೀ, ವರಮಹಾಲಕ್ಷ್ಮೀ ವ್ರತ, ಉಪಾಕರ್ಮಗಳು, ಶ್ರೀಕೃಷ್ಣ ಜನ್ಮಾಷ್ಟಮೀ, ಗಣೇಶ-ಗೌರಿ ವ್ರತ, ಅನಂತಪದ್ಮನಾಭವ್ರತ, ಮಂಗಳಗೌರೀವ್ರತ, ಶುಕ್ರವಾರ ವ್ರತ ಮುಂತಾದವು. ಈ ಹಬ್ಬಗಳ / ವ್ರತಗಳ ಹಿಂದೆ ದೃಢವಾದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಅಸ್ತಿವಾರವಿದೆ. ಕುಟುಂಬದ ಎಲ್ಲಾ ಸದಸ್ಯರೂ ಒಟ್ಟಾಗಿ ಕಲೆತು ಇಷ್ಟದೇವತೆ, ಕುಲದೇವತೆಗಳ ಮೂಲಕ ಆಚರಿಸುವ ಈ ಹಬ್ಬಗಳು ಎಲ್ಲರಿಗೂ ಧಾರ್ಮಿಕ ಪ್ರಜ್ಞೆಯನ್ನು, ಕೌಟುಂಬಿಕ ನೆಮ್ಮದಿ, ಸಂತೋಷವನ್ನು ತರುತ್ತವೆ. ಸ್ಕಾಂದ ಪುರಾಣ, ಶಿವಪುರಾಣ, ವಿಷ್ಣುಪುರಾಣಗಳಲ್ಲಿ, ವ್ರತಗಳ ಬಗ್ಗೆ ಮಾಹಿತಿ ಇದ್ದು, ಪ್ರತಿವ್ರತಕ್ಕೂ ಒಂದು ಹಿನ್ನೆಲೆ, ವ್ರತ ವಿಧಾನ, ಫಲಗಳ ಬಗ್ಗೆ ಶೌನಕ, ವೇದವ್ಯಾಸರು ಮುಂತಾದ ಋಷಿಗಳು, ನೈಮಿಷಾರಣ್ಯದಲ್ಲಿ ಸೇರಿದ್ದ ಆಸ್ತಿಕರಿಗೆ ವಿಸ್ತಾರವಾಗಿ ಶ್ಲೋಕ ರೂಪದಲ್ಲಿ ವಿವರಿಸಿದ್ದಾರೆ. ಆ ಕಥೆಗಳ ಪಾತ್ರಧಾರಿಗಳು ರಾಜ-ಮಹಾರಾಜರು, ರಾಣಿ-ರಾಜಕುಮಾರಿಯರು, ಸಮಾಜದ ಎಲ್ಲ ಸಮುದಾಯದ ಧರ್ಮಭೀರು ಜನರಾಗಿದ್ದು, ವ್ರತಗಳನ್ನು ಹಲವು ವರ್ಷಗಳವರೆಗೆ ಆಚರಿಸಿ, ಶಾಂತೀ ಒಳ್ಳೆಯ ಸತೀ-ಪತಿ, ಪುತ್ರ-ಪುತ್ರಿ, ಅಷ್ಟೈಶ್ವರ್ಯಗಳನ್ನು ಪಡೆದಿದ್ದು, ಇಹ-ಪರಗಳಲ್ಲಿ ಸುಖ ಹೊಂದಿದ್ದನ್ನು ವಿವರಿಸಲಾಗಿದೆ. ಅನ್ಯಾಯ, ಅಧರ್ಮ, ಅಸತ್ಯಗಳಿಂದ, ಜೀವನ್ಮರಣ ಚಕ್ರ, ಸಂಸಾರ ಬಾಧೆಗಳಿಂದ ಬಿಡುಗಡೆ ಹೊಂದಲು, ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಫಲಪುರುಷಾರ್ಥಗಳನ್ನು ಪಡೆಯಲು ಇವೇ ಸಹಾಯಕ ಎಂಬುದನ್ನು ವ್ರತಕಥೆಗಳ ಮೂಲಕ ಪ್ರಸ್ತಾಪಿಸಲಾಗಿದೆ.

ಭೌಗೋಳಿಕವಾಗಿ ಭಾರತವು ಸಮಶೀತೋಷ್ಣ ವಾತಾವರಣವನ್ನು ಹೊಂದಿದ್ದು ಸಾಧಾರಣವಾಗಿ ಶ್ರಾವಣದಿಂದ ನಾಲ್ಕು ತಿಂಗಳು ಮಳೆಗಾಲವಿರುತ್ತದೆ. ಭಾರತವು ಕೃಷಿ ಪ್ರಧಾನ ದೇಶವಾದ್ದರಿಂದ ರೈತರಿಗೆ, ಭೂಮಾಲಿಕರಿಗೆ ಹೊರಗಡೆ ಹೆಚ್ಚು ಕೆಲಸವಿರುವುದಿಲ್ಲ. ಹೀಗಾಗಿ ಬಹಳಷ್ಟು ಹಬ್ಬಗಳು ಈ ಮಾಸಗಳಲ್ಲಿಯೇ ಜಾರಿಯಲ್ಲಿವೆ. ಗ್ರೀಷ್ಮದ ಸುಡುಬಿಸಿಲಿನಿಂದ ಶ್ರಾವಣದ ತಂಪಿಗೆ ಜನರು ವಾಲುತ್ತಾರೆ. ಶ್ರಾವಣವೆಂದರೆ ಶ್ರವಣ ಸಂಬಂಧಿತ ಮಾಸ. ಒಂದೆಡೆ ಕೂತು ಪೌರಾಣಿಕ, ಧಾರ್ಮಿಕ, ಆಧ್ಯಾತ್ಮಿಕ ವಿಷಯಗಳಲ್ಲಿ ಪ್ರವಚನ, ಓದುವಿಕೆಗೆ ಪ್ರಶಸ್ತ ಕಾಲ. ದೇಹ ಮನಸ್ಸು, ಭಾವ, ಬುದ್ಧಿ, ಆತ್ಮಗಳ ಸಮನ್ವಯ ಮಾಡಿಕೊಳ್ಳಲು ಸೂಕ್ತ ಸಮಯ. ಮಳೆರಾಯನ ಆರ್ಭಟದಿಂದಾಗಿ ಆಕಾಶ-ಭೂಮಿಗಳು ಒಂದಾಗಿ ಸಮುದ್ರ ಉಕ್ಕಿ ಎಲ್ಲೆಲ್ಲೂ ಸಂಭ್ರಮದ ವಾತಾವರಣ ಉಂಟಾಗಿರುತ್ತದೆ. ಶ್ರಾವಣ ಮಾಸದಲ್ಲಿ ಶುಕ್ರವಾರವೇ ಪ್ರಶಸ್ತವೇಕೆಂದರೆ ಲಕ್ಷ್ಮೀಯು ಪ್ರಕೃತಿಯ ಸ್ವರೂಪ, ಭಾರ್ಗವ ಅಥವಾ ಶುಕ್ರನಾಡಿಯು ಭ್ರೂ ಮಧ್ಯದ ಆಜ್ಞಾಚಕ್ರಕ್ಕೆ ಸಂಬಂಧಿಸಿದೆ. ಎರಡು ಹುಬ್ಬುಗಳ ನಡುವಿನ ಕಾಲ್ಪನಿಕ ಆಜ್ಞಾಚಕ್ರದಲ್ಲಿ ಸಾಧಕರು ತಮ್ಮ ಮನಸ್ಸನ್ನು ಕೇಂದ್ರೀಕರಿಸಿ, ಧಾರಣ-ಧ್ಯಾನ ಕೈಗೊಂಡರೆ ಅದು ಮೆದುಳಿನಲ್ಲಿರುವ ಸಹಸ್ರಾರ ಚಕ್ರವನ್ನು ತಲುಪಿ, ನಿರತಿಶಯ ಆನಂದ, ಆತ್ಮಸಾಕ್ಷಾತ್ಕಾರ ಉಂಟಾಗುತ್ತದೆ ಎಂದು ಯೋಗ ಗ್ರಂಥಗಳು ತಿಳಿಸುತ್ತವೆ. ಲಕ್ಷ್ಮೀಯು ಧಾತಾ-ವಿಧಾತಾರ ಜೊತೆ ಭೃಗು ಮಹರ್ಷಿಗಳ ಮಗಳಾಗಿ ಜನಿಸಿದ್ದರಿಂದ ಅವಳಿಗೆ ಭಾರ್ಗವೀ ಎಂಬ ಹೆಸರು. ಅವಳ ನಿಗದಿತ ದಿನ ಶುಕ್ರವಾರ. ಕಲಶ-ವಿಗ್ರಹಾದಿಗಳಲ್ಲಿ ದೇವಿಯನ್ನು ಆಹ್ವಾನಿಸಿ, ಹನ್ನೆರಡು ಗ್ರಂಥಿಗಳಿಂದ ಕೂಡಿದ ತಂತುವಿನಿಂದ ಅವಳನ್ನು ಹದಿನಾರು ಉಪಚಾರ ವಿಧಿಗಳ ಮೂಲಕ ಪೂಜಿಸಿದರೆ ದಾರಿದ್ರ್ಯ ನಿವಾರಣೆ ಆಗುತ್ತದೆ ಎಂದು ಪೌರಾಣಿಕ ಶ್ಲೋಕ ಸೂಚಿಸುತ್ತದೆ :

**ದಾರಿದ್ರ್ಯ ಸಾಗರೇ ಮಗ್ನಾಂ ಭೀತಾಹಂ ಭವದತೀತಃ ।**
**ದೋರಗ್ನ ಹಾಣಿಕಮಲೇ ಮನೋಭೀಷ್ಟಪ್ರದಾ ಭವ ॥**

'ಬಡತನದ ಕಡಲಲ್ಲಿ ಮುಳಗಿದ್ದೇನೆ. ಸಂಸಾರವೆಂಬ ಸಾಗರವು ನನ್ನನ್ನು ಹೆದರಿಸುತ್ತಿದೆ. ದೋರಗ್ರಂಥಿಯನ್ನು ಧರಿಸಿದ್ದೇನೆ. ಇಷ್ಟಾರ್ಥವನ್ನು ಈಡೇರಿಸು" ಎಂದು ಭಕ್ತೆಯು ಲಕ್ಷ್ಮೀಯನ್ನು ಪ್ರಾರ್ಥಿಸುತ್ತಾಳೆ. ದೇವಿವ್ರತಗಳನ್ನು ಕೇವಲ ಹೆಂಗಸರಷ್ಟೇ ಅಲ್ಲ, ಗಂಡಸರೂ ಕೈಗೊಂಡರೆ, ಪರಾಕ್ರಮಿಗಳು, ಪಂಡಿತರು, ಬುದ್ಧಿವಂತರಾಗುತ್ತಾರೆ ಎಂಬ ಸ್ಕಾಂದಪುರಾಣ ತಿಳಿಸುತ್ತದೆ. ಹಬ್ಬ-ಹರಿದಿನಗಳಲ್ಲಿ ಬಳಸುವ ಹಲವು ರೀತಿಯ ಸಾಮಗ್ರಿಗಳನ್ನು ಉಳ್ಳವರು ಕೊಳ್ಳುವುದರಿಂದ ಸಮಾಜದಲ್ಲಿ ಆರ್ಥಿಕ ಸಮನ್ವಯತೆಗೆ ಕಾರಣವಾಗುತ್ತದೆ.

ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ, ಜನರನ್ನು ಪ್ರಾಂತ್ಯಗಳನ್ನು ಒಗ್ಗೂಡಿಸಲು ಬ್ರಿಟಿಷರ ವಿರುದ್ಧ ಹೋರಾಡಲು ಬಾಲಗಂಗಾಧರ ತಿಲಕ್ ಅವರು ಪೂನಾದಲ್ಲಿ ಸಾರ್ವಜನಿಕ ಗಣೇಶೋತ್ಸವವನ್ನು ಜಾರಿಗೊಳಿಸಿ ಯಶಸ್ವಿಯಾಗುತ್ತಾರೆ. ಆ ಉತ್ಸವ ಪರಂಪರೆ ಇಂದಿಗೂ ಚಾಲ್ತಿಯಲ್ಲಿದೆ. ಸಾರ್ವಜನಿಕವಾಗಿ ನಡೆಯುವ ಹಬ್ಬ-ಹರಿದಿನಗಳು, ಪಾರಾಯಣಗಳು ಸಮಾಜದ ಎಲ್ಲ ಸಮುದಾಯದವರು ಒಟ್ಟಿಗೆ ಕಲೆಯಲು, ಸಹಬಾಳ್ವೆಯಿಂದ ಜೀವನ ನಡೆಸಲು ಸಹಕಾರಿಯಾಗಿವೆ. ಇಂತಹ ಉತ್ಸವಗಳ ಬಗ್ಗೆ ವಿಪ್ರ ಸಮಾಜದ ಹಿರಿಯರು ಯುವ ಪೀಳಿಗೆಗೆ ತಿಳಿಸಿ, ಯುವಜನತೆ ಹೆಚ್ಚಾಗಿ ಪಾಲ್ಗೊಳ್ಳಲು ಪ್ರೇರೇಪಿಸಲಿ ಎಂದು ಆಶಿಸೋಣ.

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**
– ಪ್ರಧಾನ ಸಂಪಾದಕರು


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಬಾಗಲಕೋಟೆಯಲ್ಲಿ ಪ್ರತಿಭಾ ಪುರಸ್ಕರ ಸಮಾರಂಭ
# "ಕೇಂದ್ರ ಸರ್ಕಾರ ರೂಪಿಸಿದ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗಬೇಕು"

**– ಅಶೋಕ ಹಾರನಹಳ್ಳಿ**




ವಿದ್ಯಾರ್ಥಿಗಳ ಸಂಪೂರ್ಣ ವಿಕಸನಕ್ಕೆ ಪೂರಕವಾಗಿರುವ ನೂತನ ಶಿಕ್ಷಣ ನೀತಿಯನ್ನು ಕೈಬಿಡದಂತೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ಅವರು ತಿಳಿಸಿದ್ದಾರೆ. ವಿದ್ಯಾಗಿರಿಯ ವಿಪ್ರ ಅಭಿವೃದ್ಧಿ ಸಂಘದ ಶ್ರೀ ರಾಯರಮಠದ ಆವರಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಜಿಲ್ಲಾ ಘಟಕದಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೇಂದ್ರ ಸರ್ಕಾರ ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕೌಶಲಕ್ಕೆ ಒತ್ತು ನೀಡಲಾಗಿದ್ದರೂ, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ ಕೊಟ್ಟಿದೆ. ಅದರಿಂದಾಗಿ ವ್ಯಕ್ತಿತ್ವ ವಿಕಸನಗೊಳ್ಳಲಿದೆ. ರಾಜ್ಯ ಸರ್ಕಾರ ಅಂಥ ನೀತಿಯನ್ನು ಕೈಬಿಡಬಾರದು. ಇದರಿಂದ ನಮ್ಮ ವಿದ್ಯಾರ್ಥಿಗಳಿಗೆ ನಷ್ಟವಾಗಲಿದೆ. ಅದರಲ್ಲಿನ ಯಾವುದಾದರೂ ಅಂಶಗಳ ಬಗ್ಗೆ ಒಪ್ಪಿಗೆ ಇಲ್ಲವಾದರೆ ಅದನ್ನು ಚರ್ಚಿಸಲಿ. ಅದರ ಹೊರತಾಗಿ ಇಡೀ ಶಿಕ್ಷಣ ನೀತಿಯನ್ನೇ ತಿರಸ್ಕರಿಸುವುದಾಗಿ ಹೇಳಿದರೆ ಅದನ್ನು ರಾಜಕೀಯ ದೃಷ್ಟಿಕೋನದಿಂದ ನೋಡಿದಂತಾಗುತ್ತದೆ. ಆ ಕೆಲಸವಾಗಬಾರದು. ಅದಕ್ಕಾಗಿ ಸರ್ಕಾರಕ್ಕೆ ಕೂಡಲೇ ಪತ್ರ ಬರೆಯುವುದಾಗಿ ತಿಳಿಸಿದರು. ಬ್ರಾಹ್ಮಣರಿಗೆ ಪೂರಕವಾಗದ ಅನೇಕ ಕಾನೂನುಗಳನ್ನು ಆಳುವ ಸರ್ಕಾರಗಳು ತಂದಾಗಲೂ ವಿರೋಧಿಸದೆ ಅವುಗಳನ್ನು ಒಪ್ಪಿಕೊಂಡಿದ್ದೇವೆ. ಎಲ್ಲರನ್ನು ಒಳಗೊಳ್ಳುವ ಸ್ವಭಾವ ನಮ್ಮದಾದರೂ ಬ್ರಾಹ್ಮಣರು ಎಂಬ ಕಾರಣಕ್ಕೆ ವಿರೋಧಕ್ಕೆ ಒಳಗಾಗುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು. ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ವಿವೇಕ ರಾಮಸ್ವಾಮಿ ಅವರ ಹೆಸರು ಕೇಳಿ ಬಂದಿದೆ. ಇಲ್ಲಿ ನಮ್ಮ ಬಗ್ಗೆ ಅಪಸ್ವರ, ಅಗೌರವದಿಂದ ಮಾತನಾಡಿದರೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬ್ರಾಹ್ಮಣರಿಗೆ ಗೌರವ ಸಿಗುತ್ತಿದೆ. ಪರದೇಶದಲ್ಲಿ ಬ್ರಾಹ್ಮಣರು ವಾಸಿಸುತ್ತಿದ್ದರೂ ಇಲ್ಲಿಯ ಆಚಾರಗಳನ್ನು ಬಿಡದಿರುವುದು ತೃಪ್ತಿಕರ ಎಂದು ಹೇಳಿದರು. ಆಚಾರ್ಯತ್ರಯರು ಧರ್ಮ ಬೋಧಿಸಿದ್ದಾರೆ. ಆದರೆ ಅವರ ಹೆಸರಿನಲ್ಲಿ ನಾವು ಬೇರೆಯಾಗಬಾರದು. ಸಮಾಜವನ್ನು ನಿಂದಿಸುವವರು ಬ್ರಾಹ್ಮಣರೆಂದೇ ಟೀಕಿಸುತ್ತಾರೆ ವಿನಾ ಒಳಪಂಗಡ, ಸ್ಮಾರ್ತ, ಮಾಧ್ವ ಎಂದು ಟೀಕಿಸುವುದಿಲ್ಲ. ಹೀಗಾಗಿ ಎಲ್ಲರೂ ಒಂದಾಗಬೇಕೆಂದು ಸಲಹೆ ಮಾಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಿಂದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಕಡುಬಡವ ಹಿರಿಯ ನಾಗರಿಕರು, ಅಂಗವಿಕಲರಿಗೆ ಗೌರವಧನ ಒದಗಿಸಲಾಗುತ್ತಿದೆ ಎಂದು ವಿವರಿಸಿದರು. ಶಿಕ್ಷಣ ಒಂದರಿಂದಲೇ ಜೀವನ ರೂಪುಗೊಳ್ಳುವುದಿಲ್ಲ. ಒಟ್ಟು ಕುಟುಂಬದೊಂದಿಗೆ ಹೊಂದಿಕೊಳ್ಳುವ ಗುಣ, ತಂದೆ–ತಾಯಿ, ಅತ್ತೆ–ಮಾವಂದಿರನ್ನು ಚೆನ್ನಾಗಿ ನೋಡಿಕೊಳ್ಳುವುದು ಸೇರಿದಂತೆ ಸದ್ವಿಚಾರಗಳ ಜೊತೆ ಸನ್ನಡತೆ, ಜೀವನ ಕಲೆಯೂ ಮುಖ್ಯವಾಗಿರುತ್ತದೆ. ಜೀವನದಲ್ಲಿ ಸಾಮಾನ್ಯ ಜ್ಞಾನ ಅತೀ ಮುಖ್ಯವಾಗಿರುತ್ತದೆ. ಹೀಗಾಗಿ ಅಂಕಗಳಿಸುವುದು ಒಂದೇ ಬದುಕಾಗಬಾರದು ಎಂದು ಸಲಹೆ ನೀಡಿದರು. ಸಮಾಜದ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರವೂ ದೊಡ್ಡದಾಗಿದ್ದು, ಸಮಾಜದ ಮಹಿಳಾ ಸಾಧಕಿಯರನ್ನು ಗುರುತಿಸಿ ಸಮಾವೇಶವನ್ನು ಹಮ್ಮಿಕೊಳ್ಳುವ ಯೋಚನೆಯಿದೆ ಎಂದರು. ವಿಜಯಪುರ ಅಕ್ಕಮಹಾದೇವಿ ವಿ.ವಿ. ವಿಶ್ರಾಂತ ಕುಲಪತಿ ಡಾ. ಮೀನಾ ಚಂದಾವರಕರ್ ಅವರು ಮಾತನಾಡಿ, ಶಿಕ್ಷಣದಲ್ಲಿ ಇಂದು ಸಾಕಷ್ಟು ಅವಕಾಶಗಳಿವೆ. ಕೇಂದ್ರ ಸರ್ಕಾರ ರೂಪಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸದುಪಯೋಗಪಡಿಸಿಕೊಂಡು ಮುನ್ನಡೆಯಬೇಕು. ರಾಷ್ಟ್ರೀಯ






ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ಎಂಬ ಶಬ್ದವಿದೆ. ಅದರ ಅರ್ಥ ಆಧ್ಯಾತ್ಮಿಕ, ಕೌಶಲವೂ ಒಳಗೊಂಡಿರುತ್ತದೆ. ಇಂಥ ನೀತಿಯನ್ನು ರಾಜ್ಯ ಸರ್ಕಾರ ತಿರಸ್ಕರಿಸಲು ಹೊರಟಿರುವುದರ ಬಗ್ಗೆ ಇತ್ತೀಚೆಗೆ ನಡೆದ ಕುಲಪತಿಗಳ ಸಭೆಯಲ್ಲಿ ಜನಾಂದೋಲನ ರೂಪಿಸಲು ತೀರ್ಮಾನಿಸಲಾಗಿದೆ ಎಂದರು. ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿಯವರು ಮಾತನಾಡಿ, ಬೆಂಗಳೂರಿನಲ್ಲಿ ಮಹಾಸಭೆಯಿಂದ ಮಹಿಳೆಯರಿಗಾಗಿ ವಸತಿ ನಿಲಯವನ್ನು ನಿರ್ಮಿಸಲಾಗಿದ್ದು, ಅ ಭಾಗದ ಮಹಿಳೆಯರಿಗೆ ಹೆಚ್ಚು ಅನುಕೂಲವಾಗುತ್ತಿದೆ. ಹಣಕಾಸಿನ ಕೊರತೆಯಿಂದ ವಿದ್ಯಾಭ್ಯಾಸ ನಿಲ್ಲಬಾರದು ಎಂಬ ಕಾರಣಕ್ಕೆ ಸಮುದಾಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುತ್ತಿದೆ. ಕಡುಬಡವರಿಗೆ 500/= ರೂ.ಗಳ ವೃದ್ಯಾಪ್ಯ, ಅಂಗವಿಕಲ ಮಾಸಾಶನ ನೀಡಲಾಗುತ್ತಿದ್ದು, ಅದನ್ನು 1,000/= ರೂ.ಗಳಿಗೆ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ.




ಅಶೋಕ ಹಾರನಹಳ್ಳಿ ಅವರು ಮಹಾಸಭೆ ಅಧ್ಯಕ್ಷರಾದ ನಂತರ ಸಾಕಷ್ಟು ಸಮಾಜಮುಖಿ ಕೆಲಸಗಳನ್ನು ಮಾಡಲಾಗುತ್ತಿದ್ದು, ಮುಂದೆಯೂ ಹಲವು ಯೋಜನೆಗಳನ್ನು ರೂಪಿಸುವ ಗುರಿಯಿದೆ ಎಂದರು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ತಾಲ್ಲೂಕು ಅಧ್ಯಕ್ಷ ನಾರಾಯಣ ದೇಸಾಯಿ, ಬ್ರಾಹ್ಮಣರು ಎಂದು ಹೇಳಿದಾಕ್ಷಣ ಹಿಂಜರಿಯುವ ಸ್ಥಿತಿ ನಿರ್ಮಾಣವಾಗಿದೆ. ಮನಸ್ಸಿನಲ್ಲಿ ಕೀಳರಿಮೆಯನ್ನು ನಾವು ತೊಡೆದು ಹಾಕಿ ಶ್ರೇಷ್ಠತೆಯನ್ನು ಮರಳಿ ಸ್ಥಾಪಿಸಿಕೊಳ್ಳಬೇಕು. ಮೊದಲು ರ್‍ಯಾಂಕ್‌ಗಳು ಬಂದಾಗ ಬ್ರಾಹ್ಮಣರ ಹೆಸರುಗಳೇ ಇರುತ್ತಿದ್ದವು. ಇಂದು ಸ್ಥಿತಿ ಬದಲಾಗಿದೆ. ಅದಕ್ಕೆ ಕಾರಣ ಏನೆಂಬುದನ್ನು ಬ್ರಾಹ್ಮಣ ಸಮುದಾಯದ ಪಾಲಕರು ಚಿಂತಿಸಬೇಕು. ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತರಬೇಕೆಂದರು. ಪಂ. ಶ್ರೀ ಬಿಂಧುಮಾಧವಾಚಾರ್ಯ ನಾಗಸಂಪಿಗೆ ಅವರು ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ಬ್ರಾಹ್ಮಣರು ನೀಡಿದ ಕೊಡುಗೆಗಳನ್ನು ಸ್ಮರಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ವಿದ್ಯಾರ್ಥಿಗಳನ್ನು ಗುರುತಿಸಿ, ಸನ್ಮಾನಿಸಿ ಗೌರವಿಸಲಾಯಿತು. ಶಾಸಕ ಎಚ್.ವೈ. ಮೇಟಿ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಾಗರಾಜ ಹದ್ಲಿ, ಮಹಾಸಭಾ ಉಪಾಧ್ಯಕ್ಷ ಶ್ರೀ ವೈ.ಎ.ಸುಧಾಕರ ಬಾಬು, ಸಂಘಟನಾ ಕಾರ್ಯದರ್ಶಿಗಳಾದ ಕಾರ್ತಿಕ್ ಎಸ್. ಬಾಪಟ್, ಶ್ರೀ ಅರುಣ್ ಹಿರಿಯಣ್ಣ, ಸಹಕಾರ್ಯದರ್ಶಿ ವಿನಯ್ ನಾಡಜೋಶಿ, ವಿಪ್ರ ರಾಯರ ಮಠದ ಅಧ್ಯಕ್ಷ ಶ್ರೀ ಹರಿ




ಪಾಟೀಲ, ಸಮಾಜದ ಮುಖಂಡರಾದ ನರಸಿಂಹ ಆಲೂರ, ಮಹಾಸಭಾ ರಾಜ್ಯ ಉಪಾಧ್ಯಕ್ಷ ಡಾ. ಗಿರೀಶ ಮಸೂರಕರ, ಜಿಲಾಧ್ಯಕ್ಷ ಕೆ.ಎಸ್. ದೇಶಪಾಂಡೆ, ಜಿಲ್ಲಾ ಕಾರ್ಯದರ್ಶಿ ಎಸ್.ಕೆ. ಕುಲಕರ್ಣಿ, ತಾಲೂಕು ಘಟಕಗಳ ಅಧ್ಯಕ್ಷರಾದ ಸತೀಶ ಕುಲಕರ್ಣಿ, ಅಡಿವೇಂದ್ರ ಇನಾಂದಾರ, ವೆಂಕಟೇಶ ದೇಶಪಾಂಡೆ, ಕೇಶವ ಕುಲಕರ್ಣಿ, ಶ್ರೀನಿವಾಸ ಪುರೋಹಿತ, ಯುವಕ ಘಟಕದ ಸಹ ಸಂಚಾಲಕ ಮಾಧವ ದೇಶಪಾಂಡೆ, ವಿನಾಯಕ ತಾಳಿಕೋಟಿ, ನವೀನ ಕಟ್ಟಿ, ರಾಘವೇಂದ್ರ ಕುಲಕರ್ಣಿ, ಗಿರೀಶ ಆಶ್ರಿತ, ವಿನಾಯಕ ಮೋಕರೆ, ಸಮೀರ ತಾಳಿಕೋಟಿ, ರಾಘವೇಂದ್ರ ಗುಮಾಸ್ತೆ ಮತ್ತಿತರರು ಇದ್ದರು. ಕೆ. ವಿಜಯಕುಮಾರ ಕಾರ್ಯಕ್ರಮ ನಿರೂಪಿಸಿದರು.



# ಕಲ್ಯಾಣ ಕರ್ನಾಟಕದಲ್ಲಿ ಅಧ್ಯಕ್ಷರ ಸಂಘಟನಾ ಪ್ರವಾಸ
# ಹಂಪಿ ಗ್ರಾಮಕ್ಕೆ ಅಧ್ಯಕ್ಷರ ಭೇಟಿ



ಇತ್ತೀಚೆಗೆ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು, ಮಹಾಸಭಾದ ಉಪಾಧ್ಯಕ್ಷರುಗಳಾದ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ, ಶ್ರೀ ವೈ.ಎ.ಸುಧಾಕರ ಬಾಬು, ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಅರುಣ್ ಹಿರಿಯಣ್ಣ ಮತ್ತು ಶ್ರೀ ಕಾರ್ತೀಕ್ ಎಸ್. ಬಾಪಟ್ ಅವರು ಹಂಪೆಯ ವಿರೂಪಾಕ್ಷ ಸನ್ನಿಧಿಗೆ ಭೇಟಿ ಕೊಟ್ಟು ಆಶೀರ್ವಾದ ಪಡೆದು, ನಂತರ ಹಂಪಿ ಗ್ರಾಮದ ಬ್ರಾಹ್ಮಣ ಮುಖಂಡರನ್ನು ಭೇಟಿ ಮಾಡಿ ಸಮಾಲೋಚನಾ ಸಭೆಯನ್ನು ನಡೆಸಿದರು. ಗ್ರಾಮದ ವಿಪ್ರರು ಪರಂಪರಾಗತವಾಗಿ ನಡೆಸಿಕೊಂಡು ಬರುತ್ತಿದ್ದ ಅಪರ ಕರ್ಮಾದಿಗಳನ್ನು ಮಾಡಲು ಸರ್ಕಾರದ ಅಧಿಕಾರಿಗಳು ನಿಷೇಧ ಹೇರುತ್ತಿರುವ ಬಗ್ಗೆ ಹಾಗೂ ತಮ್ಮ ಪುರೋಹಿತ ವೃತ್ತಿ ನಡೆಸದಂತೆ ನಿರ್ಭಂಧಸುತ್ತಿರುವ ಸಮಸ್ಯೆಗೆ ಪರಿಹಾರ ದೊರಕಿಸಲು ಅಧ್ಯಕ್ಷರಲ್ಲಿ ಮನವಿ ಮಾಡಿದರು. ಸಮಸ್ಯೆ ಪರಿಹರಿಸಲು ಪ್ರಯತ್ನಿಸುವುದಾಗಿ ಅಧ್ಯಕ್ಷರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸದಸ್ಯತ್ವ ಅಭಿಯಾನವನ್ನು ನಡೆಸಲಾಯಿತು, ಹಾಗೂ ಹಂಪಿ ಗ್ರಾಮದ ವಿಪ್ರ ಸಮೂಹದಿಂದ ಅಭೂತಪೂರ್ವ ಬೆಂಬಲ ದೊರೆಯಿತು.

# ಇಳಕಲ್ ಪಟ್ಟಣದ ವೆಂಕಟೇಶ್ವರ ದೇವಸ್ಥಾನದಲ್ಲಿ
# ವಿಪ್ರ ಸಮಾಜದ ಸಂಘಟನಾ ಸಭೆ

ಇಂದು ಇಳಕಲ್ ಪಟ್ಟಣದ ವೆಂಕಟೇಶ್ವರ ದೇವಸ್ಥಾನದಲ್ಲಿ ವಿಪ್ರ ಸಮಾಜದ ಸಂಘಟನಾ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಮಾತನಾಡಿದರು, ಈ ಸಂದರ್ಭದಲ್ಲಿ ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ಹೊ.ನಾ.ಹಿರಿಯಣ್ಣಸ್ವಾಮಿ, ಶ್ರೀ ವೈ.ಎ.ಸುಧಾಕರ ಬಾಬು, ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಅರುಣ್ ಹಿರಿಯಣ್ಣ, ಶ್ರೀ ಕಾರ್ತೀಕ್ ಎಸ್.ಬಾಪಟ್, ಇಳಕಲ್ ಪಟ್ಟಣದ ಬ್ರಾಹ್ಮಣ ಮುಖಂಡರಾದ ಶ್ರೀ ಟಿ.ಹೆಚ್. ಕುಲಕರ್ಣಿ ಹಾಗೂ ಇಳಕಲ್ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರು ಶ್ರೀ ಪಾಂಡುರಂಗ ಕುಲ್ಕರ್ಣಿ ಅವರು ಭಾಗವಹಿಸಿದ್ದರು.




# ನಿಂಬಾಳದ ಶ್ರೀ ಗುರುದೇವ ರಾನಡೆ ಆಶ್ರಮ



ದಿನಾಂಕ 27/08/2023 ರಂದು ಮಹಾಸಭೆ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಅಶೋಕ ಹಾರನಹಳ್ಳಿ ಅವರು ಬಿಜಾಪುರದ ಸಮೀಪವಿರುವ ನಿಂಬಾಳದ ಶ್ರೀ ಗುರುದೇವ ರಾನಡೆ ಅವರು ವಾಸವಾಗಿದ್ದ ದಿವ್ಯಕ್ಷೇತ್ರ ಹಾಗೂ ಆಧ್ಯಾತ್ಮ ಭವನಕ್ಕೆ ಭೇಟಿ ಕೊಟ್ಟರು. ಈ ಸಂದರ್ಭದಲ್ಲಿ ಮಹಾಸಭಾದ ಉಪಾಧ್ಯಕ್ಷರುಗಳಾದ ಶ್ರೀ ಹಿರಿಯಣ್ಣ ಸ್ವಾಮಿ, ಶ್ರೀ ಸುಧಾಕರ ಬಾಬು ಅವರು ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಅರುಣ್ ಹಿರಿಯಣ್ಣ, ಶ್ರೀ ಕಾರ್ತಿಕ್ ಬಾಪಟ್, ಶ್ರೀ ನಾಡ ಜೋಶಿ ಉಪಸ್ಥಿತರಿದ್ದರು .ಈ ಸಂದರ್ಭದಲ್ಲಿ ಗುರೂಜಿ ಅವರ ಧಾರ್ಮಿಕ ಚಿಂತನೆ ಹಾಗೂ ಅವರ ಅಧ್ಯಯನಶೀಲತೆ ಅವರ ಜೀವನ ಕ್ರಮದ ಬಗ್ಗೆ ಅವರ ಮೊಮ್ಮಗ ಆಪ್ಟೆ ಅವರು ಎಲ್ಲರಿಗೂ ಪರಿಚಯಿಸಿದರು.

# ಲೋಕಾಪುರ ವಿಪ್ರ ಸಮಾಜದೊಂದಿಗೆ ಸಮಾಲೋಚನೆ





ದಿನಾಂಕ 27/08/2023 ರಂದು ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಜಮಖಂಡಿ ಸಮೀಪವಿರುವ ಲೋಕಾಪುರಕ್ಕೆ ಭೇಟಿ ಕೊಟ್ಟು ಲೋಕಾಪುರದ ವಿಪ್ರ ಸಮಾಜದ ಮುಖಂಡರೊಂದಿಗೆ ಚರ್ಚಿಸಿದರು, ಪುಟ್ಟ ಗ್ರಾಮ ಲೋಕಾಪುರದಲ್ಲಿ ಕಾಲದಿಂದ ಕಾಲಕ್ಕೆ ವಿಪ್ರರು ಹಮ್ಮಿಕೊಳ್ಳುತ್ತಿರುವ ಹಲವು ಸಮಾಜಮುಖಿ ಕಾರ್ಯಕ್ರಮಗಳ ಬಗ್ಗೆ ಕೊಂಡಾಡಿದರು ಹಾಗು ಲೋಕಾಪುರ ವಿಪ್ರ ಸಮಾಜದ ಹಲವು ಬೇಡಿಕೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಮಹಾಸಭಾದ ಉಪಾಧ್ಯಕ್ಷರುಗಳಾದ ಶ್ರೀ ಹೆಚ್.ಎನ್.ಹಿರಿಯಣ್ಣಸ್ವಾಮಿ, ಶ್ರೀ ವೈ.ಎ. ಸುಧಾಕರ ಬಾಬು, ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಅರುಣ್ ಹಿರಿಯಣ್ಣ, ಶ್ರೀ ಕಾರ್ತೀಕ್ ಎಸ್ ಬಾಪಟ್, ಮಹಾಸಭಾ ಕಾರ್ಯಕಾರಿ ಸಮಿತಿ ಸದ್ಯಸರಾದ ಶ್ರೀ ರಾಘವೇಂದ್ರ ಹಾಗೂ ಊರಿನ ವಿಪ್ರ ಸಮಾಜದ ಪ್ರಮುಖರಾದ, ಶ್ರೀ ವಿ ಬಿ ಜೋಶಿ, ಶ್ರೀ ಐತಾಳ್, ಶ್ರೀ ಕುಲ್ಕರ್ಣಿ ಹಾಗೂ ಹಲವು ಸ್ಥಳೀಯ ಮುಖಂಡರು ಪಾಲ್ಗೊಂಡಿದ್ದರು.

ಜಾಹಿರಾತು

**ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ**

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು-560 050.

**ಸ್ಥಳದ ಬಾಡಿಗೆ ಇರುವುದಿಲ್ಲ**

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080-26793054 ಮೊಬೈಲ್ 8277433666**

# ಮಹಾಸಭಾ ಅಧ್ಯಕ್ಷರ ಬಿಜಾಪುರ ಪ್ರವಾಸ
# ವೈರಾಗ್ಯಕ್ಕೆ ಮತ್ತೊಂದು ಹೆಸರು ಸಿದ್ಧೇಶ್ವರ ಶ್ರೀ

**– ಅಶೋಕ ಹಾರನಹಳ್ಳಿ**



ಜ್ಞಾನಯೋಗಿ, ಸಹಸ್ರಮಾನದ ಸಂತ ಶ್ರೀ ಸಿದ್ದೇಶ್ವರ ಸ್ವಾಮೀಜಿ ವೈರಾಗ್ಯ ಮೂರ್ತಿಯಾಗಿದ್ದರು. ಶುಭ್ರವಸ್ತ್ರ ಧರಿಸುತ್ತಿದ್ದ ಶ್ರೀಗಳ ಹೃದಯ ಅಷ್ಟೇ ಪರಿಶುದ್ಧವಾಗಿತ್ತು. ವೈರಾಗ್ಯಕ್ಕೆ ಮತ್ತೊಂದು ಹೆಸರು ಸಿದ್ದೇಶ್ವರ ಶ್ರೀಗಳು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಹೇಳಿದರು.

ಸಂಘಟನೆ ಕಾರ್ಯಕ್ರಮ ನಿಮಿತ್ತ ವಿಜಯಪುರಕ್ಕೆ ಆಗಮಿಸಿದ್ದ ಅಶೋಕ ಹಾರನಹಳ್ಳಿ ಭಾನುವಾರ ಶ್ರೀ ಸಿದ್ದೇಶ್ವರ ಸ್ವಾಮಿಗಳು ಬಯಲಲ್ಲಿ ಬಯಲಾದ ಜ್ಞಾನಯೋಗಾಶ್ರಮದ ಪವಿತ್ರ ಸ್ಥಳಕ್ಕೆ ಭೇಟಿ ನೀಡಿ ಗೌರವ ಸಮರ್ಪಿಸಿದರು. ಈ ಸಂದರ್ಭದಲ್ಲಿ ಆಶ್ರಮದ ವತಿಯಿಂದ ನೀಡಲಾದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ತಮ್ಮ ಕುರುಹು ಸಹ ಉಳಿಸಬಾರದು ಎಂದು ಅಂತಿಮ ಅಭಿವಂದನಾ ಪತ್ರದಲ್ಲಿ ತಿಳಿಸಿದ ಶ್ರೀ ಸಿದ್ದೇಶ್ವರ ಸ್ವಾಮೀಜಿ ನಿರ್ಮೋಹಿಯಾಗಿದ್ದರು. ಪದ್ಮಶ್ರೀ ಪ್ರಶಸ್ತಿಯನ್ನು ನಯವಾಗಿಯೇ ನಿರಾಕರಿಸಿದ್ದರು. ಅವರು ಸಾನ್ನಿಧ್ಯವಿರುವ ಆಶ್ರಮದಲ್ಲಿ ಸನ್ಮಾನ ಸ್ವೀಕರಿಸುವುದಕ್ಕೂ ಮುಜುಗರವಾಗುತ್ತದೆ ಎಂದರು.

ಜ್ಞಾನಯೋಗಾಶ್ರಮದ ಅಧ್ಯಕ್ಷ, ಗುರುಗಳಾದ ಶ್ರೀ ಬಸವಲಿಂಗ ಸ್ವಾಮೀಜಿ, ಸಿದ್ದೇಶ್ವರ ಸಂಸ್ಥೆ ಉಪಾಧ್ಯಕ್ಷ ಸಂ.ಗು. ಸಜ್ಜನ ಹಾರನಹಳ್ಳಿ ಅವರಿಗೆ ಸನ್ಮಾನಿಸಿ, ಶ್ರೀಗಳ ಭಾವಚಿತ್ರ, ಭಗವದ್ಗೀತೆಯ ಕುರಿತು ಶ್ರೀಗಳು ನೀಡಿದ ಪ್ರವಚನ ಸಾರಸಂಗ್ರಹದ ಪುಸ್ತಕ ನೀಡಿ ಗೌರವಿಸಿದರು.

## ಮಠ–ಮಂದಿರಗಳಿಗೆ ಭೇಟಿ

ಉತ್ತರಾದಿಮಠ, ಕ್ರಿಯಾಕ್ರಮ ಟ್ರಸ್ಟ್, ಶಂಕರಮಠ, ವ್ಯಾಸಮಧ್ವಪೀಠದ ವೆಂಕಟೇಶ್ವರ ದೇವಸ್ಥಾನಗಳಿಗೆ ಭೇಟಿ ನೀಡಿದ ಶ್ರೀ ಅಶೋಕ ಹಾರನಹಳ್ಳಿಯವರು ಸನ್ಮಾನ ಸ್ವೀಕರಿಸಿ ಆಯಾ ಮಠಗಳ ವಿಶ್ವಸ್ಥ ಮಂಡಳಿಯ ಪದಾಧಿಕಾರಿಗಳಿಗೆ ಸಂಘಟನೆಯಲ್ಲಿ ಭಾಗವಹಿಸಿ, ತಮ್ಮೊಂದಿಗೆ ಕೈಜೋಡಿಸಿ ಸಮಾಜ ಜಾಗೃತಿ, ಬ್ರಾಹ್ಮಣ್ಯದ ಉಳಿವಿಗಾಗಿ ಶ್ರಮಿಸುವಂತೆ ಕೇಳಿದರು.





ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ, ಶ್ರೀಹರಿ ಗೋಳಸಂಗಿ, ವೈ.ಎ. ಸುಧಾಕರಬಾಬು. ಸಂಘಟನಾ ಕಾರ್ಯದರ್ಶಿ ಶ್ರೀ ಕಾರ್ತಿಕ್ ಎಸ್. ಬಾಪಟ್, ಅರುಣ್ ಹಿರಿಯಣ್ಣ, ಸಹ ಕಾರ್ಯದರ್ಶಿ ವಿಜಯೇಂದ್ರ ನಾಡಜೋಶಿ, ಸತೀಶ್ಚಂದ್ರ ಕುಲಕರ್ಣಿ, ಕಾರ್ಯಕಾರಿ ಸಮಿತಿ ಸದಸ್ಯ ಮಹೇಶ ದೇಶಪಾಂಡೆ, ಯುವ ಘಟಕದ ಪವನ ಜೋಶಿ, ಆನಂದ ಜೋಶಿ, ಶ್ರೀನಿವಾಸ ಬೆಟಗೇರಿ, ವೇದನಿಧಿ ಆಚಾರ್ಯ, ಪ್ರದ್ಯುಮ್ನಾಚಾರ್ಯ ಪೂಜಾರ, ಮನೋಜ ಶಹಾಪುರ, ಬಾಬುರಾವ್ ಕುಲಕರ್ಣಿ ಮೊದಲಾದವರು ಈ ಸಂದರ್ಭದಲ್ಲಿದ್ದರು.

## ಹಾವೇರಿಯಲ್ಲಿ "ಮಹಾಸಭಾ ಭವನ"ಕ್ಕೆ ಉದಾರ ದೇಣಿಗೆ ನೀಡಲು ಮನವಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಾವೇರಿ ಜಿಲ್ಲಾ ಘಟಕಕ್ಕೆ ಸರ್ಕಾರದಿಂದ ನಿವೇಶನ ಮಂಜೂರಾಗಿದ್ದು, ರೂ.26 ಲಕ್ಷ ಶುಲ್ಕವನ್ನು ಈಗಾಗಲೇ ಪಾವತಿಸಲಾಗಿದೆ. ಈ ನಿವೇಶನದಲ್ಲಿ "ಸಭಾ ಭವನ" ನಿರ್ಮಾಣ ಮಾಡಲು ಯೋಚಿಸಲಾಗಿದ್ದು, ಜಿಲ್ಲೆಯ ವಿಪ್ರರು, ಸಂಘ–ಸಂಸ್ಥೆಗಳು ಉದಾರವಾಗಿ ದೇಣಿಗೆ ನೀಡಬೇಕಾಗಿ ವಿನಂತಿ. ಹೆಚ್ಚಿನ ವಿವರಗಳಿಗೆ ಮಹಾಸಭಾ ಪ್ರಧಾನ ಕಾರ್ಯದರ್ಶಿಗಳನ್ನು ಸಂಪರ್ಕಿಸಲು ಕೋರಿದೆ.

**– ಪ್ರಧಾನ ಕಾರ್ಯದರ್ಶಿಗಳು**

| ಬ್ಯಾಂಕಿನ ವಿವರಗಳು : | A/C DETAILS |
| --- | --- |
| A/C NAME | : SAPTHARSHI FOUNDATION DONATION |
| BANK | : KARNATAKA BANK LTD. |
| A/C NO. | : 1072500102061901 |
| IFSC | : KARB0000107 |
| BRANCH | : BANASHANKARI 2ND STAGE |

# ವಿಜಯಪುರದ ಶ್ರೀ ಚಿದಂಬರ ಸೇವಾ ಸಮಿತಿ ಏರ್ಪಡಿಸಿದ್ದ ಸಂಘಟನಾ ಸಭೆ



ಕನ್ನೂರು ಶಾಂತಿಕುಟೀರದಲ್ಲಿನ ಶ್ರಾವಣ ಸಪ್ತಾಹದಲ್ಲಿ ಭಾವಗಹಿಸಿ ನಂತರದಲ್ಲಿ ನಿಂಬಾಳದ ಶ್ರೀ ರಾನಡೆ ಮಹಾರಾಜರ ಆಶ್ರಮಕ್ಕೆ ಭೇಟಿ ನೀಡಿದ ಶ್ರೀ ಅಶೋಕ ಹಾರನಹಳ್ಳಿ ಅವರು ವಿಜಯಪುರಕ್ಕೆ ಆಗಮಿಸಿ ಜ್ಞಾನಯೋಗಾಶ್ರಮ, ರುಕ್ಮಿಣಿ ಪಂಡಿತರ ಸಮಾಧಿಗೆ ಭೇಟಿ ನೀಡಿದರು. ನಂತರದಲ್ಲಿ ಚಿದಂಬರ ದೇವಸ್ಥಾನಕ್ಕೆ ಭೇಟಿ ನೀಡಿದರು.

ದಿನಾಂಕ 27/08/2023 ರಂದು ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು ವಿಜಯಪುರದ ಶ್ರೀ ಚಿದಂಬರ ಸೇವಾ ಸಮಿತಿ ಏರ್ಪಡಿಸಿದ್ದ ಸಂಘಟನಾ ಸಭೆಯಲ್ಲಿ ಭಾಗಿಯಾಗಿ ಶ್ರೀ ಚಿದಂಬರ ಮಹಾರಾಜರ ಕೃಪೆ ಸದಾ ಮಹಾಸಭೆಯ ಮೇಲೆ ಇರಲಿ, ಅಷ್ಟೇ ಅಲ್ಲ ಇನ್ನು ಉತ್ತಮ ಕಾರ್ಯಕ್ರಮವನ್ನು ಮಾಡುವಂತೆ ಶ್ರೀ ಚಿದಂಬರ ಮಹಾರಾಜರು ಮಹಾಸಭಾದ ಎಲ್ಲ ಪದಾಧಿಕಾರಿಗಳಿಗೆ ಆಶೀರ್ವದಿಸಲಿ ಎಂದು ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಹಾರನಹಳ್ಳಿ ಅವರನ್ನು ಸನ್ಮಾನಿಸಿ ಮಾತನಾಡಿದ ಶ್ರೀ ಚಿದಂಬರ ಸೇವಾ ಸಮಿತಿ ಅಧ್ಯಕ್ಷ ಪಿ.ಬಿ. ಹಂಗರಗಿ, ನಾಲ್ಕು ಜನರಿಂದ ಆರಂಭವಾದ ಸೇವಾ ಸಮಿತಿ ಈಗ ನಾಲ್ಕು ಸಾವಿರ ಸದಸ್ಯರನ್ನು ಹೊಂದಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಮಾಜಪರ ಕಾರ್ಯದಲ್ಲಿ ನಾವು ಸಂಪೂರ್ಣ ನಿಮ್ಮ ಜೊತೆ ಇದ್ದೇವೆ. ಅಶೋಕ ಹಾರನಹಳ್ಳಿಯವರ ನೇತೃತ್ವದಲ್ಲಿ ಸಮಾಜ ಸಂಘಟಿತವಾಗುತ್ತಿದೆ. ಹೀಗಾಗಿ ನಾವು ತನು ಮನ ಧನದಿಂದ ಸಂಘಟನೆಗೆ ಶ್ರಮಿಸಲು ಸಿದ್ಧರಿದ್ದೇವೆ ಎಂದರು.

ಚಿದಂಬರ ಸೇವಾ ಸಮಿತಿ ಭರವಸೆಗೆ ಹರ್ಷ ವ್ಯಕ್ತಪಡಿಸಿದ ಶ್ರೀ ಅಶೋಕ ಹಾರನಹಳ್ಳಿ ಅವರು ಸಮಾಜದ ಜಾಗೃತಿಗಾಗಿ ನಾವು ನಡೆಸಿರುವ ಅಭಿಯಾನದ ಪ್ರಯೋಜನವನ್ನು ಎಲ್ಲ ವಿಪ್ರಬಾಂಧವರು ಪಡೆಯಬೇಕು. ಮಹಾಸಭೆ ಸದಸ್ಯತ್ವ ಪಡೆದು ಸಂಘಟನೆಯ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು. ಹಾಗೂ ಇದೇ ಸಂದರ್ಭದಲ್ಲಿ ಮಹಾಸಭೆಯ ಸದಸ್ಯತ್ವ ಅಭಿಯಾನಕ್ಕೂ ಚಾಲನೆ ನೀಡಿದರು ಈ ಸಂದರ್ಭದಲ್ಲಿ ಮಹಾಸಭಾದ ಉಪಾಧ್ಯಕ್ಷರುಗಳಾದ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ, ಶ್ರೀ ವೈ.ಎ. ಸುಧಾಕರ ಬಾಬು, ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಅರುಣ್ ಹಿರಿಯಣ್ಣ, ಶ್ರೀ ಕಾರ್ತೀಕ್ ಎಸ್. ಬಾಪಟ್, ಶ್ರೀ ನಾಡ ಜೋಶಿ ಹಾಗೂ ಮಹಾಸಭಾ ಉಪಾಧ್ಯಕ್ಷರಾದ ಗೋಲ್ಸಂಘಿ, ಜಂಟಿ ಕಾರ್ಯದರ್ಶಿಗಳಾದ ಸತೀಶ್ ಕುಲ್ಕರ್ಣಿ ಹಾಗೂ ಹಲವು ವಿಪ್ರ ಮುಖಂಡರು ಪಾಲ್ಗೊಂಡಿದ್ದರು

# ಶ್ರೀ ಪರಮಹಂಸ ಪೂರ್ಣಾನಂದ ಮಹಾಸ್ವಾಮಿ ಮಠಕ್ಕೆ ಭೇಟಿ

ದಿನಾಂಕ 27/08/2023 ರಂದು ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು ಜಮಖಂಡಿ ಸಮೀಪವಿರುವ ಲೋಕಾಪುರದ ಶ್ರೀಮತ್ ಪರಮಹಂಸ ಪೂರ್ಣಾನಂದ ಮಹಾಸ್ವಾಮಿಗಳ ಮಠಕ್ಕೆ ಭೇಟಿ ಕೊಟ್ಟು ಮಹಾಸ್ವಾಮಿಗಳ ಅನುಗ್ರಹ ಪಡೆದುಕೊಂಡರು. ಈ ಸಂದರ್ಭದಲ್ಲಿ ಮಹಾಸಭಾದ ಉಪಾಧ್ಯಕ್ಷರುಗಳಾದ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ ಶ್ರೀ ವೈ.ಎ. ಸುಧಾಕರ ಬಾಬು, ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಅರುಣ್ ಹಿರಿಯಣ್ಣ, ಶ್ರೀ ಕಾರ್ತೀಕ್ ಎಸ್. ಬಾಪಟ್ ಮಹಾಸಭಾ ಕಾರ್ಯಕಾರಿ ಸಮಿತಿ ಸದ್ಯಸರಾದ ಶ್ರೀ ರಾಘವೇಂದ್ರ ಹಾಗು ಊರಿನ ಪ್ರಮುಖ ಸ್ಥಳೀಯರು ಪಾಲ್ಗೊಂಡಿದ್ದರು.



# ವಿಜಯಪುರದಲ್ಲಿ ಬ್ರಹತ್ ಅಭಿನಂಧನಾ ಸಮಾರಂಭ



ದಿನಾಂಕ 26/08/2023 ರಂದು ಮಹಾಸಭೆ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಅಶೋಕ ಹಾರನಹಳ್ಳಿ ರವರಿಗೆ ಹಾಗೂ ಸಾಧಕರಿಗೆ ಬೃಹತ್ ಅಭಿನಂದನಾ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ವಿಪ್ರ ಸಂಘಟನೆ ಮತ್ತು ಸಮುದಾಯದ ಅಭಿವೃದ್ಧಿಗೆ ಮಹಾಸಭೆ ಹಮ್ಮಿಕೊಂಡ ಜನಪರ ಕಲ್ಯಾಣ ಯೋ ಜನೆಗಳನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರುಗಳಾದ ಶ್ರೀ ಹಿರಿಯಣ್ಣ ಸ್ವಾಮಿ, ಶ್ರೀ ಸುಧಾಕರ ಬಾಬು ಅವರು ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಅರುಣ್ ಹಿರಿಯಣ್ಣ ಶ್ರೀ ಕಾರ್ತಿಕ್ ಬಾಪಟ್, ಶ್ರೀ ನಾಡ ಜೋಶಿ ಹಾಗೂ ಮಹಾಸಭಾ ಉಪಾಧ್ಯಕ್ಷರಾದ ಗೊಳಸಂಘಿ, ಹಾಗೂ ಸಹ ಕಾರ್ಯದರ್ಶಿಗಳಾದ ಸತೀಶ್ ಕುಲ್ಕರ್ಣಿ ಕೊನ್ನೂರಿನ ಶ್ರೀ ಗಣಪತ ಮಹಾರಾಜರ ಸಂಸ್ಥಾನದ ಶ್ರೀ ಕೃಷ್ಣ ಜಿ, ದತ್ತಪ್ಪಾಯ ಮಠದ ಗುರುಗಳು ಭಾಗವಹಿಸಿ ಶುಭ ಆಶಿಸಿದರು, ಇದೇ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯತ್ವ ಅಭಿಯಾನ ಕೂಡ ನಡೆಯಿತು ಅಭಿಯಾನಕ್ಕೆ ನೆರೆದ ಜನೋಸ್ತಮದಿಂದ ಅಭೂತ ಪೂರ್ವ ಬೆಂಬಲ ದೊರೆಯಿತು.




ಜಾಹಿರಾತು

ಶುಭಾಶಯಗಳೊಂದಿಗೆ

**ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ**

ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.
ದೂ. ಸಂ. 080–26731335, 26731336



**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

**ಸಂಘದ ಆಡಳಿತ ಮಂಡಳಿ ಸದಸ್ಯರು**

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

# ಕುಂದಗೋಳದಲ್ಲಿ ಗೀತಾ ಸಪ್ತಾಹ, ಸದಸ್ಯತ್ವ ಅಭಿಯಾನ



ದಿನಾಂಕ .18–8–23 ಶನಿವಾರ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಕಮಡೊಳ್ಳಿ, ಸಂಶಿ. ಗುಡುಗೇರಿ. ಶ್ರೀ ಗುರು ಗೋವಿಂದ ಭಟ್ಟರ ಕ್ಷೇತ್ರ ಕಳಸ. ಗ್ರಾಮಗಳಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಂಘಟನೆ ಮತ್ತು ಸದಸ್ಯತ್ವ ಅಭಿಯಾನ ನಡೆಯಿತು. ಈ ಸಂದರ್ಭದಲ್ಲಿ ಕಮಡೊಳ್ಳಿಯಲ್ಲಿ ರಾಮೇಶ್ವರ ಗುಡಿಯಲ್ಲಿ ವಿಪ್ರರು ಸೇರಿ ಅಭಿಯಾನ ಪ್ರಾರಂಭ ಮಾಡಲಾಯಿತು.. ಹೋಮ ಹವನಗಳ ನಂತರ ಪೂಜ್ಯ ವಿದ್ವಾಂಸರಾದ ಶ್ರೀ ಶಂಕರ ಭಟ್ಟರಿಗೆ ಶಾಲು ಹೊದಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಅಶೋಕ್ ಪಾಳಂದಿ, ಶ್ರೀ ಗಿರೀಶ್ ಕುಲಕರ್ಣಿ ಶ್ರೀ ಪುರೋಹಿತ್. ಪ್ರದೀಪ್ ಕುಲಕರ್ಣಿ ಮುಂತಾದವರಿದ್ದರು. ಅದೇ ರೀತಿ ಸಂಶಿ ಗ್ರಾಮದಲ್ಲಿ ಶ್ರೀ ಗುರುದತ್ತ ಮಂದಿರದಲ್ಲಿ ವಿಪ್ರ ಸಭೆ ಆಯೋಜಿಸಲಾಗಿತ್ತು ಅಲ್ಲಿಯೂ ಕೂಡ ವಿಪ್ರ ಸಮುದಾಯದ ಏಳಿಗೆಗಾಗಿ ಎಲ್ಲರೂ ಸದಸ್ಯರಾಗಬೇಕು ಮತ್ತು ಎಲ್ಲರೂ ಸಂಘಟನೆಯಲ್ಲಿ ತೊಡಗಿಕೊಳ್ಳಬೇಕೆಂದು ವಿನಂತಿಸಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯರಾದ ಶ್ರೀ ಗಿರೀಶ್ ದೇಸಾಯಿ, ಪವನ್ ಪಾಟೀಲ್ ಆನಂದ್ ದೇಸಾಯಿ, ಕುಂದುಗೋಳ ಪಟ್ಟಣ ಪಂಚಾಯತಿಯ ಸದಸ್ಯರಾದ ಶ್ರೀ ಶಾಮಸುಂದರ ದೇಸಾಯಿ, ತಾಯಂದಿರು, ಯುವಕರು ಉಪಸ್ಥಿತರಿದ್ದರು. ಅದೇ ರೀತಿ ಅಪರಾಹ್ನ 3:00ಕ್ಕೆ ಗುಡಗೇರಿ ಗ್ರಾಮದ ದತ್ತ ಮಂದಿರದಲ್ಲಿ ವಿಪ್ರಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಸದಸ್ಯತ್ವದ ಬಗ್ಗೆ ಅರ್ಜಿಗಳನ್ನು ವಿತರಿಸಿ ವಿಪ್ರರು ಸಂಘಟನೆ ಮತ್ತು ಸದಸ್ಯತ್ವ ರಾಜ್ಯ ಅಧ್ಯಕ್ಷರ ಸಂಘಟನೆ ಬಗ್ಗೆ ಕಾಳಜಿ ಮತ್ತು ಮುಂದಿನ ದಿನಗಳಲ್ಲಿ ಕುಂದಗೋಳ ತಾಲೂಕು ಸಮಾವೇಶದ ಬಗ್ಗೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ, ವಿಪ್ರ ಹಿರಿಯ ಮುಖಂಡರಾದ ಸಂಘಟನಾ ಚತುರರು ಆದ ಮಾನ್ಯ ಶ್ರೀ ಪ್ರಕಾಶ್ ಜೋಶಿ ಮಾತನಾಡಿ ರಾಜ್ಯದಲ್ಲಿ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ್‌ಹಾರನಹಳ್ಳಿ ಯವರ ನೇತೃತ್ವದಲ್ಲಿ ಸಂಘಟನೆ ಆಗುತ್ತಿದ್ದು ಇನ್ನೂ ಹೆಚ್ಚು ಬಲ ಇದಕ್ಕೆ ಬರಲಿ, ಹೆಚ್ಚು ಸದಸ್ಯರು ಆಗಬೇಕೆಂದು ಕರೆಕೊಟ್ಟರು ಸಭೆಯಲ್ಲಿ ಶ್ರೀ ಆನಂದ್ ಕುಲಕರ್ಣಿ, ದತ್ತಾತ್ರೇ, ಪಾಟೀಲ್ ಮುಂತಾದ ವಿಪ್ರ ಮುಖಂಡರು ವೇದಿಕೆಯಲ್ಲಿದ್ದರು. ಶ್ರೀ ಗುರು ಗೋವಿಂದ ಭಟ್ಟರ ಕ್ಷೇತ್ರವಾದ ಕಳಸ ಗ್ರಾಮದಲ್ಲಿ ಸಂಜೆ 5:00 ಘಂಟೆಗೆ ವಿಪ್ರರ ಸಭೆ ನಡೆಯಿತು. ಸಭೆಯಲ್ಲಿ ಗೀತಾಸಪ್ತಾಹ ಸಮಾರೋಪ ಕಾರ್ಯಕ್ರಮದೊಂದಿಗೆ ಬ್ರಾಹ್ಮಣರ ಸಂಘಟನೆ ಮತ್ತು ಸದಸ್ಯತ್ವದ ಬಗ್ಗೆ ಚರ್ಚೆ ನಡೆಯಿತು. ಮಾನ್ಯ ಅಶೋಕ ಹಾರನಹಳ್ಳಿ ಅವರು ರಾಜ್ಯಾಧ್ಯಕ್ಷರಾದ ಮೇಲೆ ಕರ್ನಾಟಕದಲ್ಲಿ ವಿಪ್ರ ಸಂಘಟನೆ ಅತಿ ಹೆಚ್ಚು ಬಲವಾಗುತ್ತಿದ್ದು ಮಹಾಸಭಾ ವಿಪ್ರ ಪ್ರಗತಿಯ ಸಲುವಾಗಿ ಹಲವು ಯೋಜನೆಗಳನ್ನು ಸಮಾಜಕ್ಕೆ ಕೊಡಲು ತೀರ್ಮಾನಿಸಿದ್ದು ಈ ಯೋಜನೆಗಳ ಲಾಭಗಳನ್ನು ಎಲ್ಲರೂ ಪಡೆದುಕೊಳ್ಳಬೇಕೆಂದು ತಿಳಿಸಲಾಯಿತು. ಇದರೊಂದಿಗೆ ಸಮಾಜದ ಸಂಘಟನೆಯ ಏಳಿಗೆಗಾಗಿ ಸದಸ್ಯರಾಗಬೇಕೆಂದು ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿ ವಿಜಯ್ ನಾಡ ಜೋಶಿ ಮಾತನಾಡಿದರು. ಸಭೆಯ ಅಧ್ಯಕ್ಷತೆ ವಹಿಸಿದ ಗೋಪಾಲ್ ಗೌಡ ಪಾಟೀಲ್ ಕಳಸದಲ್ಲಿ ಬ್ರಾಹ್ಮಣರು ಹೆಚ್ಚು ಇರುವುದರಿಂದ ಇಲ್ಲಿ ಹೆಚ್ಚು ಸದಸ್ಯರನ್ನು ನಾವು ಮಾಡುತ್ತೇವೆ ಎಂದು ಭರವಸೆ ಕೊಟ್ಟರು. ಇನ್ನೊಬ್ಬ ಮಹಾಸಭಾದ ಕಾರ್ಯಕಾರಿ ಸದಸ್ಯರು ಆದ ಶ್ರೀಮತಿ ವೀಣಾ ಹೆಗಡೆ ಮಾತನಾಡಿ ಮಹಿಳೆಯರು ಹೆಚ್ಚು ಸಂಘಟನೆಯಾಗಬೇಕೆಂದು ಕರೆಕೊಟ್ಟರು. ವೇದಿಕೆಯಲ್ಲಿ ಶ್ರೀ ಗೋಪಾಲಕೃಷ್ಣ ಹೆಗಡೆ ಮಾತನಾಡಿ ಗೀತಾಸಪ್ತಾಹವನ್ನು ಯಶಸ್ವಿಯಾಗಿ ನೆರವೇರಿಸಿದ ವಿಪ್ರರಿಗೆ ಧನ್ಯವಾದಗಳನ್ನು ತಿಳಿಸಿದರು. ಶ್ರೀ ಅಶೋಕ್ ಪಾಳಂದಿ, ಶ್ರೀ ಶಾಮಸುಂದ ದೇಸಾಯಿ, ವಿಪ್ರ ಮುಖಂಡರಾದ ಶ್ರೀ ಗಿರೀಶ್ ದೇಸಾಯಿ, ಶ್ರೀಮತಿ ಯಜುರ್ವೇದಿ ಶ್ರೀ ಗೋವಿಂದ ಜೋಶಿ, ಯುವಕರು ಮಾತೆಯರು ಪಾಲ್ಗೊಂಡಿದ್ದರು ಸಭೆಯ ಪ್ರಾಸ್ತಾವಿಕ ಮತ್ತು ವಂದನಾರ್ಪಣೆಯನ್ನು ವಿಪ್ರ ಮುಖಂಡರಾದ ಶ್ರೀ ಮುರಳಿಧರ್ ಜೋಷಿ ನೆರವೇರಿಸಿದರು.



# ಕಲಬುರ್ಗಿಯಲ್ಲಿ ಯಶಸ್ವಿ ಬ್ರಾಹ್ಮಣ ವ್ಯಾಪಾರಿಗಳು ಮತ್ತು ವಾಣಿಜ್ಯೋದ್ಯಮಿಗಳ ಸಮಾವೇಶ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಲಬುರಗಿ ವಿಭಾಗದ ಬ್ರಾಹ್ಮಣ ಬಿಸಿನೆಸ್ ಸಮ್ಮೇಳನ ಎನ್. ವಿ. ಸಂಸ್ಥೆಯ ಅನಂತರಾವ್ ದೇಶಮುಖ್ ಸಭಾಂಗಣದಲ್ಲಿ ನಡೆಯಿತು.. ಬ್ರಾಹ್ಮಣರು ಸ್ವಾವಲಂಬಿಗಳಾಗಬೇಕು, ವ್ಯಾಪಾರ ವಹಿವಾಟು ಕ್ಷೇತ್ರದಲ್ಲಿ ಮುಂದೆ ಬರಬೇಕು ಅನ್ನುವ ಏಕೈಕ ಉದ್ದೇಶದಿಂದ ಇದೇ ಮೊದಲ ಬಾರಿಗೆ ಈ ಸಮಾವೇಶ ಆಯೋಜಿಸಲಾಗಿದೆ ಅಂತ ಮಹಾಸಭಾದ ಉಪಾಧ್ಯಕ್ಷ ಶ್ರೀಧರ್ ಸರಾಫ್ ಹೇಳಿ, ನಗರದ ವಿವಿಧೆಡೆ ವೃತ್ತಿಯಲ್ಲಿ ತೊಡಗಿರುವ ವಿಪ್ರರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಎನ್. ವಿ. ಸೊಸೈಟಿಯ ಪದಾಧಿಕಾರಿಗಳು ಸೇರಿದಂತೆ ನೂರಾರು ವಿಪ್ರ ಮುಖಂಡರು ಉಪಸ್ತಿತರಿದ್ದರು.

ಅನೇಕ ಉದ್ಯಮಿಗಳು ಮತ್ತು ಸೇವಾ ಪೂರೈಕೆದಾರರು ವಿವಿಧ ಕ್ಷೇತ್ರಗಳ ಜನರು ತಮ್ಮ ಆಲೋಚನೆಗಳು ಮತ್ತು ವ್ಯಾಪಾರ ಮಾಡುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಹಂಚಿಕೊಂಡರು ಮತ್ತು ಸಮುದಾಯದಿಂದ ಅವರು ನಿರೀಕ್ಷಿಸುವ ಸಹಾಯವನ್ನು ವ್ಯಕ್ತಪಡಿಸಿದರು.

## ಸನ್ಮಾನ


ಇದೇ ವೇಳೆ ಸ್ವಯಂ ಉದ್ಯೋಗದಲ್ಲಿ ಸಾಧನೆ ಮಾಡಿದ ಉದ್ಯಮಿ ಕಮಲಾಬಾಯಿ ಚಿಟಗುಪ್ಪಾಕರ್ ಹಾಗೂ ಶಶಿಕಾಂತ ವೈದ್ಯ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಸಂಘಟಕರಾದ ರವೀಂದ್ರ ಟೆಂಗಳಿ, ಸತ್ಯಜೀತ್ ಕಿತ್ತೂರು, ನಾರಾಯಣ ಜಾಗೀರದಾರ, ಪ್ರಮೋದ ದೇಶಪಾಂಡೆ, ಗುರುರಾಜ ದೇಶಪಾಂಡೆ, ಅನುಪ್ ಕುಲಕರ್ಣಿ, ಕಿರಣ ಹರಸೂರ ಉಪಸ್ಥಿತರಿದ್ದರು.







## ಶ್ರೀ ಶ್ರೀಗಳ ಖಂಡನೆ



ಮೈಸೂರು: ಸನಾತನ ಧರ್ಮ ಮಲೇರಿಯಾ, ಡೆಂಗ್ಯು ಇದ್ದಂತೆ ಅದನ್ನು ಬೇರು ಸಮೇತ ನಿರ್ಮೂಲನೆ ಮಾಡಬೇಕು' ಎಂದು ತಮಿಳುನಾಡಿದ ಮುಖ್ಯಮಂತ್ರಿ ಸ್ಟಾಲಿನ್ ಪುತ್ರ ಸಚಿವ ಉದಯನಿಧಿ ಸ್ಟಾಲಿನ್ ಹೇಳಿಕೆಯನ್ನು ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಖಂಡಿಸಿದ್ದಾರೆ ಮೈಸೂರಿನಲ್ಲಿ ಚಾತುರ್ಮಾಸ್ಯ ವ್ರತದಲ್ಲಿರುವ ಶ್ರೀಗಳು ಹೇಳಿಕೆಯನ್ನು ನೀಡಿದ್ದು, ಒಂದು ರಾಜ್ಯದ ಮಂತ್ರಿಯಾಗಿ ಜವಾಬ್ದಾರಿಯುತ ಸ್ಥಾನದಲ್ಲಿರುವ ಉದಯನಿಧಿ ಸ್ಟಾಲಿನ್ ಅವರು ಸಮಾಜದಲ್ಲಿ ಇಂತಹ ವಿಷಬೀಜವನ್ನು ಬಿತ್ತುವುದು ಸರಿಯಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸನಾತನ' ಎಂದರೇ ಸದಾ ಕಾಲವೂ ಇರುವಂತಹದ್ದು ಎಂದರ್ಥ. ಎಲ್ಲರೂ ಸುಖವಾಗಿ ಬದುಕಲು ಅಳವಡಿಸಿಕೊಳ್ಳುವ ಸೂತ್ರವೇ ಧರ್ಮ. ನಮ್ಮ ಸುಖದಿಂದ ಅಕ್ಕಪಕ್ಕದವರಿಗೆ ದುಃಖವಾಗಬಾರದು. ಬದಲಾಗಿ ನಮ್ಮ ಸುಖದಿಂದ ಅಕ್ಕಪಕ್ಕದವರಿಗೂ ಸಂತೋಷ ಲಭಿಸಬೇಕು ಎನ್ನುತ್ತದೆ ಸನಾತನ ಧರ್ಮ. ಆದ್ದರಿಂದ ಅಂತಹ ಧರ್ಮವನ್ನು ನಿರ್ಮೂಲನೆ ಮಾಡಬೇಕು ಎನ್ನುವ ಮನೋಪ್ರವೃತ್ತಿ ಸರಿಯಲ್ಲ, ಅದನ್ನು ಖಂಡಿಸುತ್ತೇವೆ ಎಂದು ಶ್ರೀಗಳು ಹೇಳಿದ್ದಾರೆ.

# ರಾಜ್ಯಮಟ್ಟದ ವಿಪ್ರ ವ್ಯಾಪಾರ ಮತ್ತು ವಾಣಿಜ್ಯೋದ್ಯಮಿಗಳ ಸಮಾವೇಶ ಹರಿಹರಪುರ ಶ್ರೀಗಳಿಂದ ಅಧಿಕೃತ ಭಿತ್ತಿಪತ್ರ ಬಿಡುಗಡೆ




ದಿನಾಂಕ 20.08.2023 ಭಾನುವಾರ ಮಹಾಲಕ್ಷ್ಮಿ ಲೇಔಟ್‌ನ ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘದ ಕಲ್ಯಾಣ ಮಂಟಪದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ವ್ಯಾಪಾರ ಮತ್ತು ವಾಣಿಜ್ಯೋದ್ಯಮ ವಿಭಾಗದ ವತಿಯಿಂದ ಅಕ್ಟೋಬರ್ ತಿಂಗಳಿನಲ್ಲಿ ಹಮ್ಮಿಕೊಂಡಿರುವ ರಾಜ್ಯಮಟ್ಟದ ವ್ಯಾಪಾರ ಮತ್ತು ವಾಣಿಜ್ಯೋದ್ಯಮಿಗಳ ಸಮಾವೇಶದ ಅಧಿಕೃತ ಭಿತ್ತಿಪತ್ರವನ್ನು ಹರಿಹರಪುರ ಶ್ರೀಮಠದ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳು ತಮ್ಮ ಅಮೃತ ಹಸ್ತದಿಂದ ಅನಾವರಣಗೊಳಿಸಿ, ಸಮಾವೇಶವು ಸರ್ವ ರೀತಿಯಲ್ಲಿಯೂ ಯಶಸ್ಸನ್ನು ಸಾಧಿಸಲಿ ಎಂದು ಪೂರ್ಣಾನುಗ್ರಹಿಸಿದರು.

ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಸಮಾವೇಶದ ರೂಪರೇಷೆಗಳ ಮಾಹಿತಿಯುಳ್ಳ ವರ್ಣರಂಜಿತ ಸ್ಟಾಂಡಿಯನ್ನು ಶ್ರೀ ಮಜ್ಜಗದ್ಗುರುಗಳ ಸಮ್ಮುಖದಲ್ಲಿ ಅನಾವರಣಗೊಳಿಸಿದರು.

ಈ ಸಂದರ್ಭದಲ್ಲಿ ಹರಿಹರಪುರ ಶ್ರೀಗಳ ಚಾತುರ್ಮಾಸ್ಯ ವ್ರತದ ಪ್ರಧಾನ ಆಯೋಜಕರು, ಮಹಾಸಭಾ ಉಪಾಧ್ಯಕ್ಷರಾದ ಶ್ರೀ ರಾಘವೇಂದ್ರ ಭಟ್ಟರು, ಮಹಾಸಭಾ ಉಪಾಧ್ಯಕ್ಷರುಗಳಾದ ಶ್ರೀ ಭಾಸ್ಕರ್ ರಾವ್ ಐಪಿಎಸ್, ಶ್ರೀ ಭಾನುಪ್ರಕಾಶ್ ಶರ್ಮಾ, ಬ್ರಾಹ್ಮಣ ಮುಖಂಡರಾದ ಶ್ರೀ ಕೆ.ಇ. ರಾಧಾಕೃಷ್ಣ, ಮುಕ್ತ-ಮುಕ್ತ ಧಾರವಾಹಿಯ ಶ್ರೀ ಸೇತುರಾಮ್, ಶ್ರೀಮಠದ ಆಡಳಿತಾಧಿಕಾರಿ ರವಿಶಂಕರ್, ಕಾಂಗ್ರೆಸ್ ಮುಖಂಡ ಶ್ರೀ ಜಯಸಿಂಹ, ಮಹಾಸಭಾ ಸಂಘಟನಾ ಕಾರ್ಯದರ್ಶಿ ಶ್ರೀ ಸುಬ್ಬರಾವ್, ಜಂಟಿ ಕಾರ್ಯದರ್ಶಿ, ಶ್ರೀ ಉಮೇಶ ಶಾಸ್ತ್ರಿ, ಶ್ರೀ ಅಂಜನ್ ಕುಮಾರ್ ಶರ್ಮಾ ಹಾಗೂ ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ಸಾವಿರಾರು ಗುರುಭಕ್ತರ ಸಮ್ಮುಖದಲ್ಲಿ ನೆರವೇರಿದ ಈ ಸಮಾವೇಶ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.

# ಮೈಸೂರಿನಲ್ಲಿ ವಾಣಿಜ್ಯೋದ್ಯಮಿಗಳ ಸಮಾವೇಶ ಮಂತ್ರಾಲೋಚನೆ ಸಭೆ




ಸಾವಿರಾರು ಗುರುಭಕ್ತರ ಸಮ್ಮುಖದಲ್ಲಿ ನೆರವೇರಿದ ಈ ಸಮಾವೇಶ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು.

ಮೈಸೂರಿನ ಶ್ರೀ ಕೃಷ್ಣಧಾಮದಲ್ಲಿ ದಿನಾಂಕ 03.09.2023ರ ಭಾನುವಾರ ಸಂಜೆ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಮಟ್ಟದ ವ್ಯಾಪಾರ ಮತ್ತು ಉದ್ದಿಮೆಗಳ ವಿಭಾಗದಿಂದ ರಾಜ್ಯ ಉಪಾಧ್ಯಕ್ಷರುಗಳಾದ ಶ್ರೀ ಪಿ.ಸಿ. ರಾವ್ ಮತ್ತು ಶ್ರೀಮತಿ ರೂಪಾಶಾಸ್ತ್ರಿ ರವರ ಉಸ್ತುವಾರಿಯಲ್ಲಿ "ವಾಣಿಜ್ಯೋದ್ಯಮಿಗಳ ಮಂತ್ರಾಲೋಚನಾ ಸಭೆಯನ್ನು" ಏರ್ಪಡಿಸಲಾಗಿತ್ತು

ಪೇಜಾವರ ಮಠದ ಪರಮಪೂಜ್ಯ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳು ಸಭೆಯನ್ನು ದೀಪ ಬೆಳಗುವ ಮೂಲಕ ಉದ್ಘಾಟಿಸಿದರು.

ಈ ಸಭೆಯ ಅಧ್ಯಕ್ಷತೆಯನ್ನು ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ವಹಿಸಿದ್ದರು. ಶಾಸಕರಾದ ಶ್ರೀ ಶ್ರೀವತ್ಸರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಮಹಾಸಭಾ ಉಪಾಧ್ಯಕ್ಷರಾದ ಶ್ರೀಮತಿ ಪುಷ್ಪ ಅಯ್ಯಂಗಾರ್, ಶ್ರೀಮತಿ ರೂಪ ಶಾಸ್ತ್ರಿ, ವಿಪ್ರ ಮುಖಂಡರಾದ ಶ್ರೀ ಡಿ.ಟಿ. ಪ್ರಕಾಶ್, ರವಿ ಶಾಸ್ತ್ರಿ, ಅಜಯ್ ಶಾಸ್ತ್ರಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು

ಈ ವಾಣಿಜ್ಯೋದ್ಯಮಿಗಳ ಸಭೆಯಲ್ಲಿ 70ಕ್ಕೂ ಹೆಚ್ಚಿನ ವಿಪ್ರ ವಾಣಿಜ್ಯೋದ್ಯಮಿಗಳು, ವಿಪ್ರ ವಾಣಿಜ್ಯ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.



# ಮೈಸೂರು ಜಿಲ್ಲೆಯಲ್ಲಿ ಮಹಾಸಭೆಯ ಚಟುವಟಿಕೆಗಳು

## ಪ್ರತಿಭಾ ಪುರಸ್ಕಾರ



ಮೈಸೂರಿನ ನರಸಿಂಹರಾಜ ವಿಪ್ರ ಸಂಘದ ಆಶ್ರಯದಲ್ಲಿ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಆಯೋಜಿಸಲಾಗಿತ್ತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ನಂ. ಶ್ರೀಕಂಠಕುಮಾರ್, ಸಮಿತಿ ಸದಸ್ಯರಾದ ಶಂಕರನಾರಾಯಣ, ಸಂಘದ ಅಧ್ಯಕ್ಷರಾದ ಕೃಷ್ಣಯ್ಯ, ಕಾರ್ಯದರ್ಶಿ ದಿನೇಶ್, ಚಂದ್ರಶೇಖರ್, ಸತ್ಯನಾರಾಯಣ, ಮಂಜುನಾಥ್, ಆನಂದ್, ಲೀಲಾವತಿರವರುಗಳು ಉಪಸ್ಥಿತರಿದ್ದರು.

## ಶ್ರೀ ಗೋಪಾಲಕೃಷ್ಣರಿಗೆ ಅಭಿನಂದನೆ

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅತೀ ಹೆಚ್ಚಿನ ಆಜೀವ ಸದಸ್ಯರನ್ನು ಮಹಾಸಭಾಗೆ ನೋಂದಾಯಿಸಿದ ಸಂಘದ ಅಧ್ಯಕ್ಷರಾದ ಶ್ರೀ ಕೆ. ವಿ. ಗೋಪಾಲಕೃಷ್ಣ ರವರನ್ನು ಕೃಷ್ಣರಾಜ ಕ್ಷೇತ್ರದ ಶಾಸಕರಾದ ಶ್ರೀ ಟಿ. ಎಸ್. ಶ್ರೀವತ್ಸ, ರಾಜ್ಯ ಉಪಾಧ್ಯಕ್ಷರಾದ ನಂ. ಶ್ರೀಕಂಠಕುಮಾರ್, ಕಾರ್ಯಕಾರಿ ಸದಸ್ಯರಾದ ಎನ್.ಎನ್. ವಿಶ್ವನಾಥ್, ಕೆ ಆರ್ ಸತ್ಯನಾರಾಯಣ, ಶಂಕರನಾರಾಯಣ, ಹೆಚ್ ರಮೇಶ್, ಗೋವಿಂದರಾಜುರವರುಗಳು ಗೌರವಿಸಿದರು.



## ಮೈಸೂರಿನ ಹೆಬ್ಬಾಳು – ವಿಜಯನಗರ ಪ್ರತಿಭಾ ಪುರಸ್ಕಾರ



ದಿನಾಂಕ 27.8.2023 ರಂದು ಮಹಾಸಭೆಯ ಅಂಗಸಂಸ್ಥೆಯಾದ ಮೈಸೂರಿನ ಹೆಬ್ಬಾಳು – ವಿಜಯನಗರ ಬ್ರಾಹ್ಮಣ ಸಂಘದ ಆಶ್ರಯದಲ್ಲಿ 2023 ನೇ ಸಾಲಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ಸಮಾರಂಭ ನಡೆಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ನಂ. ಶ್ರೀಕಂಠಕುಮಾರ್, ಸಮಿತಿ ಸದಸ್ಯ ಶಂಕರನಾರಾಯಣ, ಸಂಘದ ಅಧ್ಯಕ್ಷರಾದ ಆರ್. ಮಂಜುನಾಥ್, ಉಪಾಧ್ಯಕ್ಷ ಗುರುಪ್ರಸಾದ್, ಕಾರ್ಯದರ್ಶಿ ಎಂ. ಎನ್. ಶ್ರೀನಿವಾಸ್ ಜೋಯಿಸ್, ಸೋಮಸುಂದರ್, ಶಕುಂತಲಾರವರು ಉಪಸ್ಥಿತರಿದ್ದರು.

# ಮಹಾಸಭಾ ಮೈಸೂರು – ಕಾರ್ಯ ಚಟುವಟಿಕೆಗಳು
## ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ ಆಚರಣೆ



ಮಹಾಸಭಾದ ಅಂಗಸಂಸ್ಥೆಯಾದ ಮೈಸೂರಿನ ವಿಪ್ರ ಜಾಗೃತಿ ವೇದಿಕೆಯ ಆಶ್ರಯದಲ್ಲಿ 10ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಶ್ರೀ ವಿಷ್ಣುಸಹಸ್ರನಾಮ ಪಾರಾಯಣ, ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವವನ್ನು ಆಚರಿಸಲಾಯಿತು. ಕೃಷ್ಣರಾಜ ಕ್ಷೇತ್ರದ ಶಾಸಕರಾದ ಟಿ ಎಸ್ ಶ್ರೀವತ್ಸ, ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ನಂ. ಶ್ರೀಕಂಠಕುಮಾರ್, ಸಮಿತಿ ಸದಸ್ಯರಾದ ಕೆ. ಆರ್. ಸತ್ಯನಾರಾಯಣ, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿ. ಓ. ಪ್ರಕಾಶ್, ವೇದಿಕೆಯ ಉಪಾಧ್ಯಕ್ಷರಾದ ನಾಗರಾಜು, ಕಾರ್ಯದರ್ಶಿ ಮುಳ್ಳೂರು ಸುರೇಶ್, ಖಜಾಂಚಿ ಮಂಜುನಾಥ್, ಮುಖಂಡರಾದ ಭವಾನಿ ಶಂಕರ್, ಸಚಿತ್, ಅಜಯ್ ಶಾಸ್ತ್ರಿ, ವಿಕ್ರಂ ಅಯ್ಯಂಗಾರ್ ಇನ್ನಿತರರು ಭಾಗವಹಿಸಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ವಿಪ್ರ ಬಂಧುಗಳು ಉಪಸ್ಥಿತರಿದ್ದರು.

# ಉಚಿತ ನರರೋಗ ಚಿಕಿತ್ಸಾ ಶಿಬಿರ




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಕೇಂದ್ರ ಕಛೇರಿಯಾದ ಗಾಯತ್ರಿ ಭವನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಪಟ್ಟಣಗೆರೆ ರಂಗನಾಥ ಶಾಸ್ತ್ರಿ ಕೃಷ್ಣವೇಣಮ್ಮ ಮೆಮೋರಿಯಲ್ ಟ್ರಸ್ಟ್, ಬೆಂಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ 76ನೇ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ "ನರರೋಗ ಮತ್ತು ನರರೋಗಕ್ಕೆ ಸಂಬಂಧಪಟ್ಟಂತಹ ಉಚಿತ ಸಲಹಾ ಶಿಬಿರ" ವನ್ನು ಹಿರಿಯ ನರರೋಗ ತಜ್ಞರಾದ ಡಾ॥ ಸೂರ್ಯನಾರಾಯಣ ಶರ್ಮರವರ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಆರೋಗ್ಯ ಸೇವೆಗಳ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ್ ದ್ವಾರಕನಾಥ್‌ರವರ ನೇತೃತ್ವದಲ್ಲಿ ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ಆರು ನುರಿತ ನರರೋಗ ವೈದ್ಯರುಗಳು ಬ್ರಾಹ್ಮಣ ಮಹಾಸಭೆಯ ಸದಸ್ಯರುಗಳಿಗೂ ಮತ್ತು ಸಮುದಾಯದವರಿಗೂ ಅವರವರ ಸಮಸ್ಯೆಗಳಿಗೆ ಅನುಗುಣವಾಗಿ ಉಚಿತ ಸಲಹೆಗಳನ್ನು ನೀಡಿದರು.

ಸದರಿ ಶಿಬಿರದಲ್ಲಿ ಉಚಿತವಾಗಿ ಬ್ರೈನ್ ಡಾಪ್ಲರ್ ಸ್ಕ್ಯಾನಿಂಗ್‌ನ್ನು, ಬೋನ್ ಡೆನ್‌ಸಿಟಿ ಪರೀಕ್ಷೆಯನ್ನು, ರಕ್ತದೊತ್ತಡ ಮತ್ತು ದೇಹದಲ್ಲಿನ ಸಕ್ಕರೆ ಅಂಶವನ್ನು ಉಚಿತವಾಗಿ ಪರೀಕ್ಷೆ ಮಾಡಲಾಯಿತು, ಅತಿಮುಖ್ಯವಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಇತಿಹಾಸದಲ್ಲಿ ಪ್ರಥಮ ಬಾರಿಗೆ ಉಚಿತವಾಗಿ ಲಕ್ಷಾಂತರ ರೂಪಾಯಿಯ ಮೌಲ್ಯದ ಔಷಧಿ ಮಾತ್ರೆಗಳನ್ನು ಅಂದು ಶಿಬಿರಾರ್ಥಿಗಳಿಗೆ ನೀಡಲಾಯಿತು. ಅಂದು ಬೆಳಿಗ್ಗೆ 11.00 ಗಂಟೆಗೆ ಪೆರೂ ದೇಶದ ರಾಯಭಾರಿಗಳಾದ ಶ್ರೀಯುತ ವಿಕ್ರಂ ವಿಶ್ವನಾಥ್‌ರವರು ಶಿಬಿರವನ್ನು ಉದ್ಘಾಟಿಸಿದರು. ಉದ್ಘಾಟನೆಯ ವೇದಿಕೆ ಮೇಲೆ ಹಿರಿಯ ನರರೋಗ ತಜ್ಞರೂ ಮತ್ತು ಸೊಸೈಟಿ ಅಫ್ ನ್ಯೂರೊ ಸೋನಾಲಜಿಯ ಅಧ್ಯಕ್ಷರಾದ ಡಾ॥ ಲೋಕೇಶ್‌ರವರು, ಸೇಂಟ್ ಜಾನ್ಸ್ ಆಸ್ಪತ್ರೆಯ ನರರೋಗ ವಿಭಾಗದ ಮುಖ್ಯಸ್ಥರಾದ ಡಾ॥ ರಘುನಂದನ ಅಡಿಗ್ ರವರು ಮತ್ತು ಬ್ರಾಹ್ಮಣ ಮಹಾಸಭೆಯ ಖಜಾಂಚಿಯವರಾದ ಶ್ರೀ ವಿ.ಎಸ್. ನಾಯಕ್‌ರವರು ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ಸದರಿ ಕಾರ್ಯಕ್ರಮದ ನಿರೂಪಣೆಯನ್ನು ಡಾ॥ ಸೂರ್ಯನಾರಾಯಣ ಶರ್ಮ ಮತ್ತು ಶ್ರೀ ವೆಂಕಟೇಶ್ ದ್ವಾರಕನಾಥ್‌ರವರು ನೆರವೇರಿಸಿರುತ್ತಾರೆ.

ಶಿಬಿರದ ಪ್ರಯೋಜನವನ್ನು ನೂರಕ್ಕೂ ಹೆಚ್ಚು ಬ್ರಾಹ್ಮಣ ಸಮುದಾಯದವರು ಪಡೆದುಕೊಂಡಿರುತ್ತಾರೆ. ಗಾಯತ್ರಿ ಭವನದ ವ್ಯವಸ್ಥಾಪಕರಾದ ಶ್ರೀ ನಾಗರಾಜ್‌ರವರು ಮತ್ತು ಸಿಬ್ಬಂದಿವರ್ಗದವರು ಶಿಬಿರಕ್ಕೆ ಎಲ್ಲಾ ರೀತಿಯ ಸಹಕಾರವನ್ನು ನೀಡಿ, ಕಾರ್ಯಕ್ರಮದ ಯಶಸ್ಸಿಗೆ ಪಾತ್ರರಾಗಿರುತ್ತಾರೆ.



## ಹರಿಹರಪುರ ಶ್ರೀಗಳ ಚಾತುರ್ಮಾಸ್ಯ

# "ಶ್ರೀಮದದ್ವೈತಸಿದ್ಧಿಮಹಾವಾಕ್ಯಾರ್ಥ ಸಭೆ'






ಬೆಂಗಳೂರಿನಲ್ಲಿ ನಡೆಯುತ್ತಿರುವ ಹರಿಹರಪುರ ಶ್ರೀ ಮಠದ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಮಹಾಸ್ವಾಮಿಗಳ ಚಾತುರ್ಮಾಸ್ಯ ಸಂದರ್ಭದಲ್ಲಿ "ಶ್ರೀ ಮದದ್ವೈತಸಿದ್ಧಿ ಮಹಾವಾಕ್ಯಾರ್ಥ" ಸಭೆ ಇತ್ತೀಚೆಗೆ ನಡೆಯಿತು. ನಾಡಿನ ಹಾಗೂ ಹೊರನಾಡಿನ ಶಾಸ್ತ್ರಿ ಪಂಡಿತರಗಳು ಭಾಗವಹಿಸಿದ ಈ ಎರಡು ದಿನ ಕಾರ್ಯಕ್ರಮವು ಅತ್ಯಂತ ಅಪೂರ್ವವಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ಸ್ವಯಂ ಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳು ಆಶೀರ್ವಚನ ನೀಡುತ್ತ ಶಾಸ್ತ್ರಗಳು ಏಕಕಂಠದಿಂದ ಅದ್ವೈತ ತತ್ವ ಒಂದನ್ನೇ ಸಾರುತ್ತವೆ ಎಂದು ತಿಳಿಸಿದರು. ಈ ವಿದ್ವತ್ ಸಭೆಯಲ್ಲಿ ವೇ॥ ಬ್ರ॥ ಮಹಾಮಹೋಪದ್ಯಾಯ ಶ್ರೀ ಮಣಿ ದ್ರಾವಿಡ ಶಾಸ್ತ್ರಿಗಳು ಚೆನ್ನೈ, ಶ್ರೀ ರಾಜಾರಂ ಶುಕ್ಲವರ್ಯ ವಾರಣಾಸಿ, ಶ್ರೀ ಕೆ.ಎಸ್. ಗಣಪತಿ ಭಟ್ಟ ತಿರುಪತಿ, ಶ್ರೀ ಗಣೇಶ ಈಶ್ವರ ಭಟ್ಟ ಶೃಂಗೇರಿ, ಶ್ರೀ ಕೆ.ಎಸ್. ಸತೀಶ ಶೃಂಗೇರಿ, ಶ್ರೀ ಹರಿಧಾಇಕುಡೆ ತಿರುಪತಿ, ಶ್ರೀ ಕುವಲಯದತ್ತ ಮೈಸೂರು, ಶ್ರೀ ಎಂ.ಎಸ್. ವರದರಾಜನ್ ತಿರುಪತಿ, ಶ್ರೀ ಜಿ.ಎಸ್. ಸುರೇಶಕೃಷ್ಣ ತಿರುಪತಿ, ಶ್ರೀ ಟಿ.ಎಸ್. ಶೀಧರ ತಿರುಪತಿ ಮುಂತಾದ ವಿದ್ವಾಂಸರುಗಳು ತಮ್ಮ ವಿದ್ವತ್ ಪೂರ್ಣ ವಿಚಾರಗಳನ್ನು ಮಂಡಿಸಿದರು.

ಎರಡನೇ ದಿನ ನಡೆದ ಸಮಾರೋಪ ಸಭೆಯಲ್ಲಿ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ಉಚ್ಚನ್ಯಾಯಲಯದ ನ್ಯಾಯಮೂರ್ತಿ ಶ್ರೀ ಕೃಷ್ಣ ದೀಕ್ಷಿತ್ ಹಾಗೂ ಶ್ರೀ ಮಹಾಸಭಾ ಅಧ್ಯಕ್ಷರು ಶ್ರೀ ಅಶೋಕ ಹಾರನಹಳ್ಳಿ ಭಾಗವಹಿಸಿದ್ದರು. ನ್ಯಾಯಮೂರ್ತಿ ಶ್ರೀ ಕೃಷ್ಣ ದೀಕ್ಷಿತರವರು ಸನಾತನ ಧರ್ಮ ಹಾಗೂ ಭಾರತೀಯ ಸಂಸ್ಕೃತಿ ಶಂಕರ ಸಿದ್ಧಾಂತ ಕುರಿತು ವಿದ್ವತ್ ಪೂರ್ಣ ವಿಚಾರಗಳನ್ನು ಸಮರೋಪ ಭಾಷಣದಲ್ಲಿ ಹಂಚಿಕೊಂಡರು. ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ಸನಾತನ ಧರ್ಮ ರಕ್ಷಣೆ ಹಾಗೂ ಶಂಕರರ ತತ್ವ ಪ್ರಚಾರದಲ್ಲಿ ಬ್ರಾಹ್ಮಣರ ಜವಾಬ್ದಾರಿ ಹೆಚ್ಚಿದೆ ಎಂಬುದನ್ನು ತಿಳಿಸಿದರು. ಸಮಾರಂಭದಲ್ಲಿ ಭಾಗವಿಹಿಸಿದ ಎಲ್ಲಾ ವಿದ್ವಾಂಸರುಗಳನ್ನು ಮಹಾಸ್ವಾಮಿಗಳು ಸನ್ಮಾನಿಸಿದರು. ಚಾತುರ್ಮಾಸ್ಯ ಸಮಿತಿ ಪ್ರಧಾನ ಸಂಚಾಲಕ, ಮಹಾಸಭಾ ಉಪಾಧ್ಯಕ್ಷ ಶ್ರೀ ರಾಘವೇಂದ್ರ ಭಟ್ಟರವರು ವಂದನಾರ್ಪಣೆ ಮಾಡಿದರು.



# ರಾಯಚೂರು ಮಹಿಳಾ ವಿಭಾಗ ಸನ್ಮಾನ ಸಮಾರಂಭ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಯಚೂರು ಜಿಲ್ಲಾ ಘಟಕ ಹಾಗೂ ರಾಯಚೂರು ಮಹಿಳಾ ಜಿಲ್ಲಾ ಘಟಕದ ವತಿಯಿಂದ ಕಾರ್ಯಕ್ರಮವನ್ನು ದಿನಾಂಕ 29–08–2023ರಂದು ಶಾರದಾ ವಿದ್ಯಾನಿಕೇತನ ಶಾಲೆಯಲ್ಲಿ ಹಮ್ಮಿಕೊಂಡ ಸನ್ಮಾನ ಕಾರ್ಯಕ್ರಮದಲ್ಲಿ ಡಾಕ್ಟರ್ ಅಜಿತ್ ಕುಲಕರ್ಣಿ, ಡಾ. ಪ್ರಮೋದ್ ಕಟ್ಟಿ, ಡಾ. ಪ್ರಮೋದ್ ಕುಮಾರ್ (Raichem Medicare private limited), ಶ್ರೀನಿವಾಸ್ ಇನಾಮ್ದಾರ್ ಹಾಗೂ ನಿಸ್ವಾರ್ಥವಾಗಿ ಸಮಾಜದ ಸೇವೆಯಲ್ಲಿ ತೊಡಗಿಸಿಕೊಂಡ ವಾಸುದೇವ ವೈದ್ಯ ಮತ್ತು ಗೆಳೆಯರನ್ನು ಸನ್ಮಾನಿಸಲಾಯಿತು. ಇದೇ ಸಮಯದಲ್ಲಿ ಮಹಿಳಾ ಘಟಕದ ವತಿಯಿಂದ ಮೊಬೈಲ್ ಬಳಕೆಯಿಂದ ಆಗುವ ದುಷ್ಪರಿಣಾಮದ ಬಗ್ಗೆ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಪ್ರತಿಭಾ ಪುರಸ್ಕಾರ, ವಿಪ್ರಶ್ರೀ ಹಾಗೂ ವಿದ್ಯಾನಿಧಿ ವಿತರಣಾ ಕಾರ್ಯಕ್ರಮ ಯಶಸ್ವಿಯಾದ ಕಾರಣ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನು ಸಮರ್ಪಿಸಲಾಯಿತು.

ಕಾರ್ಯಕ್ರಮಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಬ್ರಾಹ್ಮಣರು ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು ಹಾಗೂ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.


ಜಾಹಿರಾತು

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ**

**Sri Srinivasa Nilaya Dharmika Sabha Mandira**

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ

ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

ದಕ್ಷಿಣ ಮತ್ತು ಉತ್ತರ ಭಾರತದ ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು

ಸ್ಥಳದ ಬಾಡಿಗೆ ಇರುವುದಿಲ್ಲ.

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**

# ಬ್ರಾಹ್ಮಣ ಸಂಘ, ಟಿ. ದಾಸರಹಳ್ಳಿಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವ

ದಿನಾಂಕ 03/09/2023ರಂದು ಬ್ರಾಹ್ಮಣ ಸಂಘ, ಟಿ. ದಾಸರಹಳ್ಳಿ ಇವರ ನೇತೃತ್ವದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವದ ಪ್ರಯುಕ್ತ ಪೂಜಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು, ಈ ಸಂಧರ್ಭದಲ್ಲಿ ಮಹಾಸಭೆಯ ಉಪಾಧ್ಯಕ್ಷರುಗಳಾದ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ, ಶ್ರೀ ವೈ.ಎ. ಸುಧಾಕರಬಾಬು ಹಾಗೂ ಮಹಾಸಭೆಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಕಾರ್ತೀಕ್ ಎಸ್. ಬಾಪಟ್ ಭಾಗವಹಿಸಿ ರಾಯರ ಕೃಪೆಗೆ ಪಾತ್ರರಾದರು. ಬ್ರಾಹ್ಮಣ ಸಂಘ ಟಿ ದಾಸರಹಳ್ಳಿ





ಅಧ್ಯಕ್ಷರಾದ ಶ್ರೀ ಶ್ರೀಧರ್ ಮೂರ್ತಿ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಲ್. ಜ್ವಾಲಾರತಯ್ಯ, ಹಾಗೂ ಹಲವು ಸ್ಥಳೀಯ ಬ್ರಾಹ್ಮಣ ಮುಖಂಡರು ಈ ಕಾರ್ಯಕ್ರವನ್ನು ಅತ್ಯಂತ ಅಚ್ಚುಕಟ್ಟಾಗಿ ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಸಂಗೀತ ವಿದ್ವಾನ್ ಡಾ॥ ಶ್ರೀ ಚಿಂತನಪಲ್ಲಿ ಶ್ರೀನಿವಾಸರವರು ಹಾಗೂ ಅವರ ಶಿಷ್ಯ ವೃಂದದಿಂದ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಈ ಸುಸಂಧರ್ಭದಲ್ಲಿ ಮಹಾಸಭೆಯ ಸದಸ್ಯತ್ವ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮೇಲೆ ಮಹಾಸಭೆಯಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಬಗ್ಗೆ ಹಾಗೂ ಅಧ್ಯಕ್ಷರ ಕಾರ್ಯಶೈಲಿಯ ಬಗ್ಗೆ ಎಲ್ಲರೂ ಮೆಚ್ಚುಗೆ ವ್ಯಕ್ತ ಪಡಿಸಿದರು ಹಾಗೂ ಸರಿಸುಮಾರು 50 ಕ್ಕೂ ಹೆಚ್ಚು ವಿಪ್ರಬಂಧುಗಳು ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿ ಅಭಿಯಾನವನ್ನು ಅಭೂತಪೂರ್ವವಾಗಿ ಬೆಂಬಲಿಸಿದರು.



## ಶ್ರದ್ಧಾಂಜಲಿ

### ಶ್ರೀಮತಿ ನಿವೇದಿತಾ ಶ್ರೀನಿವಾಸ್

ಶ್ರೀಮತಿ ನಿವೇದಿತಾ ಶ್ರೀನಿವಾಸ್ ಇವರು ತಮ್ಮ ನೃತ್ಯಪಯಣವನ್ನು ನಿಲ್ಲಿಸಿ ಬಾರದ ಲೋಕಕ್ಕೆ ತೆರಳಿದ್ದಾರೆ . ನಿವೇದಿತಾ ಶ್ರೀನಿವಾಸ್ ಇವರು ಖ್ಯಾತ ಭರತನಾಟ್ಯ ಮತ್ತು ಕಥಕ್ ನೃತ್ಯಪಟು. ಇವರು ತಮ್ಮ ಪತಿ, ಪುತ್ರ, ಪುತ್ರಿ ಮತ್ತು ಅಪಾರವಾದ ಶಿಷ್ಯವೃಂದವನ್ನು ಅಗಲಿದ್ದಾರೆ.

ಅವರ ದಿವ್ಯಾತ್ಮಕ್ಕೆ ನಮ್ಮ ನಮನ. ಅವರ ಮನೆಯವರಿಗೆ, ಶಿಷ್ಯವೃಂದಕ್ಕೆ ದುಃಖ ಭರಿಸುವ ಶಕ್ತಿಯನ್ನು ದಯಾಮಯ ಭಗವಂತನು ನೀಡಲಿ.

## "ಭಜನ ಕುಸುಮಾಂಜಲಿ" ಪುಸ್ತಕ ಪರಿಚಯ

ಭಾರತೀಯ ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ, ಸಾಮಾಜಿಕ ಭಾವನೆಗಳ ಪಾತ್ರ ಮಹತ್ತರವಾದುದು. ಭಕ್ತಿ ಮಾರ್ಗದ ಮೂಲಕ ಸರ್ವಶಕ್ತಿ, ಸರ್ವವ್ಯಾಪಿ, ಸರ್ವಾಂತರ್ಯಾಮಿ ಭಗವಂತನನ್ನು ತಲುಪಲು ಭಜನೆಯೇ ಉತ್ತಮ ಮಾರ್ಗ. ಜಾತಿ, ಕುಲ, ಲಿಂಗ, ದೇಶ, ಮತ ಭೇದಗಳಿಲ್ಲದೇ, ಎಲ್ಲರೂ ದೇವಭಜನೆ ಮಾಡಿ, ಮನಸ್ಸಿನ ಪ್ರಸನ್ನತೆಯನ್ನು, ಬುದ್ಧಿಯ ಪ್ರಕಾಶವನ್ನು, ನಿರಂಹಕಾರಿಗಳಾಗಿ ಆತ್ಮಸಂತೋಷ, ಆತ್ಮತೃಪ್ತಿ ಹೊಂದಿದ್ದಾರೆ. ಜೀವನದ ಜಂಜಾಟ, ತಾಪತ್ರಯಗಳಿಂದ ಪೂರ್ಣವಾಗಿ ಬಿಡುಗಡೆ ಹೊಂದಲು ಭಗವಂತನ ನಾಮಸ್ಮರಣೆ, ಮಂತ್ರ ಉಚ್ಚಾರಣೆ ಅತಿಶಯಪ್ರಾಯವಾಗಿದ್ದು, ಸಾಧು-ಸಂತರು, ಸಜ್ಜನರು, ಜ್ಞಾನಿಗಳು ಅದನ್ನು ಒಪ್ಪಿದ್ದಾರೆ. ಮಹರ್ಷಿ ನಾರದರು ರಚಿಸಿದ "ನಾರದ ಭಕ್ತಿ ಸೂತ್ರ"ಗಳಲ್ಲಿ ಭಕ್ತಿಯನ್ನು **'ಪರಮಪ್ರೇಮರೂಪಾ, ಅಮೃತ ಸ್ವರೂಪಾ'** ಎಂದು ಪ್ರಶಂಸಿದ್ದು, ಮಹರ್ಷಿಗಳು **ಮತ್ತೋಭವ, ಉನ್ಮತ್ತೋಭವ, ಪ್ರಮತ್ತೋಭವ ಭಕ್ತಿ ರಸಾಯನೇ,** ಎಂದು ಸೂಚಿಸಿ, ಭಕ್ತಿ ಎಂಬ ರಸಾಯನದಲ್ಲಿ, ಮತ್ತನಾಗು ಹುಚ್ಚನಾಗು, ಪ್ರಮತ್ತನಾಗು, ಭಕ್ತಿರಸ ಪ್ರವಾಹದಲ್ಲಿ, ಮುಳುಗಿ ಏಳು, ಎಂದಿದ್ದಾರೆ. ಆಸಕ್ತರು ಒಂದೆಡೆ ಕಲೆತು ಸಾಮಾಜಿಕವಾಗಿ ಭಜನೆ ಮಾಡುವುದರಿಂದ ಭಗವಂತನ ವೈವಿಧ್ಯಮಯ ನಾಮ-ರೂಪಗಳನ್ನು, ಲೀಲಾ-ವಿನೋದಗಳನ್ನು, ಸಗುಣ-ನಿರ್ಗುಣ ಭಾವಗಳನ್ನು ಅರಿಯಲು ಸಾಧ್ಯವಾಗುತ್ತದೆ. ಮಾನವ ಜನುಮ ಸಾರ್ಥಕವಾಗುತ್ತದೆ.

ಈ ಹಿನ್ನೆಲೆಯಲ್ಲಿ ತರೀಕೆರೆ ಭಜನೆ ಸಂಪ್ರದಾಯಕ್ಕೆ ನೂರು ವರ್ಷಗಳ ಇತಿಹಾಸ-ಭವ್ಯ ಪರಂಪರೆಯಿದ್ದು ವಾರಾಂತ್ಯದಲ್ಲಿ, ಹಬ್ಬ-ಉತ್ಸವಗಳಲ್ಲಿ ಕಾರ್ತಿಕ ಮಾಸದಲ್ಲಿ ಭಜನೆ ನಡೆಯುತ್ತಿದ್ದು, ಇಡೀ ತರೀಕೆರೆ ಸಮುದಾಯದ ಮೇಲೆ ಧನಾತ್ಮಕ ಪರಿಣಾಮ ಬೀರಿದ್ದು ವಿಶೇಷ. ಅಲ್ಲಿ ಏಳು ಹೆಡೆಗಳಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಾಲಯ ನಿರ್ಮಾಣವಾಗಿ ಶನಿವಾರ ಭಜನೆಗಳು ಪ್ರಸಿದ್ಧಿಯಾಗಿದ್ದವು. ಕೆಡ್ಲೂರು ಸೀನಪ್ಪನವರ ಬೀದಿ ಭಜನೆ ಪ್ರಖ್ಯಾತವಾಗಿ, ಶ್ರೀಮತಿ ಶಾರದಾ ಮಂಜುನಾಥ್ ಅವರು ಹಲವಾರು ಭಜನೆಗಳಿಗೆ ರಾಗ ಸಂಯೋಜನೆ ಮಾಡಿದ್ದು, ಎಲ್ಲವನ್ನೂ ಒಟ್ಟಿಗೆ ಸೇರಿಸಿ, "ಭಜನಾ ಕುಸುಮಾಂಜಲಿ" ಎಂಬ ಹೊತ್ತಿಗೆಯನ್ನು ಮಂಡಳಿ ಪ್ರಕಟಿಸಿದೆ. ಇದರಲ್ಲಿ 108 ಭಜನೆಗಳಿದ್ದು, ತರೀಕೆರೆ ಸಾಂಪ್ರದಾಯಕ ಭಜನೆ (7), ಗಣೇಶ (7), ದೇವಿ (07), ಗುರು ಮಹಿಮೆ (8), ಶಿವ (5), ಶ್ರೀರಾಮ-ಶ್ರೀಕೃಷ್ಣ(30), ಶ್ರೀ ಸುಬ್ರಹ್ಮಣ್ಯ (32) ಮುಡಿಪಾಗಿದ್ದು, ಮಂಗಳ-ಆರತಿಯೂ (11) ಸೇರಿದೆ. ಸಂಸ್ಕೃತ, ಕನ್ನಡ, ಹಿಂದಿ ಭಾಷೆಗಳಲ್ಲಿರುವ ಈ ಭಜನೆಗಳಲ್ಲಿ ಕೆಲವು ಕಾನಡಾ, ಮಧ್ಯಮಾವತಿ, ಆರಭಿ, ಷಣ್ಮುಖಪ್ರಿಯ, ಯಮನ್, ಪಹಾಡಿ, ರೇವತಿ, ಆನಂದಭೈರವಿ, ನೀಲಾಂಬರಿ, ಶ್ರೀರಾಗಗಳಲ್ಲಿವೆ. ಖ್ಯಾತ ಸಾಧು ಸಂತರಾದ ಕಬೀರ್, ಪುರಂದರದಾಸರು, ಕನಕದಾಸರು, ತ್ಯಾಗರಾಜರು, ವಿದ್ಯಾಪ್ರಕಾಶಾ ನಂದಗಿರಿ, ಮಧ್ಯಕಾಲೀನ ಹಾಗೂ ಆಧುನಿಕ ಚಿಂತಕರಾದ ಡಾ. ಡಿ.ವಿ.ಜಿ., ಬಸವಣ್ಣ, ಪುರುಷೋತ್ತಮಾನಂದಜಿ, ಎಸ್.ಕೆ. ರಾಮಚಂದ್ರರಾವ್ ಮುಂತಾದವರ ಸದುಕ್ತಿಗಳನ್ನು, ಶ್ರೀ ಶಂಕರ ಭಗವತ್ಪಾದರ ನಿರ್ವಾಣಷಟ್ಕ, ವೇದೋಪನಿಷತ್ತುಗಳ ಶಾಂತಿ ಮಂತ್ರಗಳನ್ನು ಸೇರ್ಪಡಿಸಲಾಗಿದೆ. ಹೊಸಕೆರೆ ಚಿದಂಬರಯ್ಯ, ಚಿದಂಬರ ಶರ್ಮ, ಶ್ರೀಧರದಾಸ್, ಶ್ರೀಮತಿ ಶಾರದಮ್ಮ ಶಂಕರರಾವ್ ರಚಿಸಿದ ಭಜನೆಗಳು ಹೃದ್ಯವಾಗಿವೆ. ಆಕಾಶವಾಣಿ ಕಾರ್ಯಕ್ರಮ ವಿಭಾಗ ಮುಖ್ಯಸ್ಥರಾದ ಡಾ. ಎಚ್.ಎಸ್. ಶಂಕರನಾರಾಯಣ ಅವರ ಅರ್ಥಪೂರ್ಣ ಮುನ್ನುಡಿ, ಪ್ರೊ.ಎಚ್.ಎಸ್. ಸೂರ್ಯನಾರಾಯಣ ಸ್ವಾಮಿಯವರ ಸೊಗಸಾದ ಬೆನ್ನುಡಿ, ಶ್ರೀವತ್ಸ ಭಜನಾ ಮಂಡಳಿ ಅಧ್ಯಕ್ಷೆ ಶ್ರೀಮತಿ ಲತಾ ಗೋಪಾಲಕೃಷ್ಣ ಅವರ ಅನಿಸಿಕೆ ಪುಸ್ತಕದ ಮೆರಗನ್ನು ಹೆಚ್ಚಿಸಿದೆ.

ತಮ್ಮ 92ನೇ ವಯಸ್ಸಿನವರೆಗೂ ಭಜನೆಗಳನ್ನು ಭಕ್ತಿಯಿಂದ ಹಾಡಿ, ಧನ್ಯರಾಗಿ ಇತ್ತೀಚಿಗೆ ದಿವಂಗತರಾದ ಹೆಚ್.ಪಿ. ಶಾರದಮ್ಮ, ಅವರ ಪತಿ ತರೀಕೆರೆ ಸ್ವಾಮಿ ಡಾಕ್ಟರ್ ಎಂದು ಪ್ರಸಿದ್ಧರಾದ ಡಾ. ಎಚ್. ಎಸ್. ವೆಂಕಟರಾವ್ ಅವರ ಸವಿನೆನಪಿನಲ್ಲಿ ಅವರು ಮಕ್ಕಳ ಪುಸ್ತಕ ಪ್ರಕಟಿಸಿ ಕೃತಕೃತ್ಯತೆ ಹೊಂದಿದ್ದಾರೆ. ದೋಷರಹಿತ, ಅಚ್ಚುಕಟ್ಟು ಮುದ್ರಣ, ಆಕರ್ಷಕವಾದ ಸಂಗ್ರಹಯೋಗ್ಯವಾದ ಈ ಅಪರೂಪದ ಪುಸ್ತಕವನ್ನು ವಿಪ್ರಭಕ್ತರು ಓದಿ, ಅವರ್ಣೀಯ ಆನಂದ, ಪ್ರಯೋಜನವನ್ನು ಹೊಂದಬಹುದು.

**ಪುಸ್ತಕ : ಭಜನ ಕುಸುಮಾಂಜಲಿ**

**ಲೇಖಕರು** : ಶ್ರೀ ಸುಬ್ರಹ್ಮಣ್ಯಸ್ವಾಮಿ ಭಜನಾ ಮಂಡಳಿ, ತರೀಕೆರೆ, ದೇವರಪ್ಪ ರಸ್ತೆ, ಚಿಕ್ಕಮಗಳೂರು-577228.

**ಪರಿಷ್ಕೃತ ಮುದ್ರಣ** : ಮೇ 2013, **ಪುಟಗಳು** : 176, **ಕಾಣಿಕೆ** : 101 ರೂಪಾಯಿಗಳು.

**- ಪ್ರೋ. ಎಂ.ಕೆ. ಶ್ರೀಧರ್**

**ಜಾಹಿರಾತು**

ಸಂಧ್ಯಾ ಸುರಕ್ಷ ಟ್ರಸ್ಟ್,
ಜಿಲ್ಲಾ ಬ್ರಾಹ್ಮಣ ಮಹಾಸಭಾ (ರಿ).,

**ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧ ಕೇಂದ್ರ**

**ದೇವಯ್ಯನಹುಂಡಿ ಮುಖ್ಯರಸ್ತೆ, ಶ್ರೀರಾಂಪುರ 2ನೇ ಹಂತ, ಮೈಸೂರು- 570023**

**ಹೊಸ ಆವಿಷ್ಕಾರದೊಂದಿಗೆ ನಿಮ್ಮ ಅನುಕೂಲಕ್ಕಾಗಿ**

ಶ್ರಿಮತಸ್ಥ ಬ್ರಾಹ್ಮಣ ಬಂಧುಗಳು, ಪೂರ್ವಿಕರ ಎಲ್ಲಾ ಶ್ರಾದ್ಧ ಕರ್ಮಾಧಿಗಳನ್ನು (ವೈದಿಕ)ಅಪರ, ಪೂರ್ವ, ಅಂತ್ಯೇಷ್ಠಿ ಕರ್ಮಾಧಿಗಳನ್ನು ನುರಿತ ಆಯಾ ಪಂಗಡದ ಪುರೋಹಿತರಿಂದ, ಆಯಾ ಪಂಗಡದ ಅಡುಗೆಯೊಂದಿಗೆ ನುರಿತ ಅಡಿಗೆಯವರಿಂದ ನಡೆಸಲಾಗುವುದು ಹಾಗೂ ಬೆಳಗ್ಗೆ ಪ್ರಾತಃ ಕಾಲ 6 ರಿಂದ 6-30 ವೇದ ಪಠಣ, 6-30 ರಿಂದ 7-00 ವರೆಗೆ ಭಗವದ್ಗೀತ ಪಾರಾಯಣ, ಸಾಯಂಕಾಲ, ಸಂಧ್ಯಾವಂದನೆ, ಕಲಿಕೆ, ಪಾರಾಯಣ, ದೇವಿ ಶಾಕಂಭರಿಗೆ ಮಹಾಮಂಗಳಾರತಿ ಮತ್ತು ಸುಸಜ್ಜಿತವಾದ 100 ಆಸನಗಳ ಹಾಲಿನಲ್ಲಿ ಹುಟ್ಟು ಹಬ್ಬ ಆಚರಣೆ, ಸೀಮಂತ, ನಾಮಕರಣ ಇತ್ಯಾದಿ ಸಣ್ಣ ಕಾರ್ಯಕ್ರಮಗಳಿಗೆ **ಕೊಠಡಿ ಸಹಿತ ಎಲ್ಲಾ (ಊಟ, ತಿಂಡಿ, ಇತರೆ) ವ್ಯವಸ್ಥೆಯೊಂದಿಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆ ಮಾಡಿಕೊಡಲಾಗುವುದು.**

**ವಿ.ಸೂ. ಅಚ್ಚುಕಟ್ಟಾದ ಬ್ರಾಹ್ಮಣ ಅಡಿಗೆಯವರಿಂದ ಕ್ಯಾಟರಿಂಗ್ ವ್ಯವಸ್ಥೆಯಿದೆ.**

**(ಯಾವುದೇ ತರವಾದ ಬಾಡಿಗೆ ಇರುವುದಿಲ್ಲ)**

**ಸಂಪರ್ಕಿಸ ಬೇಕಾದ ದೂರವಾಣಿ ಸಂಖ್ಯೆ: 8088799540**

**8861998817**

**ಡಾ. ಬಿ.ಆರ್.ನಟರಾಜ್ ಜೋಯಿಸ್**

**ಶ್ರೀ ಶಾಕಂಭರಿ ಧಾರ್ಮಿಕ ಶ್ರದ್ಧ ಕೇಂದ್ರ**

# ಬಡವರ ಪಾಲಿನ 'ಸಂಜೀವಿನಿ' ಡಾ|| ಆರ್.ವಿ. ಜೋಶಿ

– ಪ್ರಹ್ಲಾದ ಗುಡಿ, ವಕೀಲರು, ಸಿಂಧನೂರು



ಸರಳ ಸ್ವಭಾವ, ದೊಡ್ಡವರು–ಸಣ್ಣವ, ಬಡವ–ಶ್ರೀಮಂತ, ಪಂಡಿತ–ಪಾಮರರೆಂಬ ಭೇದ–ಭಾವವಿಲ್ಲದೆ ಎಲ್ಲರೊಂದಿಗೆ ಬೆರೆಯುವ, ಪಾದರಸ ಸ್ವಭಾವ ಹೊಂದಿರುವ ಡಾ|| ಆರ್.ವಿ.ಜೋಶಿ ಸಿಂಧನೂರು ತಾಲೂಕಿನ ಎಲ್ಲ ಜನತೆಯ 'ಜೋಶಿ ಡಾಕ್ಟರ್' ಎಂದೇ ಮನೆಮಾತಾಗಿರುವರು.

'ವೈದ್ಯೋ ನಾರಾಯಣೋ ಹರಿಃ' ಎಂಬುದು ಜನಜನಿತವಾದ ಉಕ್ತಿಯೊಂದಿದೆ. ವೈದ್ಯರನ್ನು ನಾರಾಯಣನ ಸ್ವರೂಪದಲ್ಲಿ ನೋಡುವ ಒಳಗಣ್ಣುಗಳು ಇವೆ. ಅದಕ್ಕೆ ಅನ್ವರ್ಥಕವೆಂಬಂತೆ ಡಾ|| ಜೋಶಿ ಸಿಂಧನೂರಿನಲ್ಲಿ 1972 ರಿಂದ ವೈದ್ಯ ವೃತ್ತಿಯನ್ನು ಇಲ್ಲಿಯವರೆಗೆ ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ.

ಮೂಲತಃ ರೋಣ ತಾಲೂಕಿನ ನಿಡಗುಂದಿ ಗ್ರಾಮದಲ್ಲಿ ಜೋಶಿ ಕುಟುಂಬದ ಪೂರ್ವಜರು ಇದ್ದರು. ಮನೆತನದ ಜೋಯಿಸ ವೃತ್ತಿಯನ್ನು ಮುಂದುವರೆಸುವ ದೃಷ್ಟಿಯಿಂದ ಗಜೇಂದ್ರಗಡಕ್ಕೆ ಬಂದರು. ತಂದೆ ವೆಂಕಣ್ಣಾಚಾರ್ಯ, ತಾಯಿ ಪದ್ಮಾವತಿ ಬಾಯಿ ಅವರ ಜೇಷ್ಠ ಪುತ್ರನಾಗಿ ದಿನಾಂಕ: 22–05–1942 ರಂದು ಹನುಮಸಾಗರದಲ್ಲಿ ರಾಘವೇಂದ್ರಾಚಾರ್ಯ ಜೋಶಿ (ಆರ್.ವಿ.ಜೋಶಿ) ಜನಿಸಿದರು, ತಮ್ಮಂದಿರಾದ ಶ್ರೀಕಾಂತಾಚಾರ್ಯ, ಲಕ್ಷ್ಮಣಾಚಾರ್ಯರವರ ಮುದ್ದಿನ ಅಣ್ಣನಾಗಿ ಬೆಳೆದರು. ಇವರ ತಂದೆ ವೆಂಕಣ್ಣಾಚಾರ್ಯ ಜೋತಿಷ್ಯ ಶಾಸ್ತ್ರ ಹಾಗೂ ಪೌರೋಹಿತ್ಯದಲ್ಲಿ ಪ್ರಕಾಂಡ ಪಾಂಡಿತ್ಯವನ್ನು ಹೊಂದಿದ್ದರು.

ಗಜೇಂದ್ರಗಡದಲ್ಲಿ 1 ರಿಂದ 7ನೇ ತರಗತಿಯವರೆಗೆ ಓದುವಾಗ ತಂದೆಯೊಂಡನೆ ಯಾಜ್ಞಿಕಕ್ಕೆ ಹೋಗುತ್ತಿದ್ದರು. ಇವರ ತಾಯಿಯ ತವರುಮನೆ ಹನುಮಸಾಗರ. ಇವರ ಹೆಣ್ಣಜ್ಜ ಹನುಮಂತಾಚಾರ್ಯ ರಾಜಪುರೋಹಿತ ಸಹ ಯಾಜ್ಞಿಕದಲ್ಲಿ ಆ ಭಾಗದಲ್ಲಿ ಉತ್ತಮ ಹೆಸರು ಮಾಡಿದ್ದರು. ತಂದೆ ಹಾಗೂ ಹೆಣ್ಣಜ್ಜನ ಮಾರ್ಗದರ್ಶನದಲ್ಲಿ ಪೌರೋಹಿತ್ಯ ಹಾಗೂ ಯಾಜ್ಞಿಕವನ್ನು ಕಲಿತರು.

7ನೇ ತರಗತಿಯ ನಂತರ ಮನೆಯ ಆರ್ಥಿಕ ಪರಿಸ್ಥಿತಿ ನಿಭಾಯಿಸಲು ಗಜೇಂದ್ರಗಡದಲ್ಲಿಯೇ ಮನೆತನದ ಯಾಜ್ಞಿಕ ವೃತ್ತಿಯನ್ನು ಆರಂಭಿಸಲು ಪಾಲಕರು ಒತ್ತಾಯಿಸಿದಾಗ ಇಷ್ಟೇ ವಿದ್ಯೆಯಿಂದ ಏನು ಸಂಪಾದಿಸಲು ಆಗುವುದಿಲ್ಲ, ಜೀವನ ನಿರ್ವಹಣೆಯು ದುಸ್ತರವೆಂದು ತಿಳಿದು ವಿದ್ಯಾಕಾಂಕ್ಷಿಯಾಗಿ ಮನೆಯಲ್ಲಿ ಯಾರಿಗೂ ಹೇಳದೆ ಧಾರವಾಡಕ್ಕೆ ತೆರಳಿ ಅಲ್ಲಿ ಪಂಡಿತ ಬಾಲಚಂದ್ರ ಶಾಸ್ತ್ರಿಗಳು ನಡೆಸುತ್ತಿದ್ದ ಸಂಸ್ಕೃತ ಪಾಠಶಾಲೆಗೆ ಸ್ವಯಂ ಪ್ರಯತ್ನದಿಂದ ಸೇರಿಕೊಂಡರು. ಇತ್ತ ಮನೆಯಲ್ಲಿ ಎಲ್ಲರೂ ತೀವ್ರ ಚಿಂತಾಕ್ರಾಂತರಾಗಿದ್ದರು. ಒಂದು ವಾರದ ನಂತರ ಧಾರವಾಡದ ಹವಾಮಾನ ಒಗ್ಗದ ಕಾರಣ ಅನಾರೋಗ್ಯಕ್ಕೆ ತುತ್ತಾಗಿ ಅವರೇ ಸ್ವತಃ ತಂದೆ–ತಾಯಿಯವರಿಗೆ ಕಾಗದ ಬರೆದು ಧಾರವಾಡಕ್ಕೆ ಹೇಳದೆ–ಕೇಳದೆ ಬಂದಿದ್ದಕ್ಕೆ ಕ್ಷಮೆ ಯಾಚಿಸಿ, ತಂದೆ–ತಾಯಿಯವರ ಆಶೀರ್ವಾದ ಪಡೆದು ಅಲ್ಲಿಯೇ ವಿದ್ಯೆಯನ್ನು ಮುಂದುವರೆಯಿಸಿದರು.

ಧಾರವಾಡದ ಸಂಸ್ಕೃತ ಪಾಠಶಾಲೆಯ ಇತರೆ ವಿದ್ಯಾರ್ಥಿಗಳ ಸಹಕಾರದಿಂದ ವೈದಿಕ ವಿದ್ಯೆಯ ಜೊತೆಗೆ ಲೌಕಿಕ ವಿದ್ಯೆಯನ್ನು ಮುಂದುವರೆಸುವ ಹಂಬಲದಿಂದಾಗಿ ನೇರವಾಗಿ ಎಸ್.ಎಸ್. ಎಲ್.ಸಿ. ಪರೀಕ್ಷೆಯನ್ನು ಬರೆದರು. ನಂತರ ಸತತ ಪ್ರಯತ್ನ ಹಾಗೂ ಕಠಿಣ ಪರಿಶ್ರಮದಿಂದಾಗಿ ಆಯುರ್ವೆದ ವೈದ್ಯ ಶಾಸ್ತ್ರದ 3 ವರ್ಷಗಳ ಡಿಪ್ಲೋಮಾ ಕೋರ್ಸನ್ನು (ಡಿ.ಎಸ್.ಎ.ಸಿ) ಹುಬ್ಬಳ್ಳಿಯಲ್ಲಿ ಪೂರ್ಣಗೊಳಿಸಿದರು. ಮೈಸೂರಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ತೆರಳಿ ಆಯುರ್ವೇದ ವೈದ್ಯಕೀಯ ಪದವಿ (ಬಿ.ಎಸ್.ಎ.ಎಂ.) ಯನ್ನು 1971 ರಲ್ಲಿ ಪೂರೈಸಿದರು.

ಆಯುವೇದ ಪದ್ಧತಿಯ ವೈದ್ಯಕೀಯ ತರಬೇತಿ ಪಡೆದುಕೊಂಡ ನಂತರ ತಂದೆಯ ಜ್ಯೋತಿಷ್ಯದ ಆಶಯದಂತೆ ಮಂತ್ರಾಲಯಕ್ಕೆ ತೆರಳಿ ಗುರುರಾಯರ ದರ್ಶನ ಪಡೆದು ಸಿಂಧನೂರು ತಾಲೂಕಿಗೆ ಬಂದು 1972 ರಲ್ಲಿ ವೈದ್ಯಕೀಯ ಸೇವೆಯನ್ನು ಆರಂಭಿಸಿದರು. ಮೊದಲು ಹಳೇ ಬಜಾರದ ಚಿಟಗಿ ಬಿಲ್ಡಿಂಗ್‌ನಲ್ಲಿ ದವಾಖಾನೆಯನ್ನು ತೆರೆದರು. ಆಗ ಬ್ರಾಹ್ಮಣ ಸಮಾಜದ ಮುಖಂಡರಾಗಿದ್ದ ಎನ್. ಸ್ವಾಮೀರಾವ ವಕೀಲರು, ಕರಡಕಲ್ ಶ್ರೀನಿವಾಸರಾವ ವಕೀಲರು, ಶೇಷಗಿರಿರಾವ ಚನ್ನಳ್ಳಿ, ಕೃಷ್ಣಾಚಾರ್ಯ ಪುರೋಹಿತ, ಗೋವಿಂದಾಚಾರ್ಯ ಪುರೋಹಿತ ಹೀಗೆ ಹಲವಾರು ಹಿರಿಯರು ಜೋಶಿ ಡಾಕ್ಟರ್‌ರ ವೃತ್ತಿಗೆ ಸ್ಪಂದಿಸಿ ಸಹಕರಿಸಿದರು. ಚನ್ನಳ್ಳಿ ಕುಟುಂಬ, ಕುಲಕರ್ಣಿ ಕುಟುಂಬಗಳೇ ಹೆಚ್ಚಿರುವ ಬ್ರಾಹ್ಮಣರ ಓಣಿಯಲ್ಲಿ ಎಲ್ಲರೂ ಜೋಶಿ ಡಾಕ್ಟರರನ್ನು ಹಾಗೂ ಅವರ ಸೇವೆಯನ್ನು ಪ್ರೀತಿಯಿಂದ ಪಡೆದುಕೊಂಡರು. ಅಷ್ಟೇ ಅಲ್ಲ ಅವರನ್ನು ತಮ್ಮ ಕುಟುಂಬದ ಸದಸ್ಯರೆಂದೇ ಎಲ್ಲರೂ ಮುಕ್ತ ಮನಸ್ಸಿನಿಂದ ಅಪ್ಪಿಕೊಂಡದ್ದು ಇಲ್ಲಿನ ಬ್ರಾಹ್ಮಣ ಸಮಾಜದ ಹೆಗ್ಗಳಿಕೆಯಾಗಿದೆ. 1974 ರ ಮೇ 30 ರಂದು ಹುನಗುಂದದ ಪ್ರತಿಷ್ಠಿತ ಗಿರಿಭಟ್ ಜೋಶಿಯವರ ಕೊನೆಯ ಪುತ್ರಿ ಗೋದಾವರಿ ಅವರೊಂದಿಗೆ ಡಾಕ್ಟರ್‌ರವರು ಸಪ್ತಪದಿ ತುಳಿದರು. ಗೋದಾವರಿಬಾಯಿ ಡಾಕ್ಟರ್ ಮನೆಗೆ ಬಂದಮೇಲೆ ಸುಧಾಬಾಯಿಯಾಗಿ ಡಾಕ್ಟರ್‌ರ ಬದುಕಿನಲ್ಲಿ ಭಾಗ್ಯದ ಬೆಳಕಿನ ಸುಧೆಯಾಗಿ ಮನೆತನವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಅವರಿಗೆ ವಿಜಯಕುಮಾರ (ಪುಟ್ಟಣ್ಣ), ಮಂದಾಕಿನಿ (ಗೌರಿ) ಹಾಗೂ ಉಷಾ ಎಂಬ ಮೂರು ಮಕ್ಕಳು ಜನಿಸಿದರು. ತಂದೆಯ ಮಾರ್ಗದಲ್ಲಿಯೇ ಅವರ ಮಗ ಬಿ.ಎ.ಎಂ.ಎಸ್. ಪದವಿ ಪಡೆದು ತಂದೆಯ ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವೆ ಮುಂದುವರೆಸಿದ್ದಾರೆ.

ಡಾಕ್ಟರ್ ತಮ್ಮ ಆರಂಭದ ವೈದ್ಯಕೀಯ ವೃತ್ತಿಯ ದಿನಗಳಲ್ಲಿ ಬೆಳಗಿನ ಜಾವ ಹಾಗೂ ರಾತ್ರಿಯ ಬಿಡುವಿನ ವೇಳೆಯಲ್ಲಿ ಸೈಕಲ್‌ನಲ್ಲಿ ಹಳ್ಳಿಗಳಿಗೆ ತೆರಳಿ ವೈದ್ಯಕೀಯ ಸೇವೆಯನ್ನು ನೀಡಿದರು. ಆಗ ಅನೇಕರು ಇವರಿಗೆ ಹತ್ತಿರವಾದರು. ಕೆಲ ಹಳ್ಳಿಗಳಲ್ಲಿ ಡಾಕ್ಟರ್ ಬರುವ ವೇಳೆಯಾಗಿದೆ ಎಂದು ರೋಗಿಗಳು ಕಾಯುತ್ತಿದ್ದ ಸನ್ನಿವೇಶಗಳು ಇದ್ದವು. ನಂತರ ವೃತ್ತಿ ಬಲಿತಂತೆಲ್ಲಾ ಸೈಕಲ್ ಹೋಗಿ ಸ್ಕೂಟರ್, ಸೈಕಲ್ ಮೋಟಾರ್‌ಗಳ ಮೂಲಕ ಗ್ರಾಮೀಣ ಸೇವೆ ಹಾಗೂ ನಗರದ

ಕ್ಲಿನಿಕನಲ್ಲಿ ಸೇವೆ ಮುಂದುವರೆಯಿತು.

ಚಾವಡಿ ಮಾರುತಿ ದೇವಸ್ಥಾನದ ಎದುರಿಗೆ ಇವರ ಆಸ್ಪತ್ರೆ ಬಂದ ನಂತರ ಜೋಶಿ ಡಾಕ್ಟರ್ ಕೈಗುಣಕ್ಕೆ ಮಾರು ಹೋಗದ ರೋಗಿಗಳೇ ಇರಲಿಲ್ಲ. ಹಣ ಕೊಟ್ಟವರು ಬಂತು, ಕೊಡದವರೂ ಬಂತು, ನಾಳೆ ಕೊಡುತ್ತೇನೆ, ಸಂತೆ ದಿನ ಮಂಗಳವಾರ ತಂದು ಕೊಡುತ್ತೇನೆ ಎಂದು ಹೇಳಿ ಇವರಿಂದ ಚಿಕಿತ್ಸೆ ಹಾಗೂ ಔಷಧಿ, ಗುಳಿಗೆಗಳನ್ನು ಕೊಂಡೊಯ್ಯುತ್ತಿದ್ದ ರೋಗಿಗಳು ಇವರ ಸೇವೆಯನ್ನು ಬಾಯಿತುಂಬಾ ಹರಿಸಿದರು. ಜೋಶಿ ಡಾಕ್ಟರ್ ದವಾಖಾನೆಯಲ್ಲಿ ಇಲ್ಲದಿದ್ದರೆ ಮರುದಿನ ಬಂದಾದರೂ ತೋರಿಸಿಕೊಂಡು ಹೋಗುತ್ತಿದ್ದರೇ ವಿನಃ ಬೇರೆ ವೈದ್ಯರಲ್ಲಿ ಅವರ ರೋಗಿಗಳು ಹೋಗುತ್ತಿರಲಿಲ್ಲ ಎಂಬುದು ಅವರ ವೃತ್ತಿ ಬದ್ಧತೆಗೆ ಸಾಕ್ಷಿಯಾಗಿತ್ತು.

ಸಂಜೆ ಅವರ ಆಸ್ಪತ್ರೆಯಲ್ಲಿ ಅವರ ಆತ್ಮೀಯ ಒಡನಾಡಿಗಳಾಗಿದ್ದ ಕೃಷ್ಣಾಚಾರ್ಯ ಬಳಗಾನೂರು, ದಿ॥ ತಿರುಮಲರಾವ ಕುಲಕರ್ಣಿ ಮಾಸ್ತರ, ದಿ॥ ಪ್ರಾಣೇಶಾಚಾರ್ಯ ಪುರೋಹಿತ, ದಿ॥ ಒಣಗೇರಿ ತಿರುಮಲರಾವ ದೇಶಪಾಂಡೆ, ದಿ॥ ದತ್ತುರಾವ ಚನ್ನಳ್ಳಿ, ಟಿ.ಎಸ್. ಪಾಟೀಲ ಹೀಗೆ ಅನೇಕರು ಬಂದು ವೈದ್ಯರ ಬಿಡುವಿನ ವೇಳೆಯಲ್ಲಿ ಸಾತ್ವಿಕ ಹರಟೆಯೊಂದಿಗೆ ಚಹಾ ಹೀರಿ ಹೋಗುತ್ತಿದ್ದರು.

ಜೋಶಿ ಡಾಕ್ಟರ್‌ರ 40 ವರ್ಷಗಳ ಆಪ್ತಮಿತ್ರ ಎಂ.ಕೆ.ಗೌರಕರ ಅವರ ಅಣ್ಣನಂತೆ ಇರುವರು. ಈಗಲೂ ಹೆಗಲಿಗೆ ಹೆಗಲು ಕೊಟ್ಟು ಬದುಕಿರುವ ನಿಷ್ಕಲ್ಮಷ ಸ್ನೇಹಿತರು. ಇಬ್ಬರ ಮನೆಯಲ್ಲಿ ಯಾವುದೇ ಕಾರ್ಯಕ್ರಮಗಳಾಗಲೀ ಒಬ್ಬರಿಗೊಬ್ಬರು ಬಂಧುಗಳಿಗಿಂತ ಹೆಚ್ಚಾಗಿ ಕೆಲಸ ಮಾಡಿ ಆದರ್ಶ ಜೋಡಿಗಳು ಎಂಬ ಹೆಸರನ್ನು ಪಡೆದಿದ್ದಾರೆ. ಜೋಶಿ ಡಾಕ್ಟರ್ ನನ್ನ ಬದುಕಿನ ಭಾಗವಾಗಿದ್ದಾರೆ. ಅವರ ನಿಸ್ಪೃಹ ಪ್ರೀತಿ ನನ್ನನ್ನು ಯಾವಾಗಲೂ ಅವರೆಡೆಗೆ ಹೋಗುವಂತೆ ಪ್ರೇರೆಪಿಸುತ್ತದೆ ಎನ್ನುತ್ತಾರೆ ಎಂ.ಕೆ.ಗೌರಕರ.

ಬ್ರಾಹ್ಮಣರ ಓಣಿಯಲ್ಲಿ ಬಹುತೇಕ ಜೋಶಿ ಡಾಕ್ಟರ್‌ರ ಸೇವೆ ಪಡೆದುಕೊಳ್ಳದ ಮನೆಗಳಿಲ್ಲ. ವಿಶೇಷವಾಗಿ ಅವರು ಪ್ರಸೂತಿ ಸೇವೆಯಲ್ಲಿ ನಿಷ್ಣಾತರಾಗಿದ್ದರು. ಆ ಕಾಲದಲ್ಲಿ ಸೂಲಗಿತ್ತಿ ಫಾತೀಮಾಬಿ ಪ್ರಸೂತಿ ಕೆಲಸದಲ್ಲಿ ಜೋಶಿ ಡಾಕ್ಟರ್ ಸಂಪೂರ್ಣ ಸಹಕರಿಸಿ, ಸುಲಭ ಹೆರಿಗೆಯಾಗುವಂತೆ ನೋಡಿಕೊಳ್ಳುತ್ತಿದ್ದರು. ಸುಮಾರು 47 ವರ್ಷಗಳ ಅವರ ವೃತ್ತಿ ಜೀವನದಲ್ಲಿ ನೂರಾರು ಸುಲಭ ಹೆರಿಗೆಗಳನ್ನು ಮಾಡಿಸಿ ಎಲ್ಲ ಜನರಿಂದ ಬಡವರ ಡಾಕ್ಟರ್ ಎಂಬ ಹೆಸರನ್ನು ಪಡೆದುಕೊಂಡಿದ್ದಾರೆ ಎಂದು ಅವರ ಆತ್ಮೀಯ ಸ್ನೇಹಿತ ಮಾಧವರಾವ ಕರಡೋಣಿ ನೆನಪಿಸಿಕೊಳ್ಳುತ್ತಾರೆ. ತಾಲೂಕಾ ಬ್ರಾಹ್ಮಣ ಸಮಾಜದ ಉಪಾಧ್ಯಕ್ಷರಾಗಿ ದಶಕಗಳ ಕಾಲ ಸೇವೆ ಸಲ್ಲಿಸಿದ ಜೋಶಿ ಡಾಕ್ಟರ್ ಸಮಾಜದ ಧಾರ್ಮಿಕ ಕೆಲಸಗಳಲ್ಲಿ ಸದಾ ಕೈಜೋಡಿಸಿ ಯಥಾಶಕ್ತಿ ಆರ್ಥಿಕ ಸಹಕಾರ ನೀಡಿ ಎಲ್ಲರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ರಾಮಚಂದ್ರ ಸೇವಾ ಟ್ರಸ್ಟ್‌ನ ಟ್ರಸ್ಟಿಯಾಗಿ ಸಹ ಕಾರ್ಯ ನಿರ್ವಹಿಸಿದ್ದಾರೆ. ಸಿಂಧನೂರಿನ ವಾಸವಿ ನಗರದಲ್ಲಿ ಸುಮಾರು 15 ವರ್ಷಗಳ ಕಾಲ ನೂತನ ವಿದ್ಯಾ ಸಂಸ್ಥೆಯ ಆಶ್ರಯದಲ್ಲಿ ಹಿರಿಯ ಪ್ರಾಥಮಿಕ ಶಾಲೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಶೈಕ್ಷಣಿಕ ಸೇವೆಗೈದಿದ್ದಾರೆ.

ಡಾಕ್ಟರ್ ಜೋಶಿ ನನಗೆ ತಂದೆ ಸಮಾನರು. ಅವರ ಮನೆಯಲ್ಲಿ ಸುಮಾರು 10 ವರ್ಷಗಳ ಕಾಲ ಮನೆಮಗನಂತೆ ಇದ್ದೆ. ಅವರ ಆತ್ಮೀಯತೆ, ಮಾತೃ ಹೃದಯ, ಪ್ರೀತಿ ಎಂದಿಗೂ ಮರೆಯಲಾರೆ ಎಂದು ಭಾವುಕರಾಗಿ ಹೇಳುತ್ತಾರೆ ಕಿಶನರಾವ ಸಿದ್ರಾಂಪುರ.

ವಿಶೇಷವಾಗಿ ಸಿಂಧನೂರಿನ ಯಲ್ಲಮನಾ ದೇವಸ್ಥಾನದ ಬಳಿ ಇಂದು ಭವ್ಯವಾಗಿ ನಿರ್ಮಸಲಾಗಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಕಟ್ಟಡ ಸಮಿತಿಯ ಉಪಾಧ್ಯಕ್ಷರು ಮತ್ತು ಜಿ.ಪಿ.ಎ. ಹೋಲ್ಡರ್ ಆಗಿ ಕಾರ್ಯನಿರ್ವಹಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಸಿಂಧನೂರು ತಾಲೂಕಿನ ಸರ್ವ ಜನಾಂಗದವರ ಸಹಕಾರ ಪಡೆದು ರಾಯರ ಮೃತ್ತಿಕಾ ವೃಂದಾವನವನ್ನು ನೆಲೆಗೊಳಿಸಲು ಇವರು ತಮ್ಮ ಶಕ್ತಿಮೀರಿ ನೀಡಿದ ದೇಣಿಗೆ ಹಾಗೂ ಇವರು ಸಲ್ಲಿಸಿದ ಅಹರ್ನಿಶಿ ಸೇವೆಯನ್ನು ಎಂದಿಗೂ ಮರೆಯಲಾಗದು ಎನ್ನುತ್ತಾರೆ ಅವರ ಮತ್ತೊರ್ವ ಆತ್ಮೀಯ ಮಿತ್ರ ಮನೋಹರರಾವ ಕುಲಕರ್ಣಿ. ಜೋಶಿ ಡಾಕ್ಟರ ಕೈಗುಣ ಚೆನ್ನಾಗಿದೆ. ಅವರು ಹಸನ್ಮುಖದಿಂದ ನೋಡಿದರೆ ಸಾಕು ರೋಗಿ ಅರ್ಧ ಚೇತರಿಸಿಕೊಳ್ಳುತ್ತಾನೆ. ಅವರ ಕೈಯಲ್ಲಿ ಧನ್ವಂತರಿ ಗುಣವಿದೆ ಎಂದು ತೋರುತ್ತದೆ. ಅವರು ವೈದ್ಯಕೀಯದೊಂದಿಗೆ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಸೇವೆಗಳಲ್ಲಿ ತಮ್ಮನ್ನು ತಾವೂ ತೊಡಗಿಸಿಕೊಂಡು ಯುವಕರಿಗೆ ಆದರ್ಶ ಪ್ರಾಯರಾಗಿದ್ದಾರೆ, ಇವರು ಅಜಾತ ಶತ್ರು ಹಾಗೂ ನಿಗರ್ವಿ ಮನುಷ್ಯ ಎಂದು ವಿನೀತರಾಗಿ ಹೇಳುತ್ತಾರೆ ನ್ಯಾಯವಾದಿ ಶ್ರೀಧರ ಕುಲಕರ್ಣಿ ತುರ್ವಿಹಾಳ.

ಸಿಂಧನೂರಿನಲ್ಲಿ ರಾಘವೇಂದ್ರ ಸ್ವಾಮಿಗಳ ಮಠ ಕಟ್ಟುವಾಗ ಸುಮಾರು 10 ವರ್ಷಗಳ ಕಾಲ ನಿರಂತರ ಪರಿಶ್ರಮದ ಹಿಂದೆ ಹಲವಾರು ದಾನಿಗಳು, ಮುಖಂಡರ ಪರಿಶ್ರವಮವಿದೆ. ಅವರ ಗೆಳೆಯರ ಬಳಗದೊಂದಿಗೆ ಎಲ್ಲ ಸಮಾಜಗಳ ಮುಖಂಡರು, ದಾನಿಗಳನ್ನು ಸಂಪರ್ಕಿಸಿ ಸುಮಾರು 1 ಕೋಟಿ 45 ಲಕ್ಷದ ವೆಚ್ಚದಲ್ಲಿ ಭವ್ಯ ಹಾಗೂ ಸುಂದರ-ಸುಸಜ್ಜಿತ ಕಟ್ಟಡ ಕಟ್ಟಿಸಲು ಹಗಲಿರುಳೆನ್ನದೆ ಶ್ರಮಿಸಿದರು. ಮಠದ ಕೆಲಸಕ್ಕೆ ಹಿರಿಯರಾದ ಎಂ.ಕೆ.ಗೌರಕರ, ಮನೋಹರರಾವ ಕುಲಕರ್ಣಿ, ರಾಘವೇಂದ್ರರಾವ ಕುಲಕರ್ಣಿ, ನಬಿಸಾಬ, ಪ್ರಹ್ಲಾದಗುಡಿ ಮತ್ತೀತರರು ದುಡಿದರು. ಅದರ ಫಲವಾಗಿ ಇಂದು ರಾಯರು 'ಲೇಟಾಗಿ ಸಿಂಧನೂರಿಗೆ ಬಂದರೂ, ಲೇಟೆಸ್ಟಾಗಿ ಕಾಣುತ್ತಿದ್ದಾರೆ'. ರಾಯರು ಶ್ರೀಮಠದಲ್ಲಿ ನೆಲೆಯೂರಿದ್ದಾರೆ ಎಂದು ಅನೇಕ ಆಸ್ತಿಕರು ಹೇಳುತ್ತಿರುವುದಕ್ಕೆ ಸಾವಿರಾರು ಕಾಣದ ಕೈಗಳ ಸಹಕಾರವನ್ನು ಎಂದಿಗೂ ಮರೆಯಲಾಗುವುದಿಲ್ಲ. ತಾವು ಕಟ್ಟಡ ಸಮಿತಿಗೆ ನೆಪಮಾತ್ರಕ್ಕೆ ಉಪಾಧ್ಯಕ್ಷ. ಸರ್ವ ಭಕ್ತರ ಸಹಕಾರವೇ ಮಠದ ನಿರ್ಮಾಣಕ್ಕೆ ಕಾರಣ ಎಂದು ಡಾಕ್ಟರ್ ಜೋಶಿ ನೆನಪಿಸಿಕೊಳ್ಳುತ್ತಾರೆ. ಹೀಗೆ ಹೇಳುವ ಒಂದು ಮಾತು ಡಾ॥ ಜೋಶಿಯವರ ವಿನೀತ ಭಾವನೆಯ ದ್ಯೋತಕವಾಗಿದೆ.

ಸುಮಾರು 5 ದಶಕಗಳ ಕಾಲ ವೈದ್ಯವೃತ್ತಿಯೊಂದಿಗೆ ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಸೇವೆಯನ್ನು ಮಾಡಿದರೂ ಎಂದಿಗೂ ಪ್ರಚಾರ ಬಯಸದ ಸಾತ್ವಿಕ ಗುಣ ಹಾಗೂ ಹೃದಯ ಶ್ರೀಮಂತಿಕೆಯನ್ನು ಹೊಂದಿರುವ ಜೋಶಿ ಡಾಕ್ಟರ್ ಸಿಂಧನೂರು ತಾಲೂಕಿನ ಬಡವರ ಪಾಲಿನ ಸಂಜೀವಿನಿ' ಆಗಿದ್ದಾರೆ. ವಿದ್ಯೆ ಬಳೆಯ ವ್ಯಾಪಾರವಲ್ಲ' ಎಂಬ ಟೀಕೋಕ್ತಿಯನ್ನು ನಾಚಿಸುವಂತೆ ವೈದ್ಯಕೀಯ ಸೇವೆಯನ್ನು ಬಡ, ಅನಾಥರು, ನಿರ್ಗತಿಕರು, ಹಳ್ಳಿಯ ಹೈದರಿಗೆ ಮೀಸಲಿಟ್ಟು ಅದರಲ್ಲಿ ಭಗವಂತನ ಸೇವೆಯನ್ನು, ಶಿವನ ಆರಾಧನೆಯನ್ನು, ವಿಷ್ಣುವಿನ ಭಕ್ತಿಯನ್ನು ಮೆರೆಯುತ್ತಿದ್ದಾರೆ. ವಿಜ್ಞಾನದ ಹಂದರದಲ್ಲಿ ಬೆಳೆದರೂ 'ಶಿವಸ್ಯ ಹೃದಯಂ ವಿಷ್ಣುಃ ವಿಷ್ಣೋಚ ಹೃದಯಂ ಶಿವಃ' ಎನ್ನುವ ಮಂತ್ರವನ್ನು ಜಪಿಸುತ್ತಾ ಬದುಕಿನ ಸಮಸ್ಯೆಗಳು, ಸಂದಿಗ್ಧತೆಗಳನ್ನು ದೂರ ಮಾಡಿಕೊಳ್ಳುತ್ತಾ 'ವೈದ್ಯೋ ನಾರಾಯಣ ಹರಿಃ' ಎಂಬ ಉಕ್ತಿಗೆ ಅನ್ವರ್ಥಕವಾಗಿದ್ದಾರೆ ಡಾ. ಆರ್.ವಿ. ಜೋಶಿಯವರು. ಇವರು ಇನ್ನಷ್ಟು ಹೆಚ್ಚು ರೋಗಿಗಳ ಸೇವೆಯಲ್ಲಿಯೆ ಈಶ ಸೇವೆಯನ್ನು ಕಾಣುತ್ತಾ ಸಾರ್ಥಕ ಬದುಕನ್ನು ಕಂಡುಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆ.

**(ಡಾ. ರಮೇಶ ಸಾಗರ)**

# ವ್ಯಾಯಾಮಕ್ಕೆ ಒಂದು ಹೊಸ ಆಯಾಮ ನೀಡಿದ ಕೆ.ವಿ. ಅಯ್ಯರ್

– ಸುರೇಶ್ ಮೂನ



ಇತ್ತೀಚಿನ ವರ್ಷಗಳಲ್ಲಿ ಜನಸಾಮಾನ್ಯರಲ್ಲಿ ಅದರಲ್ಲೂ ಯುವಕ ಯುವತಿಯರಲ್ಲಿ ದೇಹಸೌಂದರ್ಯವನ್ನು ಹೆಚ್ಚಿಸುವ ಅದರಲ್ಲೂ ಸಿಕ್ಸ್ ಪ್ಯಕನ್ನು ಗಳಿಸುವ ಅಭಿಲಾಷೆ ಹೆಚ್ಚುತ್ತಿದೆ. ಇದಕ್ಕೆ ಪೂರಕವಾಗಿ ಅನೇಕ ಜಿಮ್ಗಳು ಪ್ರಾರಂಭಗೊಂಡಿವೆ. ಆದರೆ ಸುಮಾರು 90 ವರ್ಷಗಳ ಹಿಂದೆಯೇ ಈ ರೀತಿಯ ಯಾವುದೇ ಸೌಲಬ್ಯಗಳು ಇಲ್ಲದಿದ್ದರೂತಮ್ಮದೇ ಆದ ದೇಶಿಯ ವ್ಯಾಯಾಮ ಶಾಲೆಯನ್ನು ಪ್ರಾರಂಭಿಸಿ ತಮ್ಮ ಅಂಗ ಸೌಷ್ಟವವನ್ನು ಅದ್ಭುತವಾಗಿ ರೂಪಿಸಿಕೊಂಡುಭಾರತ ಮತ್ತು ವಿದೇಶಗಳಲ್ಲಿ ಹೆಸರುವಾಸಿಯಾದವರು ಕೆ.ವಿ. ಅಯ್ಯರ್ ಎಂದೇ ಜನಪ್ರಿಯರಾಗಿದ್ದ ಕೋಲಾರ ವೆಂಕಟೇಶ ಅಯ್ಯರ್. ಹಲವಾರು ದಶಕಗಳ ಕಾಲ ದೇಹದ ಮಾಂಸಖಂಡಗಳ ಕಲಾತ್ಮಕ ಬೆಳವಣಿಗೆಯ ಮೂಲಕ ಅಂಗಸೌಷ್ಟವ ಒಂದು ಕಾವ್ಯ ಎಂಬುದನ್ನು ತಮ್ಮ ದೇಹದ ಮೂಲಕವೇ ಸಾಬೀತು ಪಡಿಸಿ ದೇಹದಾಡ್ಯ ಪ್ರದರ್ಶನಗಳಿಗೆ ಒಂದು ಸಾಂಸ್ಕೃತಿಕ ಕಾರ್ಯಕ್ರಮದ ಸ್ವರೂಪವನ್ನು ಇವರು ನೀಡಿದರು. ನವನವೀನ ಚಿಕಿತ್ಸಾ ವಿಧಾನಗಳಿಂದ ಜನಸಾಮಾನ್ಯರಿಗೂ ಉಪಯುಕ್ತವಾಗಿದ್ದ ಆಗಲೇ ದೇಶ ವಿದೇಶಗಳಲ್ಲಿ ಹೆಸರು ವಾಸಿಯಾಗಿದ್ದ ತಮ್ಮ ವ್ಯಾಯಾಮ ಶಾಲೆಯನ್ನು ಪ್ರಾರಂಭಿಸಿದರು.

ಕೆ.ವಿ. ಅಯ್ಯರ್‌ರವರು ಕೋಲಾರ ಜಿಲ್ಲೆಯ ದೇವರಾಯ ಸಮುದ್ರ ಎಂಬಲ್ಲಿ 8–1–1898ರಲ್ಲಿ ಸಂಪ್ರದಾಯಸ್ಥ ಅಯ್ಯರ್ ಕುಟುಂಬ ಒಂದರಲ್ಲಿ ಜನಿಸಿದರು. 11ನೇ ವಯಸ್ಸಿಗೆ ತಾಯಿಯನ್ನು ಕಳೆದುಕೊಂಡು ತಂದೆ ನಾರಾಯಣ ಅಯ್ಯರ್ ಅವರೊಂದಿಗೆ ಬೆಂಗಳೂರಿಗೆ ಬಂದರು. ತಂದೆ ನಡೆಸುತ್ತಿದ್ದ ಸಣ್ಣ ಹೋಟೆಲ್‌ನಲ್ಲಿ ಅವರಿಗೆ ಸಹಾಯಕರಾಗಿದ್ದರು. ಅದರ ಜೊತೆಗೆ ಎಸ್.ಎಸ್. ಎಲ್.ಸಿ.ವರೆಗೂ ಓದಿದರು. ಆರ್ಥಿಕ ಸಂಕಷ್ಟದಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲಾಗಲಿಲ್ಲ. ನೋಡಲು ಸುಂದರವಾಗಿದ್ದ ಇವರಿಗೆ ಮೊದಲಿನಿಂದಲೂ ದೈವದತ್ತವಾಗಿ ಅಂಗ ಸಾಧನೆಯ ಬಗ್ಗೆ ತೀವ್ರವಾದ ಆಸಕ್ತಿ ಉಂಟಾಗಿತ್ತು. ಈ ಕ್ಷೇತ್ರವನ್ನೇ ಜೀವನದ ಕಾಯಕವನ್ನಾಗಿ ಆರಿಸಿಕೊಂಡು ಬೆಂಗಳೂರಿನ ಸಿಟಿಮಾರ್ಕೆಟ ಬಳಿ ಇರುವ ಟಿಪ್ಪು ಅರಮನೆಯ ಒಂದು ಕೊಠಡಿಯಲ್ಲಿ ತಮ್ಮ ವ್ಯಾಯಾಮ ಶಾಲೆಯನ್ನು ಪ್ರಾರಂಭಿಸಿದರು. ಒಂದು ದಿನ ಇವರು ವ್ಯಾಯಾಮ ತರಬೇತಿಯಲ್ಲಿ ತೊಡಗಿದ್ದಾಗ ಆಗಲೇ ಪ್ರಸಿದ್ಧರಾಗಿದ್ದವರೂ ಅಯ್ಯರ್ ಅವರಿಗೆ ಪರಿಚಿತರೂ ಆಗಿದ್ದ ಟಿ.ಪಿ. ಕೈಲಾಸಂ ಇವರ ಕಾರ್ಯವಿಧಾನವನ್ನು ಗಮನಿಸಿದರು. ನಂತರ ಮ್ಯಾಕ್ಸ್ ಲ್ಡಿಂಗ್ ಎಂಬ ವ್ಯಾಯಾಮ ಪದ್ಧತಿಯ ಹೆಸರು ಬಂದ ಬಗೆ, ಅವರು ವಿದೇಶಕ್ಕೆ ಹೋದಾಗ ಕಂಡು ಮಾತಾಡಿಸಿದ ಅಂಗಸೌಷ್ಟವ ರಾಜ ಎಂದೇ ಕರೆಯಲ್ಪಡುತ್ತಿದ್ದ ಯುಜಿನ್ ಸ್ಯಾಂಡೊ ಹಾಗೂ ಮತ್ತಿತರಬಾಡಿ ಬಿಲ್ಡರ್‌ಗಳ ಬಗ್ಗೆ ತಿಳಿಸಿದರು. 'ಫಿಸಿಕಲ್ ಕಲ್ಚರ್ ಎಂದರೆ ಸಾಮಾನ್ಯವಾಗಿ ಆಲ್ ಬ್ರೊನ್ ನೊಬ್ರೈನ್ ಎನ್ನುತ್ತಾರೆ. ಅದನ್ನು ನೀನು ಸರಿಯಲ್ಲವೆಂದೂ ಬ್ರೈನ್ ಅಂಡ್ ಬ್ರಾನ್ ಗೋಟುಗೆದರ್ ಎಂದು ಪ್ರಪಂಚಕ್ಕೆ ಪ್ರೂವ್ ಮಾಡಿ ತೋರಿಸಬೇಕು' ಎಂದು ಸಲಹೆ ನೀಡಿದರು. ಈ ಮಾತುಗಳು ಅಯ್ಯರ್ ಅವರ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮ ಬೀರಿದವು. ಅವರ ಚಿಂತನೆ ಕಾರ್ಯವಿಧಾನ ಎಲ್ಲವೂ ಬದಲಾದವು. ವ್ಯಾಯಾಮ ಶಾಲೆಯು ಸ್ಪಷ್ಟ ಧ್ಯೇಯ ಮತ್ತು ಉದ್ದೇಶಗಳನ್ನು ಪಡೆದವು. ಈ ವಿಷಯದಲ್ಲಿ ಜನಸಾಮಾನ್ಯರಿಗೆ ಸರಿಯಾದ ಶಿಕ್ಷಣ ನೀಡಲು ಕರೆಸ್ಪಾಂಡೆನ್ಸ್ ಕೋರ್ಸನ್ನು ಸಹ ಪ್ರಾರಂಭಿಸಿದರು. ಅದರಲ್ಲಿ ವ್ಯಾಯಾಮದ ವಿವಿಧ ಚಿತ್ರಗಳು. ಮಾಡುವ ರೀತಿ ಹಾಗೂ ಇನ್ನಿತರಉಪಯುಕ್ತ ವಿಷಯಗಳು ಇರುತ್ತಿದ್ದವು. ಆಗಿನ ಕಾಲಕ್ಕೆ ಇದೊಂದು ಅತ್ಯಂತ ನೂತನ ಪ್ರಯತ್ನವಾಗಿತ್ತು. ಕ್ರಮೇಣ ಇವರ ಬಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಯಿತು. ಆಗ ಚಾಮರಾಜಪೇಟೆಯ ಐದನೇ ಮೇನ್ ರಸ್ತೆಯ ಒಂದು ಬಾಡಿಗೆ ಮನೆಯಲ್ಲಿ ಹರ್ಕ್ಯುಲಸ್ ಜಿಮ್ನಾಷಿಯಂ ಎಂಬ ಹೆಸರಿನಲಿ ವ್ಯಾಯಾಮ ಶಾಲೆಯನ್ನು ಪ್ರಾರಂಭಿಸಿದರು.

ಇಲ್ಲಿ ಶಿಕ್ಷಣ ಪಡೆಯಲು ಬಂದವರಿಗೆ ಅಯ್ಯರ್ ಅವರ ದೇಹವೇ ಒಂದು ಮಾದರಿಯಾಗಿತ್ತು ಶಿಷ್ಯರ ಪಾಲಿನ ಯುಜಿನ್ ಸ್ಯಾಂಡೊ ಆಗಿದ್ದರು ಇವರ ಅಂಗಸೌಷ್ಟವವನ್ನು ಒಂದು ಕಾವ್ಯ ಎಂದು ವಿವರಿಸಲಾಗಿದೆ. ಇವರು ರಸ್ತೆಯಲ್ಲಿ ನಡೆದು ಹೋಗುತ್ತಿದ್ದರೆ ಯುವಕರಂತೂ ಇದ್ದರೆ ದೇಹ ಹಿಂಗಿರಬೇಕು ಇಂದು ಬೆರಗುಗಣ್ಣುಗಳಿಂದ ನೋಡುತ್ತಿದ್ದರಂತೆ

ಆ ಕಾಲದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಅಂಗಸೌಷ್ಟವಕ್ಕೆ ಖ್ಯಾತರಾಗಿದ್ದ ಯುಜಿನ್ ಸ್ಯಾಂಡೊ, ಲಿಯೊನೆಲ್, ಸ್ಟ್ರಾಂಗ್ ಪೋರ್ಟ್, ಜಾನ್ ಸಿ ಗ್ರಿಮರ್ಕ್, ಆಂಟೋನಿ ಸ್ಯಾನ್ ಸೋನ್, ಜಾರ್ಜ್ ಎಫ್‌ಜೋ ವೆಟ್ ಮುಂತಾದವರಿಗೆ ತಮ್ಮ ದೇಹದ ಫೋಟೋವನ್ನು ಕಳಿಸಿ ಅವರೆಲ್ಲರ ಮೆಚ್ಚುಗೆ ಪಡೆದಿದ್ದರು. ಅಯ್ಯರ್ ಅವರ ದೇಹದ ಮಾಂಸಖಂಡಗಳ ಬೆಳವಣಿಗೆಯ ಸ್ವರೂಪವನ್ನು ತೋರಿಸುವ ನಾನಾ ಬಂಗಿಯ ಫೋಟೋಗಳು ಇಂಗ್ಲೆಂಡಿನ ಹೆಲ್ತ್ ಅಂಡ್ ಸ್ಟ್ರೆಂತ್ ಮತ್ತು ಮಸಲ್ ಬಿಲ್ಡಿಂಗ್ ಪತ್ರಿಕೆಗಳಲ್ಲಿ ಪ್ರಕಟಗೊಂಡು ಅಲ್ಲಿನ ತಜ್ಞರ ಪ್ರಶಂಸೆಗೆ ಒಳಗಾಗಿದ್ದವು. ಫಿಸಿಕಲ್ ಇಂಪ್ರೂವ್ಮೆಂಟ್ ಮತ್ತು ಮಸ್ಕ್ಯುಲರ್ ಡೆವಲಪ್ಮೆಂಟ್ ಎಂಬ ಪ್ರಸಿದ್ಧ ಕೃತಿಗಳನ್ನು ರಚಿಸಿದ ಮಾರ್ಕ್ ಬೆರ್ರಿ, ಅಯ್ಯರ್ ಅವರ ಶರೀರ ಸೌಂದರ್ಯವನ್ನು ಬಹುವಾಗಿ ಪ್ರಶಂಸೆ ಮಾಡಿದ್ದರು.

ಅಧ್ಯಯನ, ಸಾಧನೆ, ಅನುಭವ ಇವುಗಳ ಆಧಾರದ ಮೇಲೆ ಅಯ್ಯರ್ ಅವರು ಸೂರ್ಯನಮಸ್ಕಾರ, ಫಿಸೀಕ್ ಅಂಡ್ ಫಿಗರ್, ಕೆಮಿಕಲ್ ಚೇಂಜಸ್ ಇನ್ ಫಸಿಕಲ್ ಎಕ್ಸರ್ಸೈಸಸ್ ಎಂಬ ಮೂರು ಬಹು ಉಪಯುಕ್ತ ಪುಸ್ತಕಗಳನ್ನು ಬರೆದರು. ಹೊರ ದೇಶಗಳಲ್ಲೂ ಇವರ ಶಿಕ್ಷಣದ ಕೋಸ್‌ಗಾಗಿ ಬಹಳ ಬೇಡಿಕೆ ಇದ್ದುದರಿಂದ ಈ ಕೃತಿಗಳನ್ನು ಸರಳವಾದ ಇಂಗ್ಲಿಷ್‌ನಲ್ಲಿ ರಚಿಸಿದರು. ಕೋರ್ಸ್‌ಗಾಗಿ ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಗೊಳ್ಳುತ್ತಿದ್ದವು. ಈ ಶಿಕ್ಷಣವನ್ನು ಪಡೆಯುತ್ತಿದ್ದ ವಿದ್ಯಾರ್ಥಿಗಳು ಬರೆಯುತ್ತಿದ್ದ ಪತ್ರಗಳಿಗೆ ಉತ್ತರಿಸಲು ಇವರು ದಿನದ ಕೆಲವು ಗಂಟೆಗಳನ್ನು ಮೀಸಲಿಟ್ಟಿದ್ದರು. ಇದರ ಜೊತೆಗೆ ತಾವು ಅಮೆರಿಕದ ಶಿಕ್ಷಣ ಸಂಸ್ಥೆಯೊಂದರ ಫಿಸಿಕಲ್

ಕಲ್ಚರ್ ನ್ಯಾಚುರೋಪತಿ ಕ್ಷೇತ್ರದಲ್ಲಿ ಅಧ್ಯಯನ ನಡೆಸಿ ಯಶಸ್ವಿಯಾಗಿ ಪ್ರೊಫೆಸರ್ ಪದವಿಯನ್ನು ಪಡೆದರು. ಇವರ ವ್ಯಾಯಾಮ ಶಾಲೆಯಲ್ಲಿ ಶನಿವಾರದಂದು ವ್ಯಾಯಾಮ ಮುಗಿದ ನಂತರ ಹಾರ್ಮೋನಿಯಂ ವಾದನದೊಂದಿಗೆ ರಾಮ ಸ್ತೋತ್ರಪಠಣ, ಮಾರುತಿ ಪೂಜೆ ನಂತರ ರುಚಿಕರವಾದ ಪ್ರಸಾದ ವಿನಿಯೋಗ ಇರುತ್ತಿತ್ತು. ಇವರ ಶಿಕ್ಷಣ ಕ್ರಮದಲ್ಲಿ ದೇಹದ ಎಲ್ಲಾ ಭಾಗಗಳಿಗೂ ವ್ಯವಸ್ಥಿತವಾದ ವ್ಯಾಯಾಮ ದೊರಕುತ್ತಿತ್ತು ಜೊತೆಗೆ ಪ್ರೀತಿ ವಿಶ್ವಾಸಗಳಿಂದ ಕೂಡಿದ ಮಾತು ವಿದ್ಯಾರ್ಥಿಗಳನ್ನು ಹುರಿದುಂಬಿಸುತಿದ್ದವು. ಇವರ ಶಿಕ್ಷಣ ಕ್ರಮವನ್ನು ಅನುಸರಿಸಿದ ಟಿ.ಪಿ. ಕೈಲಾಸಂರವರು ಬಹಳ ಕಡಿಮೆ ಸಮಯದಲ್ಲಿ ಆರೋಗ್ಯವಂತ ಮಾಂಸಖಂಡಗಳನ್ನು ಬೆಳೆಸಿಕೊಂಡರಂತೆ.

ಇವರ ವ್ಯಾಯಾಮ ಶಾಲೆಯ ರೋಗ ಚಿಕಿತ್ಸಾ ಪದ್ಧತಿಯು ಎಷ್ಟು ಪ್ರಸಿದ್ಧವಾಗಿತ್ತು ಎಂದರೆ ಆಗಿನ ಮೈಸೂರು ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಅವರು ಕೂಡ ಇವರಿಂದ ಚಿಕಿತ್ಸೆ ಪಡೆಯುತ್ತಿದ್ದರು. ದೇಹಾಲಸ್ಯದಿಂದಾಗಿ ಮಹಾರಾಜರು ಬೆಂಗಳೂರು ಅರಮನೆಯಲ್ಲಿ ತಂಗಿದ್ದರು. ಅವರ ಚಿಕಿತ್ಸೆಗೆಂದು ಕರೆದುಕೊಂಡು ಹೋಗಲು ವ್ಯಾಯಾಮ ಶಾಲೆಗೆ ಮಹಾರಾಜರ ಕಾರು ಬರುತ್ತಿತ್ತು. ಇದನ್ನು ಕಂಡು ಜನರೆಲ್ಲರೂ ಬಹಳ ಆಶ್ಚರ್ಯ ಪಡುತ್ತಿದ್ದರು ಮತ್ತು ಅಯ್ಯರ್ ಅವರ ಬಗ್ಗೆ ಬಹಳ ಗೌರವ ಮೂಡಿಸಿಕೊಂಡಿದ್ದರು. ಬೇಗ ಗುಣಮುಖರಾದ ಮಹಾರಾಜರು ಇವರ ಚಿಕಿತ್ಸಾ ಕ್ರಮವನ್ನು ಮತ್ತು ಕೈಚಳಕವನ್ನು ಬಹುವಾಗಿ ಮೆಚ್ಚಿದ್ದರು. ಮೈಸೂರು, ಊಟಿ ಮುಂತಾದ ಕಡೆಗಳಿಗೂ ಇವರನ್ನು ಕರೆಸಿಕೊಳ್ಳುತ್ತಿದ್ದರು. ಮಹಾರಾಜರಿಂದ ಯಾವ ಪ್ರತಿಫಲವನ್ನು ನಿರೀಕ್ಷಿಸಿದೆ ಅತ್ಯಂತ ಅಭಿಮಾನದಿಂದ ಅಯ್ಯರ್ ಚಿಕಿತ್ಸೆ ನೀಡಿದ್ದರಾದರೂ ಮಹಾರಾಜರು ಇವರಿಗೆ ಒಂದು ಚೀಲದಲ್ಲಿ ಸಾವಿರ ರೂಪಾಯಿ ನಗದನ್ನು ಇಟ್ಟು ಇದು ಗುರುದಕ್ಷಿಣೆ ನಿರಾಕರಿಸಬೇಡಿ ಎಂದು ಹೇಳಿ ನೀಡಿದರು. ನಾಡಿನ ಒಡೆಯರಿಂದ ಬಂದ ಈ ಹಣ ಶಾಶ್ವತ ನೆನಪಿನಲ್ಲಿ ಇರಬೇಕು ಎಂಬ ಉದ್ದೇಶದಿಂದ ಜೆ.ಸಿ. ರಸ್ತೆಯ ವ್ಯಾಯಾಮ ಶಾಲೆಯ ನಿರ್ಮಾಣಕ್ಕೆ ಅವಶ್ಯಕವಾದ ನಿವೇಶನವನ್ನು ಕೊಳ್ಳಲು ಹಣವನ್ನು ಬಳಸಿದರು. ಒಮ್ಮೆ ಮಹಾರಾಜರ ಆಹ್ವಾನದಮೇರೆಗೆ ಮೈಸೂರು ಜಗನ್ಮೋಹನ ಬಂಗಲೆಯಲ್ಲಿ ಪ್ರದರ್ಶನ ನೀಡಿದರು. ಕಾರ್ಯಕ್ರಮ ಪ್ರಾರಂಭವಾಗಲು ಇನ್ನು 10 ನಿಮಿಷ ಇರುವಾಗಲೇ ಮಹಾರಾಜರು ಬಂದು ಆಸೀನರಾಗಿದ್ದರು. ಇದು ಅವರಿಗೆ ಕೆ.ವಿ. ಅಯ್ಯರ್ ಅವರ ಬಗ್ಗೆ ಇದ್ದ ಗೌರವ ಆಸಕ್ತಿಗಳನ್ನು ಸೂಚಿಸಿತ್ತು.

ಕೆ.ವಿ. ಅಯ್ಯರ್, ವ್ಯಾಯಾಮ ಶಾಲೆ ಅಷ್ಟೇ ಅಲ್ಲದೆ ಬೆಂಗಳೂರಿನ ರಂಗಚಟುವಟಿಕೆಗಳ ಅಭಿವೃದ್ಧಿಗೂ ಕಾರಣರಾಗಿದ್ದಾರೆ. ರವಿ ಕಲಾವಿದರು ಸಂಘದ ಅಧ್ಯಕ್ಷರಾಗಿ ಅದು ಬೆಳ್ಳಿಹಬ್ಬವನ್ನು ಆಚರಿಸುವಷ್ಟರ ಮಟ್ಟಿಗೆ ಮಾರ್ಗದರ್ಶನ ಹಾಗೂ ಬೆಂಬಲ ನೀಡಿದ್ದಾರೆ. ಈ ತಂಡದ ರಂಗ ಸಜ್ಜಿಕೆಗೆ ಬೇಕಾದ ಸಾಧನೆಗಳೆಲ್ಲವೂ ಅಯ್ಯರ್‌ವರ ಕೊಡುಗೆಗಳೇ. ರಿಹರ್ಸಲ್ ನಂತರ ಕಲಾವಿದರಿಗೆ ರುಚಿಯಾದ ಉಪಹಾರವನ್ನು ಇವರೇ ಒದಗಿಸುತ್ತಿದ್ದರು.

ಇಷ್ಟೇ ಇಲ್ಲದೆ ಅಯ್ಯರ್ ಅವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯವಾದ ಕೃತಿಗಳನ್ನು ನೀಡಿದ್ದಾರೆ ಇವರ ಶಾಂತಲಾ, ರೂಪದರ್ಶಿ, ಲೀನಾ ಕಾದಂಬರಿಗಳು ಇಂದಿಗೂ ಜನಪ್ರಿಯವಾಗಿವೆ. ಇವರ ಸಣ್ಣಕಥೆಗಳು ಕೈಲಾಸಂ ಸ್ಮರಣೆ ನಾಟಕಗಳು ಕುತೂಹಲ ಕೆರಳಿಸುತ್ತವೆ. ಇವರ ಈ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿತ್ತು.

ಹೀಗೆ ಬಹು ಮುಖ ಪ್ರತಿಭೆಯೊಂದಿಗೆ ನಿರಪೇಕ್ಷಭಾವದೊಂದಿಗೆ ಸಮಾಜ ಮುಖಿಯಾಗಿದ್ದ ಕೆ.ವಿ.ಅಯ್ಯರ್ 1980ರ ಜನವರಿ ಮೂರರಂದು ಜೆ.ಸಿ. ರಸ್ತೆಯ ತಮ್ಮ ವ್ಯಾಯಾಮ ಶಾಲೆಯಲ್ಲಿಯೇ ದೈವಾಧೀನರಾದರು. ಅವರ ಅಂತಿಮ ದರ್ಶನವನ್ನುಪಡೆಯಲು ವಿವಿಧ ಕ್ಷೇತ್ರಗಳ ಗಣ್ಯಾತಿ ಗಣ್ಯರು ಆಗಮಿಸಿದ್ದರು. ಆ ಗುಂಪಿನಲ್ಲಿದ್ದ ವೃದ್ಧರೊಬ್ಬರು “ಹಿ ವಾಸ್ ಎ ಟೋಟಲ್ ಮ್ಯಾನ್.

ಎ ಟೋಟಲ್ ಇಂಡಿಯನ್’ ಎಂದು ಉದ್ಗರಿಸಿದರಂತೆ.

ಕೆ.ವಿ.ಅಯ್ಯರ್, ಅಪರೂಪದ ಎಂದಿಗೂ ಮರೆಯಲಾಗದಂತಹ ಬಹುಮುಖ ಪ್ರತಿಭೆಯ ಮಹಾನುಭಾವರು.



# ಆಜಾದ್ ಚಂದ್ರಶೇಖರ

– ಛಾಯಾಪತಿ ಕೆ.ಎನ್.
(ಮಹಾಸಭಾ ಉಪಾಧ್ಯಕ್ಷರು)



**ನಿನ್ನ ಹೆಸರೇನು : ಆಜಾದ್.**
**ನಿನ್ನಅಪ್ಪನ ಹೆಸರು : ಸ್ವಾಧೀನತೆ.**
**ನಿನ್ನ ವಿಳಾಸ : ಸೆರೆಮನೆ.**

ಕುತಂತ್ರದಿಂದ ನಮ್ಮನ್ನು ಆಳುತ್ತಿದ್ದ ವಿದೇಶಿ ಶತ್ರುಗಳಾದ ಆಂಗ್ಲರು ಯಾರ ಹೆಸರನ್ನು ಕೇಳಿದರೆ ಹೆದರಿ ಥರಥರ ನಡುಗುತ್ತಿದ್ದರೋ ಆ ಬಡ ಬ್ರಾಹ್ಮಣ ಕುಟುಂಬದ ಗಂಡುಗಲಿ ಆಜಾದ್ ಚಂದ್ರಶೇಖರನ ಉತ್ತರವಿದು. ಪೊಲೀಸ್ ಅಧಿಕಾರಿಯೊಬ್ಬನಿಗೆ ಕೇವಲ ಕಲ್ಲೇಟು ಹೊಡೆದಿದ್ದಕ್ಕೆ ಕೋರ್ಟಿಗೆ ಎಳೆದುತಂದು ನ್ಯಾಯಾಧೀಶರ ಮುಂದೆ ನಿಲ್ಲಿಸಿದಾಗ ಅವರ ಪ್ರಶ್ನೆಗಳಿಗೆ ನೀಡಿದ ಉತ್ತರವಿದು. ಘಟನೆಯೇನೆಂದರೆ 1921 ನೇ ಇಸವಿ ಆಗ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೆಚ್ಚಾಗುತ್ತಾ ಹೋದ ದಿನಗಳು. ಮಹಾತ್ಮ ಗಾಂಧಿಯವರು ಅಸಹಕಾರ ಚಳುವಳಿಗೆ ಕರೆಕೊಟ್ಟ ದಿನಗಳು. ಅದರಂತೆ ದೇಶದಲ್ಲೆಲ್ಲಾ ಅಸಹಕಾರಚಳುವಳಿ ಮೆರವಣಿಗೆ, ಸಭೆ,ಭಾಷಣ, ಕರಪತ್ರ ಹಂಚಿಕೆ ಇವೆಲ್ಲ ನಡೆಯುತ್ತಿತ್ತು. ಅಂದಮೇಲೆ ಕಾಶಿ ವಿಶ್ವನಾಥನ ಊರಾದ ವಾರಣಾಸಿಯಲ್ಲೂ ನಡೆಯದೇ ಇರುತ್ತದೆಯೇ? ಜ್ಞಾನವಾಪಿ ಆವರಣದಿಂದ ಅಸಹಕಾರ ಚಳುವಳಿಯ ಮೆರವಣಿಗೆ ಹೊರಟಿದೆ. ಆ ಮೆರವಣಿಗೆಯ ಮುಂಚೂಣಿಯಲ್ಲಿ ಸ್ವಾಮಿ ಶಂಕರಾನಂದ ಬ್ರಹ್ಮಚಾರಿ ಎಂಬ ವೀರ ಸನ್ಯಾಸಿ ಕೈಯಲ್ಲಿ ಶಂಖ ಹಿಡಿದು ಉದ್ಘೋಷಿಸುತ್ತಿದ್ದಾರೆ. ಎಲ್ಲರಲ್ಲೂ ಉತ್ಸಾಹ ಎಲ್ಲೆ ಮೀರಿದೆ. ಆಂಗ್ಲರ ಗುಲಾಮರಾಗಿ ಪ್ರತಿತಿಂಗಳು ಅವರ ಎಂಜಲು ಕಾಸಿನ ಸಂಬಳಕ್ಕೆ ಕೈ ಒಡ್ಡುತ್ತಿದ್ದ ನಮ್ಮವರೇ ಆದ ಪೊಲೀಸ್ ಪಡೆ ಆಗಮಿಸಿತು. ಲಾಠಿಚಾರ್ಜ್ ಶುರುಮಾಡಿತು.ಆ ತುಕಡಿಯ ಸಬ್ಇನ್‌ಸ್ಪೆಕ್ಟರ್ ತನ್ನ ಲಾಠಿಯಿಂದ ಸ್ವಾಮಿ ಶಂಕರಾನಂದಬ್ರಹ್ಮಚಾರಿಗೆ ಮಾರಣಾಂತಿಕವಾಗಿ ಹೊಡೆಯುತ್ತಿದ್ದುದನ್ನು ಆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ 16 ವರ್ಷದ ತರುಣ ಚಂದ್ರಶೇಖರ್ ನೋಡಿದ. ಏಟನ್ನು ನೋಡಲಾರದೆ ಕೈಗೆ ಕಲ್ಲನ್ನು ತೆಗೆದುಕೊಂಡು ಬೀಸಿದ. ನೇರವಾಗಿ ಆ ಅಧಿಕಾರಿಯ ಹಣೆಗೆ ಸಿಡಿಲಿನಂತೆ ಅಪ್ಪಳಿಸಿ ಜುಳು ಜುಳು ರಕ್ತ ಹರಿಯಿತು.ಹಿಡಿಯಿರಿ ಅವನನ್ನು ಎಂಬ ಆಜ್ಞೆ ಹೊರಟಿತು. ಒಬ್ಬ ಕಿಶೋರನನ್ನು ಹಿಡಿಯಲು ಹತ್ತಾರು ಪೊಲೀಸರ ಓಟ. ಕಾಶಿಯ ಗಂಗಾ ನದಿಯ ಘಾಟುಗಳನ್ನೆಲ್ಲ ಸುತ್ತು ಹಾಕಿಸಿದ. ಜಿಂಕೆಮರಿಯಂತೆ ಓಡುತ್ತಾ ಅಲ್ಲೇ ಇದ್ದ ಒಂದು ಇದ್ದಿಲು ಅಂಗಡಿಗೆ ನುಗ್ಗಿದ. ಅಂಗಡಿಯ ಅಜ್ಜಿಗೆ ಚಂದ್ರಶೇಖರ ಪ್ರೀತಿಯ ಕಿಶೋರ.ವಿಷಯ ತಿಳಿದ ಅಜ್ಜಿ ಅವನನ್ನು ಒಂದು ಕುಕ್ಕೆಯಲ್ಲಿ ಬಚ್ಚಿಟ್ಟು ಮೇಲೆ ಇದ್ದಿಲುಸುರಿದಳು. ಬಂದ ಪೋಲೀಸರು ತಪಾಸಣೆ ಮಾಡಿ ಬರಿಗೈಯಲ್ಲಿ ಹಿಂದಿರುಗಿದರು. ಮಾರನೇ ದಿನ ದಶಾಶ್ವಮೇಧಗಾಟ್ ನಲ್ಲಿ ಈಜಾಡಿ ಸ್ನಾನ ಮಾಡಿ ಶುಭ್ರವಾದನು. ಅಂದೇ ಕ್ವೀನ್ಸ್ ಕಾಲೇಜಿನ ಹತ್ತಿರ ಸತ್ಯಾಗ್ರಹ ಇತ್ತು. ಆಜಾದನ ಬಗಲಲ್ಲಿ ಚೀಲ. ಅದರಲ್ಲಿದ್ದ ಕರಪತ್ರ ಹಂಚುತ್ತಿದ್ದಾಗ ಪೋಲೀಸರ ಕಣ್ಣಿಗೆ ಬಿದ್ದ. ಹಿಡಿಯಲು ದೌಡಾಯಿಸಿದರು. ಆ ಚಿರತೆ ಮರಿ ಸಿಗಲಿಲ್ಲ. ಹತ್ತಿರವಿದ್ದ ಪುತಿವಾಲೆ ಶಿವಾಲಯಕ್ಕೆ ಹೋಗಿ ಸುಧಾರಿಸಿಕೊಳ್ಳುತ್ತಿದ್ದ. ಅಂತೂ ಪೊಲೀಸರು ಪತ್ತೆಹಚ್ಚಿ ಬಂದು ಹಿಡಿದರು. ಬಂಧಿಸಿ ನ್ಯಾಯಾಲಯಕ್ಕೆ ತಂದು ನಿಲ್ಲಿಸಿದರು. ಇವನು ಸೆಟೆದು ನಿಂತ ಠೀವಿಯನ್ನು ನೋಡಿದ ಮ್ಯಾಜಿಸ್ಟ್ರೇಟ್ ಖರೇಘಾಟ್‌ನ ಪಿತ್ತ ನೆತ್ತಿಗೇರಿತು. ಪೊಲೀಸ್ ಅಧಿಕಾರಿಗೆ ನೀನು ಕಲ್ಲಿನಿಂದ ಹೊಡೆದಿದ್ದು ನಿಜವಾ ಎಂದು ಕೇಳಿದರು.ಹೌದು ನಿಜವೇ ನಾನು ತಪ್ಪು ಮಾಡಿದೆ ಎಂದು ಈಗ ಅನಿಸುತ್ತಿದೆ ಎಂದ.ಆಗ ಮ್ಯಾಜಿಸ್ಟ್ರೇಟರು ಹುಡುಗನಿಗೆ ಬುದ್ಧಿ ಬರುತ್ತಿದೆ ಎಂದು ಭಾವಿಸಿದರು. ಮುಂದುವರೆದು ಆಜಾದ್ ಹೇಳಿದ. ಕಲ್ಲಿನಿಂದ ಹೊಡೆಯಬಾರದಿತ್ತು ಲಾಟಿಯಿಂದ ಅವನ ತಲೆ ಒಡೆದು ಹಾಕಬೇಕಿತ್ತು. ಕೈಯಲ್ಲಿ ಪಿಸ್ತೂಲು ಇದ್ದಿದ್ದರೆ ಅಲ್ಲಿಯೇ ಸುಟ್ಟು ಹಾಕುತ್ತಿದ್ದೆ ಎಂದ. ಕೋರ್ಟಿನಲ್ಲಿ ನೆರೆದಿದ್ದವರಿಂದ ಹರ್ಷೋದ್ಗಾರ. *ಭಾರತ ಮಾತಾಕಿ ಜೈ* *ವಂದೇ ಮಾತರಂ* ಮಾರ್ದನಿಸಿತು. ನಿಲ್ಲಿಸು ನಿನ್ನ ತಲೆಹರಟೆ ಮಾತು ಇದು ನ್ಯಾಯಾಲಯ ಏನು ಅಂದು ಕೊಂಡಿದ್ದೀಯಾ. ಆಗ ಆಜಾದ್ ನನಗೆ ಚೆನ್ನಾಗಿ ಗೊತ್ತು ಇದೊಂದು ಅನ್ಯಾಯಾಲಯ, ಇಲ್ಲಿ ನ್ಯಾಯ ದೇವತೆಗೆ ನೇಣು ಹಾಕುತ್ತೀರಿ, ಇಲ್ಲಿ ಅನ್ಯಾಯವೆಂಬುದು ನ್ಯಾಯವನ್ನು ಮೆಟ್ಟಿ ನಿಂತಿದೆ ಎಂದ. ಆಗ ಮ್ಯಾಜಿಸ್ಟ್ರೇಟರು ಮುಚ್ಚು ಬಾಯಿ ಬೊಗಳಬೇಡ. ನಿನ್ನ ಹೆಸರು, ನನ್ನ ಹೆಸರು ಆಜಾದ್ ನಿನ್ನಅಪ್ಪನ ಹೆಸರು– ಸ್ವಾಧೀನ ಮನೆ–ಸೆರಮನೆ ಕೆಲಸ–ಬ್ರಿಟಿಷರನ್ನು ಭಾರತದಿಂದ ಓಡಿಸುವುದು. ಮ್ಯಾಜಿಸ್ಟ್ರೇಟರು ಕಕ್ಕಾಬಿಕ್ಕಿಯಾದರೂ ತಲೆ ಚೆಚ್ಚಿಕೊಳ್ಳುವ ಪರಿಸ್ಥಿತಿ ರಕ್ತ ಕುದಿಯುತ್ತಿದೆ. (ಅಂದಿನಿಂದಲೇ ಅವನ ಹೆಸರು ಆಜಾದ್ ಚಂದ್ರಶೇಖರ್ ಆಯಿತು.) ಇವನು ಅಪ್ರಾಪ್ತ ವಯಸ್ಕನಾದುದರಿಂದ ಜೈಲು ಶಿಕ್ಷೆ ಕೊಡಲಿಲ್ಲ. ಬದಲಿಗೆ ಹನ್ನೆರಡು ಛಡಿ ಏಟಿನ ಶಿಕ್ಷೆ. ಛಡಿ ಏಟಿನ ವಿವರವೇ ಮೈನಲ್ಲಿ ನಡುಕ ಹುಟ್ಟಿಸುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಛಡಿಏಟು ಶಿಕ್ಷೆಗೆ ಕಸೂರಿ ಬೇತ್ ಎಂದು ಕರೆಯುತ್ತಿದ್ದರು. ಛಡಿ ಎಂದರೆ ಅದು ಒಂದು ಕೋಲಾಗಲಿ ಅಥವಾ ಬಾರ್ಕೋಲಾಗಲಿ ಅಲ್ಲ. ಅದೊಂದು ಎಳಸಾಗಿ ಉದ್ದವಾಗಿರುವ ಬೆತ್ತ. ಅದನ್ನು ಶಿಕ್ಷೆಗೆ ಮೂರುನಾಲ್ಕು ದಿನ ಮೊದಲೇ ನೀರಿನಲ್ಲಿ ನೆನೆಹಾಕಲಾಗುತ್ತದೆ. ಛಡಿಯೇಟು ಹೊಡೆಯಲು ಸೆರೆಮನೆಯಲ್ಲಿ ಕಟ್ಟು ಮಸ್ತಾದ ಕೈದಿಯನ್ನು ಆರಿಸುತ್ತಿದ್ದರು. ಒಂದು ಗೋಣಿ ಚೀಲದಲ್ಲಿ ಮರದ ಹೊಟ್ಟನ್ನು ತುಂಬಿ ಒಂದು ಕಡೆ ನೇತುಹಾಕಿ ಆ ಖೈದಿಯ ಕೈಯಿಂದ ಛಡಿಯಲ್ಲಿ ಅದರ ಮೇಲೆ ನಿರಂತರ ಪ್ರಹಾರ ಮಾಡಿ ಅಭ್ಯಾಸ ಮಾಡಿಸುತ್ತಿದ್ದರು. ಛಡಿ ಏಟು ನೀಡುವದಿನ ಏಟುಕೊಡುವ ವ್ಯಕ್ತಿತಗೆ ಯಥೇಚ್ಛವಾಗಿ ಕುಡಿಯಲು ಹಾಲು ಕೊಡುತ್ತಿದ್ದರು. ಶಿಕ್ಷೆಯ ದಿನ ಒಬ್ಬ ಜೈಲರ್, ಒಬ್ಬ ಡಾಕ್ಟರ್, ಮತ್ತು ಛಡಿಏಟು ಕೊಡುವವನು ಮಾತ್ರ ಇರುತ್ತಿದ್ದರು. ಶಿಕ್ಷೆಗೆ ಮೊದಲು ಅಪರಾಧಿಯ ವೈದ್ಯಕೀಯ ತಪಾಸಣೆಯಾಗುತ್ತಿತ್ತು. ಅದರಲ್ಲಿ ಅರ್ಹನಿದ್ದರೆ ಅಂದೇ ಶಿಕ್ಷೆ. ಇಲ್ಲದಲ್ಲಿ ಬೇರೊಂದು ದಿನ ಶಿಕ್ಷೆ. ಛಡಿ ಏಟು ಎಂದರೆ ದೊಡ್ಡ ದೊಡ್ಡ ಖದೀಮ

ಕೈದಿಗಳು, ಕಟ್ಟು ಮಸ್ತಾದ ಶರೀರದ ಕೈದಿಗಳೂ ಥರ ಥರ ನಡುಗುತ್ತಿದ್ದರು. ಅಪರಾಧಿಯ ಮೈ ಮೇಲೆ ಕೇವಲ ಕೌಪಿನ ಮಾತ್ರ ಇರುತ್ತಿತ್ತು. ಹೊಡೆತ ತಿಂದ ಅಪರಾಧಿಯ ಪೃಷ್ಠದ ಮೇಲೆ ಆದ ಗಾಯಗಳು ಕೀವುಗಟ್ಟಿ ಹುಣ್ಣಾಗುತ್ತಿದ್ದವು. ಕೆಲವು ಸಲ ಶುಶ್ರೂಸೆ ಇಲ್ಲದೆ ಹುಳುಗಳೂ ಬೀಳುತ್ತಿದ್ದವು. ಅಥೊಂದು ನರಕಯಾತನೆ. ಈ ಯಾತನೆಯನ್ನು ಪುಳಿಚಾರು ತಿನ್ನುವ ಬ್ರಾಹ್ಮಣ ಆಜಾದನೂ ಅನುಭವಿಸಿದ. ಮಾಂಸಹಾರದಿಂದ ಕೆಲವರ ಶರೀರ ಗಟ್ಟಿಯಾಗಿದ್ದರೆ ದೈವಾನುಷ್ಠಾನ, ದೇಶಭಕ್ತಿಯ ಅನುಷ್ಠಾನದಿಂದ ಆಜಾದನ ಪುಳಿಚಾರು ತಿನ್ನುವ ಶರೀರವು ಗಟ್ಟಿಯಾಗಿತ್ತು.

1922 ಫೆಬ್ರವರಿ 22 ಚಂದ್ರಶೇಖರನ ಶಿಕ್ಷೆಯ ದಿನ.ಸಂಜೆ 4 ಗಂಟೆಗೆ ಗಂಡಾಸಿಂಗ್ ಎಂಬ ಜೈಲು ಅಧಿಕಾರಿ ಸಹಕಾರಿಗಳೊಂದಿಗೆ ಬಂದೇ ಬಿಟ್ಟ. ದರ್ಪದಿಂದ ಏಳು ಏನು ಮಾಡುತ್ತಾ ಇದ್ದೀಯ ಎಂದ. ಸ್ವಲ್ಪತಾಳು ನಾನೇನು ನಿದ್ರೆಮಾಡುತ್ತಿಲ್ಲ ಭಜರಂಗಬಲಿಯ ಧ್ಯಾನ ಮಾಡುತ್ತಿರುವೆ ಎಂದ ಜೈಲರ್ ಕರುಣೆಯಿಂದ ಹೇಳಿದ. ನನ್ನ ತಾಯಿ ನಿನ್ನ ನೋಡಿದ್ದಾಳೆ ಅವಳಿಗೆ ನಿನ್ನ ಬಗ್ಗೆಎಲ್ಲಿಲ್ಲದ ಪ್ರೀತಿ. ಆಗ ಆಜಾದ ಹೌದು ಎಷ್ಟಿದ್ದರೂ ಅದು ತಾಯಿ ಕರುಳಲ್ಲವೇ. ಜೈಲರ್ ಏನಾದರೂ ಮಾಡಿ ಅವನಿಗೆ ತಿಳಿ ಹೇಳಿ ಛಡಿ ಏಟು ತಪ್ಪಿಸು ಎಂದಿದ್ದಾಳೆ ಎಂದ ಆಗ ನೀವು ತಾಯಿಗೆ ಏನು ಹೇಳಿದಿರಿ. ಆಗ ಜೈಲರ್ ಆಯ್ತು ಇನ್ನೊಂದು ಸಾರಿ ಕ್ಷಮೆ ಯಾಚನೆ ಕೇಳುವ ಮನವೊಲಿಸುವ ಪ್ರಯತ್ನ ಮಾಡುತ್ತೇನೆ ಎಂದೆ. ಇದು ನಿಮ್ಮ ಭ್ರಮೆ ಜೈಲರ್ ಸಾಬ್ ನಾನು ಸ್ವಾತಂತ್ರ ಹೋರಾಟದ ಸಿಪಾಯಿ. ಆಗ ಜೈಲರ್ ಮಗು ನಿನ್ನನ್ನು ನೋಡಿದರೆ ನನ್ನ ಚಿಕ್ಕ ಮಗನನ್ನು ನೋಡಿದಂತೆ ಕಾಣುತ್ತದೆ, ಮನಸ್ಸಿನಲ್ಲಿ ಪ್ರೀತಿ ಉಕ್ಕುತ್ತಿದೆ ಮರಿ ಎಂದರು.ಜೈಲರ್‌ನ ಯಾವ ಮಾತಿಗೂ ಒಪ್ಪಲಿಲ್ಲ ಆಜಾದ್. ಹಾಗಾದರೆ ನಿನಗೆ ಈಗ ಛಡಿ ಏಟು ಕೊಡುತ್ತೇವೆ.ತಡೆದುಕೊಳ್ಳುತ್ತೀಯಾ ಎಂದರು.ಅದರ ಚಿಂತೆ ನಿಮಗೆ ಬೇಡ ನನ್ನ ಬಳಿ *ವಂದೇಮಾತರಂ* ಎಂಬ ವಜ್ರಕವಚವಿದೆ. ವಜ್ರಾಯುಧದಿಂದ ಸೀಳಿಸಿದರೂ *ವಂದೇ ಮಾತರಂ*ನನ್ನನ್ನು ರಕ್ಷಿಸುತ್ತದೆ. ನಿಮ್ಮ ಕೆಲಸ ಮುಂದುವರಿಸಿ. ಬೇರೆ ದಾರಿ ಕಾಣದೆ ಅವನ ಸೊಂಟಕ್ಕೆ ಹಗ್ಗ ಕಟ್ಟಿ ಕರೆದುಕೊಂಡು ಹೊರಟರು. ಪ್ರತಿ ಜೈಲು ಕೊಠಡಿಯ ಮುಂದೆ ಬಂದಾಗಲೂ ಒಳಗಿದ್ದವರಿಂದ *ವಂದೇಮಾತರಂ* ಘೋಷಣೆ ಅದರಲ್ಲಿ ರಾಮದೇವ ಶಾಸ್ತ್ರಿ ಎಂಬ ಹಿರಿಯರು ಇದ್ದರು. ಮಗು ನೀನಿಂದು ಮಹಾಯೋಧನಾಗಿಬಿಟ್ಟೆ. ದೇಶದ ಯುವಕರಿಗೆ ದಾರಿದೀಪವಾಗಿಬಿಟ್ಟೆ. ಧೈರ್ಯ ಗೆಡಬೇಡ ಎಂದರು.ಶಿಕ್ಷಾಸ್ಥಾನಬಂದಿತು ಕೌಪಿನಬಿಟ್ಟು ಉಳಿದ ಬಟ್ಟೆ ಕಳಚಿದರು. ಗೋಡೆಯ ಕಡೆ ತಿರುಗಿಸಿ ನಿಲ್ಲಿಸಿ ಎರಡು ಕೈಗಳನ್ನು ಗೋಡೆಯ ಗೂಟಕ್ಕೆ ಸರಪಳಿಯಿಂದ ಕಟ್ಟಿದರು. ಎರಡು ಕಾಲನ್ನು ಸಹ ಕಟ್ಟಿದರು. ವೈದ್ಯಕೀಯ ತಪಾಸಣೆಯಾಗಿ ಉತ್ತೀರ್ಣನಾದ ಕಲ್ಲೂ ಪೈಲ್ವಾನಕೈಯಲ್ಲಿ ಛಡಿ ಹಿಡಿದು ಬಂದ. *ಮಝೆ ಮಾಫ್ ಕರೋನ ಬೇಟ* ಎಂದು ಚುಳ್ ಎಂದು ಛಡಿಯನ್ನು ಗಾಳಿಯಲ್ಲಿ ಬೀಸಿದ. ಅಲ್ಲಿದ್ದ ಯಾರಿಗೂ ಈ ಚಿಕ್ಕ ಹುಡುಗನಿಗೆ ಶಿಕ್ಷೆ ಕೊಡಲು ಮನಸ್ಸಿಲ್ಲ. ಎಲ್ಲಾ ಸಿದ್ಧವಾಗಿದೆ ಎಂದ ಮೇಲೆ ಜೈಲರ್ ಗಂಡಾಸಿಂಗ್ ಒಲ್ಲದ ಮನಸ್ಸನ್ನು ಗಟ್ಟಿ ಮಾಡಿಕೊಂಡು ಮರೋ ಆಗ್ನೆ ನೀಡಿದ. ಕಲ್ಲೂ ಪೈಲ್ವಾನ್ ನಿಂತಲ್ಲೇ ಕೈಯಲ್ಲಿದ್ದ ಬೆತ್ತವನ್ನು ತಲೆಸುತ್ತಾ ಸುತ್ತುತ್ತಾ ಬಂದು ವಸ್ತ್ರರಹಿತ ಆಂಡಿಯ ಮೇಲೆ ಬಲವಾಗಿ ಹೊಡೆದ. ಬೆತ್ತದ ಜೊತೆಯಲ್ಲಿ ಚರ್ಮ ಕಿತ್ತುಬಂದಿತು ರಕ್ತ ಚಿಮ್ಮಿತು ಪೃಷ್ಠದಲ್ಲಿ ಯಮಯಾತನೆ ಇದ್ದರೂ ಬಾಯಲ್ಲಿ *ಭಾರತ್ ಮಾತಾಕೀ ಜೈ* ಘೋಷಣೆ ಪಕ್ಕದ ಕೋಣೆಗಳಲ್ಲಿದ್ದ ಸೆರೆವಾಸಗಳಿಂದಲೂ *ಭಾರತ್ ಮಾತಾಕೀ ಜೈ* ಘೋಷಣೆ. ಎರಡನೇ ಹೊಡೆತಕ್ಕೆ *ವಂದೇ ಮಾತರಂ* ಮೂರನೇ ಹೊಡೆತಕ್ಕೆ *ಮಹಾತ್ಮ ಗಾಂಧೀಜಿಕೀ ಜೈ* ಹೀಗೆ 12 ಹೊಡೆತಗಳಿಗೂ ತಾಯಿ ಭಾರತಿಯ ಸ್ಮರಣೆ ಪ್ರತಿ ಹೊಡೆತಕ್ಕೂ ಮೈ ಕಂಪನ, ಕಣ್ಣುಗಳು ಕೆಂಪಾಗಿ ಅಲ್ಲಿಂದಲೂ ರಕ್ತ ಚಿಮ್ಮಿದಂತೆ ಕಾಣುತ್ತಿತ್ತು. ಪೃಷ್ಠದಿಂದ ರಕ್ತದ ತೊಟ್ಟುಗಳು ಬೀಳಲಾರಂಬಿಸಿದವು.ಗಾಯಗಳಿಂದ ಹೊರಟ ರಕ್ತ ಹಿಂಗಾಲಿನ ಮೇಲೆ ಹರಿಯತೊಡಗಿತು. ಪ್ರತಿ ಏಟಿಗೂ ದೇಹಶಕ್ತಿ ಕ್ಷೀಣಿಸುತ್ತಿತ್ತು. ಆದರೆ ಮನೋಬಲಕ್ಕೆ ಕಿಂಚಿತ್ತೂ ಧಕ್ಕೆ ತಗುಲಿರಲಿಲ್ಲ. ಕೊನೆ ಹೊಡೆತ ಕೊನೆಯ *ವಂದೇ ಮಾತರಂ* ಆಗಾಗಲೇ ದೇಹ ಸ್ವರಗಿತ್ತು ರಕ್ತ ಹರಿಯುತ್ತಿತ್ತು ತಾಳಲಾರದೆ ಹಾಗೆ ಸರಪಣಿಗಳಿಗೆ ಜೋತುಬಿದ್ದ ಪೃಷ್ಠದ ಚರ್ಮ ಛಿದ್ರವಾಗಿ ರಕ್ತಸಿಕ್ತವಾಗಿದೆ. ಅಲ್ಲೊಂದು ಇಲ್ಲೊಂದು ಚರ್ಮದ ಚೂರು ಜೋತಾಡುತ್ತಿದೆ. ಆಗಲೂ ಅವನದು ಅದೇ ಮಾತು, ಜೈಲರ್ ಸಾಹೇಬರೇ ಇನ್ನೂ ಬೇಕಾದರೂ ಹೊಡೆಯಿರಿ ನಾನು ಸಿದ್ಧನಿದ್ದೇನೆ. ಆಜಾದನನ್ನು ನೆಲದ ಮೇಲೆ ಬೋರಲಾಗಿ ಮಲಗಿಸಿದರು. ವೈದ್ಯರು ಚಿಕಿತ್ಸೆ ನೀಡಿದರು. ಕೆಲ ಸಮಯದ ನಂತರ ಮೇಲೆದ್ದ. ಒಬ್ಬ ಪೇದೆ ಪಂಚೇ ತಂದು ಕೊಟ್ಟ. ಹಗುರವಾಗಿ ಸೊಂಟಕ್ಕೆ ಸುತ್ತಿಕೊಂಡು ಪೇದೆಯ ಜೊತೆಯಲ್ಲಿ ಜೈಲರ್ ಕೊಠಡಿಗೆ ಹೊರಟು ತಲುಪಿದ. ಬಾಬಾ ಈಗ ನಿನ್ನ ಬಿಡುಗಡೆಯಾಗಿದೆ, ಹೊರಗೆ ಹೋಗಿ ಏನು ಮಾಡುತ್ತೀಯಾ ಎಂದು ಜೈಲರ್ ಕೇಳಿದ. ಹೊರಗೆ ಬೇಕಾದಷ್ಟು ಕೆಲಸವಿದೆ ಬ್ರಿಟಿಷರನ್ನು ಓಡಿಸಬೇಕು. ಸ್ವಾತಂತ್ರಕ್ಕಾಗಿ ಮುಂದಿನ ಸಿದ್ಧತೆ ಮಾಡಬೇಕು. ಇನ್ನು ಮುಂದೆ ನಾನು ಜೈಲು ಸೇರುವುದಿಲ್ಲ. ಕಾರಣ ಯಾವ ಪೊಲೀಸರು ನನ್ನನ್ನು ಬಂಧಿಸಲಾರರು. ಎಂದು ಉತ್ತರಿಸಿದ. ಮುಂದೆ ಬಾ ನಿನ್ನ ಅಂಗೈತೋರಿಸು ಎಂದು ಜೈಲರ್ ಹೇಳಿದರು ಕಪಾಟಿನಿಂದ ಮೂರು ಆಣೆ ಹಣ ತೆಗೆದು ಆಜಾದನ ಕೈಗಿಡುತ್ತಾ ಇದು ಜೈಲಿನ ನಿಯಮ.ಈ ಹಣದಲ್ಲಿ ನಿನ್ನ ಗಾಯಗಳಿಗೆ ಔಷಧಿ ತೆಗೆದುಕೋ. ಆ ವೇದನೆಯಲ್ಲೂ ಆ ಹುಡುಗ ಗಹಗಹಿಸಿ ನಕ್ಕು ನೀವು ಏಟೂ ಕೊಡುತ್ತೀರಾ, ವಾಸಿ ಮಾಡಿಕೊಳ್ಳಲು ಹಣವನ್ನು ಕೊಡುತ್ತೀರಾ ವಾ ಬ್ರಿಟಿಷ್ ಸರ್ಕಾರವೇ ಎಂದ. ಕೈಯಲ್ಲಿದ್ದ ಆಣೆಯನ್ನು ಹಿಡಿದು ನೋಡಿದ. ಅದರಲ್ಲಿ ಆಂಗ್ಲ ಸರ್ಕಾರದ ಅಟ್ಟಹಾಸ ಕಾಣಿಸುತ್ತಿತ್ತು. ಜೊತೆಗೆ ಬಂದಿತಳಾದ ತಾಯಿ ಭಾರತೀಯ ಮೂರ್ತಿ ಕಂಡಂತಾಯಿತು. ಕೂಡಲೇ ಹಣವನ್ನು ಜೈಲರನ ಮುಖದ ಮೇಲೆ ಎಸೆದು ಅಲ್ಲಿಂದ ಕುಂಟುತ್ತಲೆ ಆಚೆಗೆ ತೆರಳಿದ .

ಎರಡು ಹೊತ್ತು ಊಟಕ್ಕೂ ಪರಿತಪಿಸುತ್ತಿದ್ದ ಒಂದು ಬಡ ಬ್ರಾಹ್ಮಣ ಕುಟುಂಬದಲ್ಲಿ 1906 ಜುಲೈ 23ರಂದು ಮಧ್ಯಪ್ರದೇಶದ ಜಬುವ ಜಿಲ್ಲೆಯಲ್ಲಿರುವ ಭಾವರ ಎಂಬ ಹಳ್ಳಿಯಲ್ಲಿ ಚಂದ್ರಶೇಖರ ಆಜಾದನ ಜನನವಾಯಿತು. ಒಂದು ತೋಟದಲ್ಲಿ ಮಾಲಿ ಕೆಲಸ ಮಾಡಿ ಕೊಂಡು ತಿಂಗಳಿಗೆ 5ರೂ ಸಂಬಳ ಪಡೆಯುತ್ತಿದ್ದ ಸೀತಾರಾಮ್ ತಿವಾರಿ ಇವರ ತಂದೆ. ಜಗರಾಣಿದೇವಿ ಇವನ ತಾಯಿ. ಅಪರೂಪದ ಅನಕ್ಷರಸ್ಥ ಬ್ರಾಹ್ಮಣ ದಂಪತಿಗಳು. ಮಾಲೀ ಕೆಲಸ ಮಾಡುತ್ತಿದ್ದರು. ಬಹಳ ಪ್ರಾಮಾಣಿಕ ಮತ್ತು ಶಿಸ್ತುಬದ್ಧ ವ್ಯಕ್ತಿ ತಿವಾರಿಯವರು. ತಾಯಿ ಮಹಾ ದೈವಭಕ್ತೆ ಬಡತನದಲ್ಲೂ ಅಚ್ಚುಕಟ್ಟಾಗಿ ಜೀವನ ನಡೆಸುತ್ತಿದ್ದ ಮಹಿಳೆ. ಮನೆಗೆ ಸಹಾಯ ಮಾಡಬೇಕೆಂದು ಚಂದ್ರಶೇಖರ ಮುಂಬೈಗೆ ಹೋಗಿ ಬಂದರಿನ ಹಡಗಿನಿಂದ ಮೂಟೆ ಇಳಿಸುವ ಕೆಲಸಪಡೆದ. ಕೂಲಿಗಳ ಜೊತೆ ವಾಸ. ಅಲ್ಲಿ ಅವನಿಗೆ ಸಮಾಧಾನ ಸಿಗಲಿಲ್ಲ.ನಾನು ಶಾಲೆಗೆ ಸೇರಬೇಕು ಸಂಸ್ಕೃತ ಓದಿ ದೊಡ್ಡ ವಿದ್ವಾಂಸನಾಗಬೇಕು ಎಂಬ ಆಸೆಯಿಂದ ಮುಂಬೈನಿಂದ ನೇರವಾಗಿ ಕಾಶಿಗೆ ಬಂದಿಳಿದ. ಮತ್ತು ಶಾಲೆಗೆ

ಸೇರಿ ವಿದ್ಯಾಭ್ಯಾಸ ಪ್ರಾರಂಭಿಸಿದ. 1921ನೆಯ ಇಸವಿ ಆಗ ಮಹಾತ್ಮ ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದ್ದರು. ಅದರಲ್ಲಿ ಮಹಾತ್ಮಗಾಂಧಿ, ಮದನ ಮೋಹನ ಮಾಳವೀಯ, ಮೋತಿಲಾಲ್ ನೆಹರು, ಲಾಲಾ ಲಜಪತ್ರಾಯ್ ಹೀಗೆ ಮಹಾ ನಾಯಕರು ಚಳುವಳಿಯಲ್ಲಿ ಭಾಗಿಯಾಗಿದ್ದರು. ಶಾಲಾ ಕಾಲೇಜಿನ ವಿದ್ಯಾರ್ಥಿಗಳೂ ಇದರಲ್ಲಿ ಧುಮುಕಿದರು. ಆಗ ಚಂದ್ರಶೇಖರನೂ ಸಹ ಧುಮುಕಿದನು. ನಾನು ಆಂಗ್ಲರ ದಬ್ಬಾಳಿಕೆ ವಿರೋಧಿಸಬೇಕು, ತಾಯಿನಾಡನ್ನು ಬಿಡುಗಡೆ ಮಾಡಬೇಕು. ಭಾರತಾಂಬೆಯ ಸೇವೆ ಮಾಡಬೇಕು ಎಂದು ಯೋಚಿಸಿ ಚಳುವಳಿಗೆ ಧುಮಿಕಿದನು. ನಿಗಿ ನಿಗಹೊಳೆಯುವ ತೇಜಸ್ವಿ ಕಣ್ಣುಗಳು, ಆ ಹೊಳಪಿಡಿ ಉರಿ ಮೀಸೆ ಹೊಸೆಯುವ ಭೀಮ ಬಾಹುಗಳು, ದೇಶಪ್ರೇಮ, ಪರಾಕ್ರಮ, ಕ್ರೌರ್ಯ, ಕೌಶಲ್ಯ, ಲೋಕ ಸಂಗ್ರಹ, ಪ್ರಚಂಡ ಧೈರ್ಯ. ಕಟ್ಟುಮಸ್ತಾದ ಶರೀರ ಆಕರ್ಷಿಕ ಮುಖಭಾವ, ತಾರುಣ್ಯದ ಭೋಗಗಳನ್ನು ಮೆಟ್ಟಿನಿಂತು, ದೇಶಕ್ಕೋಸ್ಕರ ತನ್ನನ್ನು ತಾನು ಅರ್ಪಿಸಿಕೊಳ್ಳುವ ತ್ಯಾಗ ಭಾವನೆಯ ಈ ವ್ಯಕ್ತಿ ಭಾರತ ಮಾತೆಯ ಸುಪುತ್ರನಲ್ಲದೆ ಮತ್ತೇನು. ತನ್ನ 16ನೇ ವಯಸ್ಸಿಗೆ ಕ್ರಾಂತಿಕಾರಿ ಸೈನಿಕನಾದ. ನಂತರ ಕ್ರಾಂತಿಕಾರಿ ರಾಮಪ್ರಸಾದ್ ಬಿಸ್ಮಿಲ್‌ರವರ ಹಿಂದುಸ್ತಾನ್ ರಿಪಬ್ಲಿಕನ್ ಆರ್ಮಿ ಎಂಬ ಸಂಸ್ಥೆ ಸೇರಿದ. ಕ್ರಾಂತಿಕಾರಿ ಚಟುವಟಿಕೆ ಎಂದರೇನು ಎಂಬುದನ್ನು ಕಲಿತ. ಕ್ರಾಂತಿಕಾರಿಯ ಸಂಸ್ಥೆಗೆ ಶಸ್ತ್ರಾಸ್ತ್ರಗಳು ಬೇಕಿತ್ತು. ಇವರಲ್ಲಿ ಹಣವಿರಲಿಲ್ಲ ಎಲ್ಲಿಂದತರುವುದು.ಅದಕ್ಕೆ ಒಂಬತ್ತು ಜನರ ತಂಡ ಸಿದ್ಧವಾಯಿತು. ಅವರಲ್ಲಿ ಚಂದ್ರಶೇಖರನೂ ಒಬ್ಬ. ಲಕ್ನೋ ಸಮೀಪ ಕಾಕೋರಿ ಎಂಬ ರೈಲು ನಿಲ್ದಾಣದ ಹತ್ತಿರ ರೈಲು ನಿಲ್ಲಿಸಿ ಅದರಲ್ಲಿ ರವಾನೆಯಾಗುತ್ತಿದ್ದ ಸರ್ಕಾರದ ಖಜಾನೆ ಲೂಟಿ ಮಾಡಿದರು. ಆದರೆ ಎಚ್ಚರಗೊಂಡ ಪೋಲೀಸರು ಮಿಂಚಿನ ದಾಳಿ ಮಾಡಿ ರಾಮ್ ಪ್ರಸಾದ್ ಬಿಸ್ಮಿಲ್ ಸೇರಿ ಎಲ್ಲರನ್ನೂ ಬಂಧಿಸಿದರು. ಆದರೆ ಮಿಂಚಿನಂತೆ ಪರಾರಿಯಾದವನು ಚಂದ್ರಶೇಖರ್ ಆಜಾದ್ ಒಬ್ಬನೇ. ತಲೆಮರೆಸಿಕೊಂಡು ಕೂಲಿಕಾರನ, ಸನ್ಯಾಸಿಯ, ಸಾಹುಕಾರನ, ಡ್ರೈವರ್, ಕೊನೆಗೆ ಪೋಲೀಸರರೀತಿ ವೇಷ ಬದಲಿಸಿಕೊಂಡು ಜಾನ್ಸಿ, ಡೆಲ್ಲಿ, ಲಾಹೋರ್, ಕಾಶಿ ಮುಂತಾದಕಡೆ ಪೋಲೀಸರಿಗೆ ಚಳ್ಳೆಹಣ್ಣು ತಿನ್ನಿಸಿಕೊಂಡು ಓಡಾಡುತ್ತಿದ್ದನು. 1927 ಡಿಸೆಂಬರ್ 19ರಂದು ಬಿಸ್ಮಿಲ್ಲರನ್ನು ಗಲ್ಲಿಗೇರಿಸಿದರು. ಇನ್ನೂ ಮೂವರನ್ನು ಗಲ್ಲಿಗೇರಿಸಿದರು. ಚಂದ್ರಶೇಖರ್ ಆಜಾದನ ಮನಸ್ಸು, ರಕ್ತ ಕುದಿಯಲಾರಂಬಿಸಿತು. ಚದುರಿ ಹೋಗಿದ್ದ ಕ್ರಾಂತಿಕಾರಿಗಳನ್ನು ಸಂಘಟಿಸಲು ಪ್ರಾರಂಭ ಮಾಡಿದ. ಅದೇ ಸಮಯದಲ್ಲಿ ಇವನಂತೆಯೇ ಒಬ್ಬ ತರುಣ ಕ್ರಾಂತಿಕಾರಿ ಬೆಳೆಯುತ್ತಿದ್ದ. ಅವನೇ ಸರ್ದಾರ್ ಭಗತ್ ಸಿಂಗ್. ಆಜಾದನೊಂದಿಗೆ ಸೇರಿದರೆ ಸಂಘಟನೆ ಬಲಗೊಳಿಸಬಹುದು ಎಂದು ಭಗತ್ ಸಿಂಗನ ನಂಬಿಕೆ. ಸಾವಿರದ 1928ರ ಸೆಪ್ಟೆಂಬರ್ 8ರಂದು ಎಲ್ಲಾ ಕ್ರಾಂತಿಕಾರಿಗಳು ಡೆಲ್ಲಿಯಲ್ಲಿ ಪಾಳು ಬಿದ್ದ ಕೋಟೆ ಫಿರೋಜ್ ಕೊಟ್ಲಾ ಎಂಬಲ್ಲಿ ಸಭೆ ಸೇರಿದರು. ಹಿಂದುಸ್ತಾನ ಸೋಷಿಲಿಸ್ಟ್ ರಿಪಬ್ಲಿಕ್ ಅಸೋಸಿಯೇಷನ್ ಎಂಬ ಸಂಸ್ಥೆ ಹುಟ್ಟು ಹಾಕಿದರು. ಅದಕ್ಕೆ ಪ್ರಧಾನ ಸೇನಾಪತಿ ಚಂದ್ರಶೇಖರ್ ಆಜಾದ್ ಆ ದಿನಗಳಲ್ಲಿ ಆಂಗ್ಲ ಸರ್ಕಾರ ಒಂದು ಹೊಸ ಯೋಜನೆ ಮಾಡಿತು. ಸೈಮನ್ ಎಂಬ ಒಬ್ಬ ಅಧಿಕಾರಿಯ ನಾಯಕತ್ವದಲ್ಲಿ ಒಂದು ಸಮಿತಿಯನ್ನು ರಚಿಸಿತು. ಇದರ ಉದ್ದೀಶ್ಯ ಅಸಹಕಾರ ಚಳುವಳಿಯನ್ನು ಹತ್ತಿಕ್ಕುವುದೇ ಆಗಿತ್ತು ಸೈಮನ್ ಸಮಿತಿ ಲಾಹೋರ್ಗೆ ಬಂದಾಗ ಅದರ ವಿರುದ್ಧ ಒಂದು ದೊಡ್ಡ ಪ್ರದರ್ಶನ ನಡೆಯಿತು. ಅದರ ನಾಯಕರೇ ಪಂಜಾಬಿನ ಸಿಂಹ ಲಾಲಲಜಪತ್ ರಾಯ್ ಅದಕ್ಕೆ ಜನರನ್ನು ಸೇರಿಸಿದವನು ಆಜಾದ್ಮತ್ತು ಅವನ ಗೆಳೆಯರು. ಚಳುವಳಿಕಾರರ ಮೇಲೆ ಪೋಲೀಸರಂತೂ ಬಹಳ ಅನಾಗರಿಕವಾಗಿ ವರ್ತಿಸಿದರು. ಸ್ಯಾಂಡರ್ಸ್ ಎಂಬ ಅಧಿಕಾರಿ ತನ್ನ ಕೈಯಿಂದಲೇ ಲಾಲಾಜಿಯವರನ್ನು ಚೆನ್ನಾಗಿ ಬಡಿದ. ರಕ್ತ ಹರಿಯಿತು. ಪೆಟ್ಟುಗಳಿಂದ ನರನಾಡಿಗಳಲ್ಲಿ ಸಹಿಸಲಾಗದ ನೋವು. 1928 ನವೆಂಬರ್ 17ರಂದು ಲಾಲಾಲಜಪತ್ ರಾಯ್ ನಿಧನ ಹೊಂದಿದರು. ಲಾಲಾಜಿ ನಿಧನದಿಂದ ಆಜಾದ್, ಭಗತ್ ಸಿಂಗ್ ಮತ್ತು ಅವರ ತಂಡ ಕೆರಳಿ ಕೆಂಡವಾದರು. ಮತ್ತು ಬಹಳ ದುಃಖಿತರಾದರು. ಆಗಲೇ ಶುರುವಾಯಿತು ಸ್ಯಂಡರ್ಸನನ್ನು ಮುಗಿಸುವ ಯೋಜನೆ. ಲಾಲಾಜಿ ಕಾಲವಾದ ಒಂದು ತಿಂಗಳಿಗೆ ಸರಿಯಾಗಿ ಎಲ್ಲರೂ ಶಸ್ತ್ರಸಜ್ಜಿತರಾಗಿ ಪೋಲಿ ಸೂಪರಿಂಟೆಂಡೆಂಟ್ ಆಫೀಸಿನ ಸುತ್ತಮುತ್ತ ನಿಂತು, ಗುಂಡಿಗೆ ಗುಂಡಿನಿಂದ, ಕತ್ತಿಗೆ ಕತ್ತಿಯಿಂದಲೇ ಉತ್ತರ ಕೊಡಬೇಕೆಂದು ಆ ಅಧಿಕಾರಿಯನ್ನು ಮುಗಿಸುವುದರ ಮೂಲಕ ಲಾಲಾಜಿ ಅವರ ಕೊಲೆಗೆ ಪ್ರತಿಕಾರ ತೀರಿಸಬೇಕೆಂಬುದು ಅವರ ಉದ್ದೀಶ್ಯ. ಲಾಲಾಜಿಯವರನ್ನು ಕೊಂದ ಸ್ಯಾಂಡರ್ಸ್ ಕಚೇರಿಯಿಂದ ಹೊರ ಬರುತ್ತಿದ್ದಂತೆ ಭಗತ್ ಸಿಂಗ್ ಮತ್ತು ರಾಜಗುರು ಅವನ ಮೇಲೆ ಗುಂಡು ಹಾರಿಸಿ ಕೊಂದು ಹಾಕಿದರು. ಪೋಲೀಸರು ಭಗತ್ ಸಿಂಗ್ ಮತ್ತು ರಾಜಗುರುವನ್ನು ಅಟ್ಟಿಸಿಕೊಂಡು ಓಡಿದರು. ಇನ್ನೇನು ಅವರು ಭಗತ್ ಸಿಂಗನನ್ನು ಹಿಡಿಯಬೇಕೆ ಎನ್ನುವಷ್ಟರಲ್ಲಿ ಮರೆಯಲ್ಲಿದ್ದ ಚಂದ್ರಶೇಖರ್ ಪೋಲೀಸರಿಗೆ ಗುಂಡು ಹಾರಿಸಿದ. ಅವರು ಅಲ್ಲೇ ನೆಲಕ್ಕುರುಳಿದರು. ಹೀಗೆ ಇಬ್ಬರು ಗೆಳೆಯರನ್ನು ಆಜಾದ್ ರಕ್ಷಿಸಿದ. ತಕ್ಷಣ ಪೋಲೀಸರು ಕ್ರಾಂತಿಕಾರಿಗಳನ್ನು ಹುಡುಕಲು ಪ್ರಾರಂಭಿಸಿದರು. ಮೂವರು ವೇಷ ಬದಲಿಸಿಕೊಂಡುಲಾಹೋರಿನಿಂದ ಹೊರ ಹೋಗಿ ತಪ್ಪಿಸಿಕೊಂಡರು. 1929ರ ಏಪ್ರಿಲ ನಲ್ಲಿ ಸರ್ಕಾರ ಒಂದು ದುಷ್ಟ ಯೋಜನೆಗೆ ಕೈ ಹಾಕಿತು ಭಾರತದ ಜನರ ಗುಲಾಮಗಿರಿಯಬಂಧನ ವನ್ನು ಮತ್ತಷ್ಟು ಬಿಗಿ ಮಾಡುವ ಸಂಚು. ಅಂಥಹ ಮಸೂದೆಯನ್ನು ಅಸೆಂಬ್ಲಿಯಲ್ಲಿ ಮಂಡಿಸುವ ಯೋಜನೆ. ಈ ಕುತಂತ್ರ ಪ್ರತಿಭಟಿಸಲು ಆಜಾದ್ ತಂಡ ತೀರ್ಮಾನಿಸಿತು. ಆ ಮಸೂದೆ ಮಂಡನೆಯಾಗುವಾಗ ಭಗತ್ ಸಿಂಗ್ ಮತ್ತು ಬಟುಕೇಶ್ವರದತ್ತ ಅಸೆಂಬ್ಲಿಯೊಳಗೆ (ಇಂದಿನ ಹಳೆಯ ಪಾರ್ಲಿಮೆಂಟ್ ಭವನ) ಬಾಂಬ್ ಸಿಡಿಸಿ ಕರಪತ್ರ ಏರಚ ಬೇಕೆಂದು ತೀರ್ಮಾನವಾಯಿತು. 1920 ಏಪ್ರಿಲ್ 28 ರಂದು ಅಸೆಂಬ್ಲಿ ನಡೆಯುತ್ತಿರುವಾಗಲೇ ಬಾಂಬ್ ಸ್ಫೋಟವಾಯಿತು. *ಕ್ರಾಂತಿ ಚಿರಾಯುವಾಗಲಿ* ಎಂಬ ಘೋಷಣೆಮೊಳಗಿತು. ಅವರಿಬ್ಬರೂ ಅಲ್ಲಿಯೇ ಬಂಧಿತರಾದರು. ಆದರೆ ಆಜಾದ್ ಅಲ್ಲಿಂದ ಜಾರಿಕೊಂಡಿದ್ದ. ಈ ಘಟನೆಯ ರೂವಾರಿ ಆಜಾದನೇ ಎಂದು ಬ್ರಿಟಿಷರಿಗೆ ಖಚಿತವಾಯಿತು. ಅವನಿಗಾಗಿ ತೀವ್ರತಮದ ಹುಡುಕಾಟ ಶುರುವಾಯಿತು. ಆಜಾದ್ ಸಲೀಸಾಗಿ ಅವರಿಗೆ ಸಿಗುವ ಮೂರ್ಖನಾಗಿರಲಿಲ್ಲ. ಎದುರಿಗೆ ಕಂಡರೂ ಅವರಿಗೆ ಚೆಳ್ಳೆಹಣ್ಣು ತಿನ್ನಿಸಿ ಪರಾರಿ ಆಗುತ್ತಿದ್ದ. ಒಮ್ಮೆಯಂತೂ ಒಬ್ಬ ಪೇದೆ ಆಜಾದನನ್ನು ಹಿಡಿಯಲು ಅಟ್ಟಿಸಿಕೊಂಡು ಹೋಗುತ್ತಿದ್ದ. ಒಂದು ನಿರ್ಜನ ಪ್ರದೇಶದಲ್ಲಿ ಆಜಾದ್ ನಿಂತುಬಿಟ್ಟ. ಭೇಟೆ ಸಿಕ್ಕಿತೆಂದು ಪೇದೆಗೆ ಆನಂದ. ಹತ್ತಿರ ಬರುವಾಗ ಆಜಾದ್ ತನ್ನ ಜೇಬಿಗೆ ಕೈ ಹಾಕಿ ಪಿಸ್ತೂಲು ತೆಗೆದು ನಿನಗೆ ಬದುಕುವ ಆಸೆ ಇದೆಯಾ ಎಂದು ಕೇಳಿದ. ಆ ಪೇದೆ ಒಂದೇ ಉಸಿರಿಗೆ ಓಟಾಕಿತ್ತು ಮನೆ ತಲುಪುವವರೆಗೂ ಹಿಂದುರಿಗಿ ನೋಡಲಿಲ್ಲ.

ಆಜಾದ್ ತನ್ನ ಮನೆ ಬಿಟ್ಟು ಹತ್ತುವರ್ಷವಾಗಿದೆ ಊರಲ್ಲಿ ಮುದಿ ತಂದೆ ತಾಯಿಗಳು ದುಡಿಯಲಾರದೆ ಒಂದು ಹೊತ್ತು ಊಟಕ್ಕೂ

ತೊಂದರೆ. ಮೈಮೇಲೆ ಹರಿದು ತೇಪೆಹಾಕಿಕೊಂಡ ಬಟ್ಟೆ ಧರಿಸಿದ್ದಾರೆ. ಇದೆಲ್ಲವನ್ನು ನೋಡಿದ ಆಜಾದನ ಗೆಳೆಯರು ಹಣ ಸಂಗ್ರಹಿಸಿ ವೃದ್ಧ ತಂದೆ ತಾಯಿಗೆ ಕೊಡಲು ಹೋದಾಗ ಆಜಾದನೇ ತಡೆದು ರಾಷ್ಟ್ರಕ್ಕಾಗಿ ಮಡಿಪಾಗಿಟ್ಟ ನನ್ನ ಹೆಸರಿನ ಪ್ರಭಾವದಿಂದ ಸಂಗ್ರಹ ಮಾಡಿದ ಹಣ ರಾಷ್ಟ್ರಕ್ಕೆ ಸೇರಬೇಕು. ಒಂದು ಬಿಡಿಗಾಸೂ ನನ್ನ ಮನೆ ಖರ್ಚಿಗೆ ವಿನಿಯೋಗ ಆಗಬಾರದು. ಈ ತ್ಯಾಗಭಾವನೆಯಲ್ಲಿ ಆಜಾದ್ ಯಾವ ಮಟ್ಟಕ್ಕೆ ಏರಿದ್ದ ಎಂದುತಿಳಿದುಬರುತ್ತದೆಎಂತಹ ಆದರ್ಶಅವನದು. ಇನ್ನೂ ಮೈನವಿರೇಳಿಸುವಂಥಹ ಅನೇಕ ಘಟನೆಗಳಿವೆ. ಆದರೆ ನನಗೆ ನೀಡಿರುವ ಸ್ಥಳಾವಕಾಶದಲ್ಲಿ ನಮೂದಿಸಲು ಆಗುತ್ತಿಲ್ಲ.

ಆಜಾದನ ಅಂತಿಮ ದಿನದ ರೋಮಾಂಚಕ ಘಟನೆಯನ್ನು ತಿಳಿಯೋಣ.ಪೊಲೀಸರಂತೂ ಆಜಾದನನ್ನು ಹಿಡಿಯಲು ಸತತ ಪ್ರಯತ್ನ, ವಿಫಲತೆ,ಕೋಪ ಎಲ್ಲವೂ ಆಗಿ ಹೋಗುತ್ತಿತ್ತು. ಪೊಲೀಸರು ದೊಡ್ಡ ಬಲೆಯನ್ನೇ ಬೀಸಿದ್ದರು. ಆಜಾದನ ಸಂಸ್ಥೆಯಲ್ಲಿ ಸದಸ್ಯನಾಗಿ ವೀರಭದ್ರ ತಿವಾರಿ ಎಂಬ ವ್ಯಕ್ತಿ ಹಣದ ಆಮಿಷಕ್ಕೆ ಒಳಗಾಗಿ ಆಜಾದನು ಇರುವ ಸುಳಿವು ಕೊಟ್ಟು ದ್ರೋಹ ಮಾಡಿದ.

1931 ಫೆಬ್ರವರಿ 27ರಂದು ಆಜಾದ್ ಒಬ್ಬರನ್ನು ಭೇಟಿ ಮಾಡಲು ಅಲಹಾಬಾದಿನ (ಇಂದಿನ ಪ್ರಯಾಗರಾಜ್) ಆಲ್ಫ್ರೆಡ್ ಪಾರ್ಕಿನ ಕಡೆ ಹೆಜ್ಜೆ ಹಾಕಿದ. ಆ ವ್ಯಕ್ತಿಯೊಂದಿಗೆ ಮರದ ಕೆಳಗೆ ಕುಳಿತು ಏನೋ ಮಾತನಾಡುತ್ತಿದ್ದ. ಇದನ್ನು ಅರಿತಿದ್ದ ವೀರಭದ್ರ ತಿವಾರಿ ಪೊಲೀಸರಿಗೆ ತಿಳಿಸಿದ. ಶಿಖಾರಿಗ ಒಳ್ಳೆ ಸಮಯವೆಂದುತಿಳಿದು 80 ಜನ ಪೊಲೀಸರು ಪಾರ್ಕನ್ನು ಸುತ್ತು ವರಿದರು ಅಧಿಕಾರಿಯೊಬ್ಬ ಆಜಾದನ ಮೇಲೆ ಗುಂಡು ಹಾರಿಸಿದ. ಅದು ಅವನ ತೊಡೆಗೆ ಬಡಿಯಿತು. ಆಗಲೇ ತನ್ನ ಪಿಸ್ತೂಲನ್ನು ಹೊರತೆಗೆದು ಪೆಟ್ಟು ತಿಂದ ಹುಲಿಯಂತೆ 24 ವರ್ಷದ ಆ ಹುಡುಗ ಎದ್ದು ನಿಂತ ನಿಂತಲ್ಲಿ ನಿಲ್ಲದೆ ಆ ಮರದ ಸುತ್ತ ಚಿರತೆಯಂತೆ ಓಡಾಡಿಕೊಂಡು ಗುಂಡು ಹಾರಿಸತೊಡಗಿದ. ಮಹಾಭಾರತದ ಅಭಿಮನ್ಯುವಿನಂತೆ ಏಕಾಂಗಿ ಹೋರಾಟ. ಪೊಲೀಸನವರಿಗೆ ಕೂಗಿ ಹೇಳಿದ ನಾನೂ ನಿಮ್ಮವನೇ, ನಾವೆಲ್ಲಾ ಈ ದೇಶದವರೇ ನಿಮ್ಮ ದೇಶದ ದಾಸ್ಯತ್ವ ಬಿಡುಗಡೆಗಾಗಿ ಹೋರಾಡುತ್ತಿರುವೆ. ಆದರೆ ಬ್ರಿಟಿಷರ ಬೂಟುಕಾಲು ನೆಕ್ಕುತ್ತಿದ್ದ ಆ ಪೊಲೀಸರಿಗೆ ಇದೆಲ್ಲ ಅರ್ಥವಾಗಲಿಲ್ಲ. ಅವನ ಪಿಸ್ತೂಲಿನಲ್ಲಿದ್ದ ಗುಂಡುಗಳ ಲೆಕ್ಕ ಅವನಿಗೆ ಗೊತ್ತಿತ್ತು. ಕೊನೆಯ ಒಂದು ಗುಂಡು ಇದೆ. ಜೀವಂತವಾಗಿ ನಾನು ಎಂದೂ ಪೊಲೀಸರಿಗೆ ಸಿಗುವುದಿಲ್ಲ ಎಂಬ ಬಾಲ್ಯದ ಪ್ರತಿಜ್ಞೆ ನೆನಪಿಗೆ ಬಂತು. ತನ್ನ ತಲೆಗೆ ಪಿಸ್ತೂಲನ್ನು ಇಟ್ಟು ಚಲಾಯಿಸಿಕೊಂಡ. ಅವನ ಶರೀರ ಪದತಲಕ್ಕೆ ಬಿದ್ದಿತು. ಅಕ್ಷರಶಃ ತನ್ನ ರಕ್ತದಿಂದ ತಾಯಿಭಾರತಿಗೆ ಅಭಿಷೇಕ ಮಾಡಿದ. ಆ ಸ್ಥಳ ಪವಿತ್ರವಾಯಿತು. ಆ ವೃಕ್ಷ ಪೂಜಾ ಕೇಂದ್ರವಾಯಿತು. ಆ ಪಾರ್ಕು ತೀರ್ಥಕ್ಷೇತ್ರವಾಯಿತು. ನೋಡಲು ಬರುತ್ತಿದ್ದ ಜನಸಾಗರವನ್ನು ಕಂಡ ಬ್ರಿಟಿಷರು ಸಹಿಸಲಾರದೆ ಆ ಮರವನ್ನೇ ಧ್ವಂಸ ಮಾಡಿದರು. ಆದರೆ ಕೋಟ್ಯಾಂತರ ಹೃದಯದಲ್ಲಿ ಬೆಳೆದು ನಿಂತಿರುವ ಆಜಾದ್ ಚಂದ್ರಶೇಖರ್ ಎಂಬ ವಟವೃಕ್ಷವನ್ನು ನಾಶಮಾಡಲು ಸಾಧ್ಯವೇ.

**ಭಾರತ್ ಮಾತಾಕಿ ಜೈ**


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)** ಜಾಹಿರಾತು

**ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.**

**ಮೊ : 944 26771695**

**ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ**

ಹೆಸರು : __________

ವಿಳಾಸ __________

ಸದಸ್ಯತ್ವದ ಸಂಖ್ಯೆ : __________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

**ಚಂದಾದಾರರ ಸಹಿ/–**

**AKBMS Membership Account Acc Name :** Akhila Karnataka Brahmana Mahasabha

Bank : Karnataka Bank Ltd A/c No : 1072500102058301I

FSC : KARB0000107BRANCH : BANASHANKARI 2ND STAGE

ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು **ಮೊ.ನಂ. 9945850620** ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.

ಹಿಂದಿನ ಸಂಚಿಕೆಯಿಂದ

# ದೈವ ಮತ್ತು ಪುರುಷ ಪ್ರಯತ್ನ

**ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು**

**– ಡಾ. ಕೆ. ಎಲ್ ಶಂಕರನಾರಾಯಣ ಜೋಯ್ಸ್**

ಆಯುಷ್ಯದ ವಿಚಾರದಲ್ಲಿಯೂ ಋಷಿಮಹರ್ಷಿಗಳ ಆಶಯವೇನೆಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕು. ಅವರವರು ಮಾಡಿರುವ ಕರ್ಮಗಳು ಸಜೀವವಾದ ಬೀಜಗಳಂತೆ ಉಳಿದುಕೊಂಡಿರಲು ಒಂದು ಹುಟ್ಟಿಗೆ ಕಾರಣವಾಗುತ್ತದೆ. **'ಸತಿಮೂಲೇ ತದ್ವಿಪಾಕಃ ಜಾತ್ಯಾಯುರ್ಭೋಗಾಃ'** – ಮೂಲವು ಉಳಿದಿರಲು ಅದರ ಫಲವಾಗಿ ಹುಟ್ಟು ಆಯುಷ್ಯ ಭೋಗಗಳು ಉಂಟಾಗುವುವು' ಎಂದು ಪಾತಂಜಲಯೋಗಸೂತ್ರವು ತಿಳಿಸುತ್ತದೆ. ಅಂದರೆ ಜನ್ಮಾಂತರದ ಕರ್ಮಗಳಿಂದ ನಿರ್ದಿಷ್ಟವಾದ ಆಯುಷ್ಯವು ಲಭಿಸಿದರೂ ಈ ಜನ್ಮದ ಕರ್ಮಗಳಿಂದ ಏರಿಳಿತಗಳನ್ನು ಹೊಂದಲು ಅವಕಾಶವಿದೆ. ಆಯುಷ್ಯದ ಹಾನಿಗಾಗಲೀ ಆಯುಷ್ಯದ ವೃದ್ಧಿಗಾಗಲೀ ವಿಶೇಷಪ್ರಯತ್ನಗಳು ನಡೆದಾಗ, ತಿಳಿದೋ ತಿಳಿಯದೆಯೋ ಆಯುಷ್ಯದ ಮೇಲೆ ಕೆಲಸ ಮಾಡುವ ಘಟನೆಗಳುಂಟಾದಾಗ ಹುಟ್ಟಿನಿಂದ ನಿರ್ಣಯವಾದ ಆಯುಷ್ಯದ ವೃದ್ಧಿಕ್ಷಯಗಳನ್ನು ಹೊಂದಬಹುದಾಗಿದೆ. ಅವನವನ ಹುಟ್ಟಿಗನುಗುಣವಾದ ಧರ್ಮಕರ್ಮನಿರತನಾಗಿ, ಮಾನವಸಹಜವಾದ ಆತ್ಮಗುಣಗಳಿಂದ ಕೂಡಿ ಬದುಕಿದಾಗ ಜನ್ಮಾಂತರದ ಕರ್ಮಫಲವಾದ ಆಯುಷ್ಯವು ಘಟಿಸುವುದು. ಅದನ್ನೇ–

**ಯೇ ಧರ್ಮಕರ್ಮನಿರತಾಃ ವಿಜಿತೇನ್ದ್ರಿಯಾ ಯೇ**
**ಯೇ ಪಥ್ಯಭೋಜನಜುಷಃ ದ್ವಿಜದೇವಭಕ್ತಾಃ ।**
**ಲೋಕೇ ನರಾ ದಧತಿ ಯೇ ಕುಲಶೀಲಲೀಲಾಂ**
**ತೇಷಾಮಿದಂ ಕಥಿತಮಾಯುರುದಾರಧೀಭಿಃ ॥**

'ಯಾರು ತಮ್ಮ ತಮ್ಮ ಜನ್ಮಸಹಜವಾದ ಧರ್ಮಕ್ಕೆ ಅನುಗುಣವಾದ ಕರ್ಮದಲ್ಲಿ ನಿರತರಾಗಿರುವರೋ, ಇಂದ್ರಿಯಗಳನ್ನು ತಮ್ಮ ಹತೋಟಿಯಲ್ಲಿಟ್ಟು–ಕೊಂಡಿರುವರೋ, ಹಿತಮಿತವಾದ ಆಹಾರವನ್ನು ಭುಂಜಿಸುವರೋ, ಗುರುಹಿರಿಯರಲ್ಲೂ ಬ್ರಾಹ್ಮಣರಲ್ಲೂ ದೇವರಲ್ಲೂ ಭಕ್ತಿಯುಳ್ಳವರೋ, ತಮತಮಗೆ ಹೊಂದುವ ಶೀಲದ ಸಂಪತ್ತಿನಿಂದ ಕೂಡಿರುವರೋ ಅಂತಹವರಿಗೆ ಆಯುಷ್ಯವು ಈ ಪ್ರಮಾಣದಲ್ಲಿರುತ್ತದೆಂದು (ಆಯುರ್ದಾಯ ಗಣಿತವು ಹೇಳುವಂತೆ) ದೂರದರ್ಶಿಗಳಾದ ಋಷಿಗಳಿಂದ ನಿರ್ಣಯಿಸಲ್ಪಟ್ಟಿದೆ' ಎಂದು ಶಾಸ್ತ್ರವೂಸಹ ನಿರ್ಣಯಿಸುತ್ತದೆ. ಇಂತಹ ಆದರ್ಶವಾದ ಚೌಕಟ್ಟಿನಲ್ಲಿ ಜೀವನ ಮಾಡುವವನಿಗೆ ಪೂರ್ವಜನ್ಮದ ಸುಕೃತ ದುಷ್ಕೃತಗಳು ಕಾಲಕಾಲಕ್ಕೆ ತಮ್ಮ ಫಲಗಳನ್ನು ಕೊಟ್ಟುಕೊಳ್ಳುತ್ತಾ ಅವುಗಳೆಲ್ಲದರ ಭೋಗದ ಅಂತ್ಯದಲ್ಲಿ ದೇಹನಾಶವನ್ನು ಉಂಟುಮಾಡುತ್ತವೆ. ಇಂತಹ ಆದರ್ಶವಾದ ಜೀವನದ ದಿನಗಳಲ್ಲೇ ತಿಳಿದೋ ತಿಳಿಯದೆಯೋ ಅತ್ಯುತ್ತಮವಾದ ಪುಣ್ಯವೋ ಪಾಪವೋ ನಡೆದಲ್ಲಿ ಅದರ ಪರಿಣಾಮವಾಗಿ ಆಯುಷ್ಯವು ವೃದ್ಧಿಯನ್ನು ಹೊಂದಲೂಬಹುದು. ಕ್ಷಯಿಸಲೂ ಬಹುದು. ಅಂತಹ ಅನೇಕ ಘಟನೆಗಳನ್ನು ಪುರಾಣ–ಇತಿಹಾಸಗಳಲ್ಲಿ ಉಲ್ಲೇಖಿಸುವುದನ್ನು ನೋಡುತ್ತೇವೆ. ಮಾರ್ಕಂಡೇಯನ ವೃತ್ತಾಂತವು ಇದಕ್ಕೊಂದು ನಿದರ್ಶನವಾಗಿದೆ. ಬಹುಕಾಲ ಪುತ್ರನಾಗದೇ ಖಿನ್ನನಾಗಿದ್ದ ಮೃಕಂಡುಮುನಿಯು ತನ್ನ ಸಹಧರ್ಮಿಣಿಯಾದ ಸುಮಿತ್ರೆಯೊಡನೆ ದೀರ್ಘಕಾಲ ಶಿವನನ್ನು ಕುರಿತು ತಪಸ್ಸನ್ನಾಚರಿಸಿದನು. ಶಿವನು ಪ್ರಸನ್ನನಾಗಿ 'ನಿನಗೇನು ವರನ್ನು ಕೊಡಲಿ' ಎಂದು ಕೇಳಿದನು. ಮೃಕಂಡುವು ಸಂತಾನಸುಖವನ್ನು ಬಯಸಲಾಗಿ ಶಿವನು 'ನಿನಗೆ ಪುತ್ರಪ್ರಾಪ್ತಿಯ ಯೋಗವಿಲ್ಲ. ಆದರೂ ನಿನ್ನ ತಪಸ್ಸಿಗೆ ಮೆಚ್ಚಿದ್ದೇನೆ. ಗುಣಹೀನರಾದ ಹಲವು ಮಕ್ಕಳನ್ನು ಪಡೆಯಲು ಬಯಸುವೆಯೋ ಅಥವಾ ಗುಣವಂತರಾದರೂ ಅಲ್ಪಾಯುವಾದ ಒಬ್ಬ ಪುತ್ರನನ್ನು ಪಡೆಯಲು ಬಯಸುತ್ತೀಯೋ' ಎಂದು ಕೇಳಿದನು. ಮುನಿಯು 'ಅಲ್ಪಾಯುವಾದರೂ ಗುಣವಂತನಾದ ಪುತ್ರನಿರಲಿ' ಎಂದು ವರಿಸಿದನು. ಅದರಂತೆ ಅವನು ಪುತ್ರರತ್ನವನ್ನು ಶೀಘ್ರದಲ್ಲಿಯೇ ಪಡೆದನು. ಆದರೆ ಪುತ್ರನು ಅಲ್ಪಾಯುವಾಗಿದ್ದಾನೆಂಬ ದುಃಖವು ನಿರಂತರ ಬಾಧಿಸುತ್ತಿತ್ತು. ಕುಮಾರನು ಯಾರಾದರೂ ಪೂಜ್ಯರೂ ಹಿರಿಯರೂ ಕಂಡು ಬಂದರೆ ಸಾಷ್ಟಾಂಗವಾಗಿ ನಮಸ್ಕರಿಸುವ ಅಭ್ಯಾಸವನ್ನು ಸದಾಚಾರವಾಗಿ ಬೆಳೆಸಿಕೊಂಡಿದ್ದನು.

ಒಮ್ಮೆ ಸಪ್ತರ್ಷಿಗಳು ವೇಷಾಂತರವನ್ನು ಧರಿಸಿ ಸಂಚರಿಸುತ್ತಿರಲು ಅವರನ್ನು ಕಂಡ ಕುಮಾರನು ತನ್ನ ಅಭ್ಯಾಸದಂತೆ ದೀರ್ಘದಂಡಪ್ರಣಾಮವನ್ನು ಸಲ್ಲಿಸಿದನು. ಸಪ್ತರ್ಷಿಗಳು 'ದೀರ್ಘಾಯುವಾಗು' ಎಂದು ಆಶೀರ್ವದಿಸಿದರು. ಆದರೆ ಆ ಕೂಡಲೇ ಅವರ ದಿವ್ಯದೃಷ್ಟಿಗೆ ಕುಮಾರನು ಅಲ್ಪಾಯುರ್ಯೋಗದಿಂದ ಕೂಡಿದ್ದಾನೆಂದು ತಿಳಿದು ಬಂದಿತು. ಆದರೆ ತಮ್ಮ ವಾಕ್ ಎಂದಿಗೂ ಸುಳ್ಳಾಗುವ ಸಂಭವವಿಲ್ಲವೆಂಬ ಬಗ್ಗೆ ವರವನ್ನು ಪಡೆದವರಾಗಿದ್ದರು. ತಮ್ಮ ಮಾತು ಸುಳ್ಳಾಗದೇ ಆತನ ವಿಧಿಲಿಖಿತವೂ ಸುಳ್ಳಾಗದೇ ಇರುವುದಾದರೂ ಹೇಗೆ ಎಂದು ಸಂದೇಹವುಂಟಾಗಿ ಬ್ರಹ್ಮನ ಬಳಿಗೆ ಸಾರಿದರು. ಬ್ರಹ್ಮನು 'ನಿಮ್ಮ ಮಾತು ಸುಳ್ಳಾಗುವುದಿಲ್ಲ. ಕುಮಾರನು ಈಶ್ವರನನ್ನು ಕುರಿತು ತಪಸ್ಸನ್ನಾಚರಿಸಲಿ ಈಶ್ವರನ ವಿಶೇಷವಾದ ಅನುಗ್ರಹದಿಂದ ಅವನು ದೀರ್ಘಾಯುವಾಗುತ್ತಾನೆ' ಎಂದು ಪರಿಹಾರವನ್ನು ಸೂಚಿಸಿದನು. ಅನಂತರ ಕುಮಾರನು ಈಶ್ವರನನ್ನು ಕುರಿತು ತಪಸ್ಸನ್ನಾಚರಿಸುವಂತೆ ಅವರೇ ಮಾರ್ಗದರ್ಶನವಿತ್ತರು. ಅವನು ತನ್ನ ಅಲ್ಪ ಆಯುಷ್ಯಕ್ಕಾಗಿ ಕಿಂಚಿತ್ತೂ ಭಯಪಡದೇ ಈಶ್ವರನನ್ನು ಕುರಿತು ಘೋರವಾದ ತಪಸ್ಸೆಯನ್ನು ಆಚರಿಸಿದನು. ಮೃತ್ಯುವು ಸಮೀಪಿಸಲು ಸಾಕ್ಷಾತ್ ಯಮಧರ್ಮರಾಜನೇ ಅವನನ್ನು ಕರೆದೊಯ್ಯಲು ಬಂದನು. ಈಶ್ವರನು ಯಮನಿಗೆ ಯುಕ್ತವಾದ ಆದೇಶವನ್ನು ಮಾಡಿ ಕುಮಾರನಿಗೆ ದೀರ್ಘಾಯುಷ್ಯವನ್ನು ಅನುಗ್ರಹಿಸಿದನು. ಮುಂದೆ ಆ ಕುಮಾರನೇ ಮಾರ್ಕಂಡೇಯ ಮಹರ್ಷಿ ಎಂದು ಹೆಸರಾದನು. ಇಂತಹ ಹಲವು ವೃತ್ತಾಂತಗಳು ಈ ಸೃಷ್ಟಿಯಲ್ಲಿರುವ ಸತ್ಯವನ್ನೇ ವ್ಯಕ್ತಪಡಿಸುತ್ತವೆ.

**ಪ್ರಾಣೋ ಹಿ ಭೂತಾನಾಮಾಯುಃ** – ಪ್ರಾಣವೇ ಜೀವಕೋಟಿಗಳ ಆಯುಷ್ಯ ಎಂದುಶ್ರುತಿ. ಪ್ರಾಣವು ಅಪಾನವೆಂಬ ಇನ್ನೊಂದು ಕವಲನ್ನು ಹೊಂದಿ ಒಂದು ಮೇಲಕ್ಕೂ ಮತ್ತೊಂದು ಕೆಳಗೂ ಸೆಳೆಯುತ್ತಾ

ಉಸಿರಾಟದ ಕ್ರಿಯೆಯನ್ನು ಏರ್ಪಡಿಸಿವೆ. ಇಂತಹ ಉಸಿರಾಟವು ಒಬ್ಬ ಆರೋಗ್ಯವಂತನಾದ ಮನುಷ್ಯನಲ್ಲಿ ಇಪ್ಪತ್ತನಾಲ್ಕು ಗಂಟೆಗಳ ಒಂದು ದಿನದಲ್ಲಿ 21600 ಬಾರಿ ನಡೆಯಬೇಕೆಂದು ನಿಯಮವಿದೆ. ಈ ನಿಯಮವನ್ನನುಸರಿಸಿ ದಿನ, ಪಕ್ಷ, ಮಾಸ, ಋತು, ಅಯನ, ವರ್ಷಗಳ ಲೆಕ್ಕದಂತೆ ಆಯುಷ್ಯವೆಂಬುದು ನಿರ್ದಿಷ್ಟ ವರ್ಷಗಳ ಅವಧಿಯುಳ್ಳದ್ದಾಗಿರುತ್ತದೆ. ಇಂತಹ ಉಸಿರಾಟವನ್ನು ಅವಲಂಬಿಸಿ ಚಿತ್ತವು ಕೆಲಸ ಮಾಡುತ್ತಾ ಸುಖದುಃಖಗಳ ಅನುಭವಕ್ಕೆ ಅವಕಾಶವನ್ನು ಕಲ್ಪಿಸಿಕೊಡುವುದಾಗಿದೆ. ಈ ಉಸಿರಾಟವು ಪ್ರಾಣಾಯಾಮವಿದ್ಯೆಯ ಮೂಲಕ ಲಯಗೊಳ್ಳುವುದಾದರೆ–ಅದರೊಡನೆ ಚಿತ್ತವೃತ್ತಿಗಳೂ ಲಯಗೊಂಡು ಸುಖದುಃಖಗಳ ಅನುಭವದ ಪ್ರಪಂಚದಿಂದ ಹಿಂದೆ ಹೋಗಿ ಸಹಜಾನಂದದಲ್ಲಿ ರಮಿಸುವುದುಂಟು. ಇಂತಹ ಅನುಭವವು ಕಾಲವನ್ನು ಮೀರಿನಿಂತ ಒಂದು ಸ್ಥಿತಿಯಲ್ಲಿ ಲಭಿಸುವುದಾಗಿದೆ. ಈ ಅನುಭವವೂ ಸಹ ಒಬ್ಬನ ಬದುಕಿನ ಅವಧಿಯನ್ನು ಹಿಗ್ಗಿಸಿ ದೀರ್ಘಾಯುಷಿಯನ್ನಾಗಿ ಮಾಡಬಲ್ಲದು. ಪ್ರಾಣವಿದ್ಯೆಯನ್ನು ವಶಪಡಿಸಿಕೊಂಡವನಿಗೆ ಇತರರಂತೆ ಕಾಲಮಾನದ ಪರಿಗಣನೆ ಹೊಂದುವುದಿಲ್ಲ. ಅವನ ಕಾಲಮಾನ ಬೇರೆಯಾಗುತ್ತದೆ. ಇದರ ಹಿನ್ನೆಲೆಯಲ್ಲಿಯೇ ಇನ್ನೊಂದು ರೂಪದಲ್ಲಿ ಪ್ರಾಣವಿದ್ಯೆಯೇ ಆದ ಗಾಯತ್ರಿಯನ್ನು ಅನುಗ್ರಹರೂಪದಲ್ಲಿ ಪಡೆದು ಸಾಧನೆ ಮಾಡುವವನಿಗೂ ಸಹ ಆಯುಷ್ಯದ ವೃದ್ಧಿಯುಂಟಾಗುವುದು ಎಂದು ಹೇಳಲಾಗಿದೆ. ಹೀಗೆ ಅನೇಕ ಮಾರ್ಗಗಳನ್ನು ಅನುಸರಿಸಿ ಮಾಡುವ ಪುರುಷಪ್ರಯತ್ನದಿಂದ ಆಯುಃಪ್ರಮಾಣದ ವೃದ್ಧಿ ಸಂಭವಿಸಬಹುದಾಗಿದೆ.

ಅವನವನ ಸಂಕಲ್ಪದಂತೆಯೂ ಆಯುರ್ವೃದ್ಧಿಯು ಘಟಿಸುವುದು. ಒಂದು ವಲ್ಲರಿಯನ್ನು ಭೂಮಿಯಲ್ಲಿ ಬಿತ್ತಿ ಬೆಳೆಸಬೇಕೆಂದು ಸಂಕಲ್ಪಿಸಿದರೆ ಬೆಳೆಸುವವನ ಇಚ್ಛೆಯಂತೆ, ಕಲ್ಪಿಸುವ ಅನುಕೂಲತೆಗಳಂತೆ ಅದು ವೃದ್ಧಿ ಹೊಂದುವುದು. ಕೇವಲ ಭೂಮಿಯ ಮೇಲೆ ಹರಡಿಕೊಳ್ಳುವಂತೆ ಬೆಳೆಸಬಹುದು. ಚಪ್ಪರವನ್ನು ಹಾಕಿ ಸ್ವಲ್ಪ ಎತ್ತರಕ್ಕೆ ಹರಡುವಂತೆ ಮಾಡಬಹುದು. ಅಥವಾ ಬಹಳ ಎತ್ತರದ ಮರಕ್ಕೆ ಹಬ್ಬಿಸಲೂಬಹುದು. ಹಾಗೊಮ್ಮೆ ಹಬ್ಬಿಸಿದರೆ ಆ ವಲ್ಲರಿಯೂ ಮರದಷ್ಟೇ ಎತ್ತರಕ್ಕೂ ಬೆಳೆಯಬಹುದು. ಅದೇ ರೀತಿ ಪ್ರಾಣವನ್ನು ಪ್ರಾಣಾಯಾಮವಿದ್ಯೆಯಿಂದ ಹಿಂದೆ ಹಿಂದೆ ಲಯಗೊಳಿಸುತ್ತಾ ಅದರ ಮೂಲ ನೆಲೆಯವರೆಗೂ ಎಂದರೆ ಸಹಸ್ರಾರವೆಂಬ ಸ್ಥಾನದವರೆಗೂ ತಲುಪಿಸುವ ಅಭ್ಯಾಸವನ್ನು ರೂಢಿಸಿಕೊಳ್ಳುವುದುಂಟು. ಕೇವಲ ದೇಹದ ಭೌತಿಕವಲಯದಲ್ಲೇ ಪ್ರಧಾನವಾಗಿ ವ್ಯಾಪಾರ ಮಾಡುವ ಪ್ರಾಣವನ್ನು ದೈವಿಕ–ಆಧ್ಯಾತ್ಮಿಕ ಕ್ಷೇತ್ರದವರೆಗೂ ನಿತ್ಯದಲ್ಲಿ ಸಂಚರಿಸುವಂತೆ ಮಾಡಿದಾಗ ಅದನ್ನು ಆಯುರ್ವೃದ್ಧಿಯೆಂದೇ ಭಾವಿಸಬಹುದಾಗಿದೆ. ಹಾಗೆ ಯಾರಿಗೆ ಪ್ರಾಣವು ತನ್ನ ಮೂಲನೆಲೆಯವರೆಗೂ ಹಿಮ್ಮುಖವಾಗಿ ಸರಿಯುತ್ತಾ ಅದನ್ನೇ ಅನುಸರಿಸುವ ಮನಸ್ಸು ಹಿಂದೆ ಸರಿಯುತ್ತಾ ಮನಸಸ್ಪತಿಯಲ್ಲಿ ಲಯಗೊಳ್ಳುವುದೋ ಅವರನ್ನು ಪೂರ್ಣಾಯುಷಿಗಳೆಂದೇ ಭಾವಿಸಬೇಕು. ಅವರು ಬಾಹ್ಯವಾಗಿ ಬದುಕಿದ ಅವಧಿ ಮೂವತ್ತು ವರ್ಷವೋ ನಲವತ್ತು ವರ್ಷವೋ ಆಗಿರಬಹುದು. ಆದರೆ ಅವರ ಬದುಕು ಸಾರ್ಥಕವಾದ ಬದುಕಾಗಿದೆ. ಪ್ರಾಣದ ಗತಿಯ ಪೂರ್ಣವಾದ ಉಪಯೋಗವನ್ನು ಪಡೆದ ಅವರು ಪೂರ್ಣಾಯುಷಿಗಳೇ.

ಹೀಗೆ ಆಯುಷ್ಯವು ಪುರುಷಪ್ರಯತ್ನದಿಂದ ವೃದ್ಧಿಯನ್ನು ಹೊಂದುವುದು ಸಿದ್ಧವಾದರೂ ಅದು ಆಯುರ್ವಿದ್ಯೆಯನ್ನೇ ವಶಪಡಿಸಿಕೊಳ್ಳುವುದರ ಮೂಲಕ ಸಾಧ್ಯವೇ ವಿನಹ ಕೇವಲ ಮಾನುಷವಾದ ಬಲಾತ್ಕಾರದಿಂದಲ್ಲ. ಇದೇ ನಿಯಮವನ್ನು ಆಯುಷ್ಯದ ಕ್ಷಯದ ಬಗ್ಗೆಯೂ ಚಿಂತಿಸಬೇಕು. ಒಬ್ಬನ ಆಯುಷ್ಯವನ್ನು ಇನ್ನೊಬ್ಬನು ಹರಣ ಮಾಡಬಹುದೇ? ಸಾಮಾನ್ಯವಾಗಿ ಕೇವಲ ಒಂದು ಭೌತಿಕವಾದ ಬಲಾತ್ಕಾರದಿಂದ ಹರಣ ಮಾಡಲು ಸಾಧ್ಯವಾಗದು. ಹುಟ್ಟುವಾಗ ಯಾವ ಕರ್ಮಗಳು ಸುಖ–ದುಃಖವನ್ನುಂಟುಮಾಡುವ ಸಂಕಲ್ಪದಿಂದ ಪ್ರವೃತ್ತವಾಗಿವೆಯೋ ಅವುಗಳು ಅವನನ್ನು ಬಗೆಬಗೆಯಾಗಿ ರಕ್ಷಿಸಿಕೊಂಡು ಆ ಫಲಗಳನ್ನು ಕೊಡುವವರೆಗೂ ಕಾಪಾಡುತ್ತವೆ. ಅದನ್ನೇ ಒಂದು ಮಾತಿನಲ್ಲಿ–

**ವನೇ ರಣೇ ಶತ್ರುಜಲಾಗ್ನಿಮಧ್ಯೇ ಮಹಾರ್ಣವೇ ಪರ್ವತಮಸ್ತಕೇ ವಾ ।**
**ಸುಪ್ತಂ ಪ್ರಮತ್ತಂ ವಿಷಮಸ್ಥಿತಂ ವಾ ರಕ್ಷನ್ತಿ ಪುಣ್ಯಾನಿ ಪುರಾಕೃತಾನಿ ॥**

'ಕಾಡಿನಲ್ಲೂ ಯುದ್ಧರಂಗದಲ್ಲೂ ಜಲಾಗ್ನಿಗಳಮಧ್ಯದಲ್ಲೂ ಗಂಭೀರವಾದ ಸಮುದ್ರದಲ್ಲೂ ಪರ್ವತದ ನೆತ್ತಿಯಲ್ಲೂ ನಿದ್ರೆಯಲ್ಲಿದ್ದಾಗಲೂ ಪ್ರಮಾದಕ್ಕೆ ಒಳಗಾದಾಗಲೂ ವಿಷಮಸ್ಥಿತಿಯಲ್ಲಿದ್ದಾಗಲೂ ಹಿಂದೆ ಮಾಡಿದ ಪುಣ್ಯಗಳು ಕಾಪಾಡುತ್ತವೆ' ಎಂದು ನುಡಿದಿದ್ದಾರೆ. ಇದು ಸೃಷ್ಟಿಯಲ್ಲಿರುವ ಒಂದು ಸಾಮಾನ್ಯನಿಯಮ. ಕೆಲವೊಮ್ಮೆ ಅನುಭವಿಸಬೇಕಾದ ಪುಣ್ಯಪಾಪಗಳು ಮುಕ್ತಾಯವಾಗಿದ್ದು ಮೃತ್ಯುಸನ್ನಿಹಿತವಾಗಿದ್ದಾಗ ಯಾರೋ ಒಬ್ಬನು ನಿಮಿತ್ತವಾಗಿ ಇನ್ನೊಬ್ಬನನ್ನು ಕೊಲ್ಲಬಹುದು. ಇದು ಹೊರದೃಷ್ಟಿಗೆ ಒಬ್ಬನ ಜೀವಿತವು ಇನ್ನೊಬ್ಬನ ಅಧೀನದಲ್ಲಿದೆ ಎಂದು ತೋರುವಂತಿದ್ದರೂ ಈ ಘಟನೆಯ ಹಿನ್ನೆಲೆಯನ್ನು ಅರಿಯುವ ವಿದ್ಯಾಚಕ್ಷುಸ್ಸುಳ್ಳವನಿಗೆ ಯಾವುದು ಯಾವಾಗ ಆಗಬೇಕೋ ಅದು ಆಗ ಆಗಿಯೇ ಆಗುತ್ತದೆ ಎಂಬ ನಿಲುವಿಗೇ ತಲುಪಿಸುತ್ತದೆ. ಅದನ್ನೇ ಈ ಹಿಂದೆ ಘಟ್ಟಿಕುಟ್ಟೀಪ್ರಭಾತನ್ಯಾಯವೆಂದು ತಿಳಿಸಿದ್ದಾಗಿದೆ. ಒಬ್ಬ ರಾಜಕುಮಾರನು ತನ್ನ ಕೈಯಲ್ಲಿ ಒಂದು ಹಕ್ಕಿ (ಪಾರಿವಾಳ)ಯನ್ನು ಹಿಡಿದುಕೊಂಡು ಜ್ಯೋತಿಷ್ಕನಲ್ಲಿ ಬಂದು 'ಇದರ ಆಯುಷ್ಯವೆಷ್ಟಿದೆ ಹೇಳು!' ಎಂದು ಪ್ರಶ್ನಿಸಿದ. 'ಆಯುಷ್ಯವಿನ್ನೂ ಬಾಕಿಯಿದೆ' ಎಂದರೆ ಆ ಕೂಡಲೇ ಅದರ ಕತ್ತು ಹಿಸುಕಿ ಕೊಂದು ಬಿಡುತ್ತಾನೆ. 'ಆಯುಷ್ಯ ಮುಗಿದಿದೆ' ಎಂದರೆ ಅದನ್ನು ಉಳಿಸಿ ಕಾಪಾಡುತ್ತಾನೆ. ಆಯುಷ್ಯವನ್ನು ಇಡುವುದೂ ತೆಗೆಯುವುದೂ ಅವನ ಕರವಶವಾಗಿರುವಾಗ ಇಲ್ಲಿ ಗ್ರಹಚಾರವಾಗಲೀ ವಿಧಿಯಾಗಲೀ ಏನು ಮಾಡೀತೆಂದು ಒಂದು ಆಕ್ಷೇಪವನ್ನು ಸ್ಮರಿಸಿಕೊಂಡಿದ್ದೇವೆ. ಇವೆಲ್ಲ ಆಕ್ಷೇಪಗಳೂ ಬುದ್ಧಿಗೆ ಚೋದ್ಯವನ್ನುಂಟುಮಾಡುವಂತಿದ್ದರೂ ಹಿನ್ನೆಲೆಯಲ್ಲಿ **'ಭವಿತವ್ಯಂ ಭವತ್ಯೇವ'** ಎಂಬ ಸತ್ಯವನ್ನೇ ಸಾರುತ್ತವೆ. ಉದಾಹರಣೆಗೆ ಅದೇ ಕಥೆಯನ್ನೇ ಮುಂದುವರಿಸಿ ಹೇಳುವುದುಂಟು. ಜ್ಯೋತಿಷ್ಕನು ಆ ಪಾರಿವಾಳದ ಆಯುಷ್ಯದ ಬಗ್ಗೆ ತನ್ನ ವಿದ್ಯಾಸಾಮರ್ಥ್ಯದಿಂದ ಪರಿಶೀಲಿಸಿ ಅದಕ್ಕೆ ಆಯುಷ್ಯ ಮುಗಿದಿದೆ. ಇನ್ನೇನು ಕೆಲವೇ ಕ್ಷಣಗಳಲ್ಲೇ ಅದು ಮೃತ್ಯುವಿಗೆ ತುತ್ತಾಗುವುದೆಂದು ಹೇಳಿದನಂತೆ. ಜ್ಯೋತಿಷ್ಕನ ಮಾತನ್ನು ಅಪಹಾಸ ಮಾಡುತ್ತಿರುವ ತತ್‌ಕ್ಷಣದಲ್ಲೇ ಅವನ ತೋಳ ಬಗಲಿನಲ್ಲಿ ಸೇರಿದ್ದ ಇರುವೆಯೊಂದು ಕಚ್ಚಿತು. ಅವನು ಕ್ಷೋಭೆಯಿಂದ ಪಾರಿವಾಳವನ್ನು ಕೈಬಿಟ್ಟ. ಹತ್ತಿರದಲ್ಲೇ ಸ್ವಲ್ಪಹೊತ್ತಿನಿಂದ ಅವನ ಹಸ್ತದಲ್ಲಿದ್ದ ಪಾರಿವಾಳವನ್ನೇ ವೀಕ್ಷಿಸುತ್ತಿದ್ದ ಗಿಡುಗವೊಂದು ಅತ್ಯಂತ ವೇಗವಾಗಿ ಆಕ್ರಮಿಸಿ ಕ್ಷಣದಲ್ಲೇ ಕಬಳಿಸಿತು. ಅಪಾರವಾದ ತನ್ನ ಸಾಮರ್ಥ್ಯದ ಬಗ್ಗೆ ಅಭಿಮಾನ ಗ್ರಸ್ತನಾಗಿದ್ದ ರಾಜಕುಮಾರ ಮೂಕವಿಸ್ಮಿತನಾದ ಎಂದು.

ಜಾಹಿರಾತು

# ಪ್ರತಿಭಾ ಪ್ರರಸ್ಕಾರಕ್ಕೆ ಅರ್ಜಿ ಆಹ್ವಾನ

ಆತ್ಮೀಯ ಬ್ರಾಹ್ಮಣ ಬಂಧುಗಳೇ,

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾವು ಬ್ರಾಹ್ಮಣ ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ 2023ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. (10ನೇ ತರಗತಿ) ಹಾಗೂ ಪಿ.ಯು.ಸಿ. (ಪ್ಲಸ್ 2) ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾವಂತ ಮಕ್ಕಳಿಗೆ

## "ಪ್ರತಿಭಾ ಪುರಸ್ಕಾರ"

ನೀಡುವ ಕಾರ್ಯಕ್ರಮವನ್ನು ಮಹಾಸಭಾದ ವತಿಯಿಂದ ಆಯೋಜಿಸಲಾಗಿದ್ದು, ಆಸಕ್ತ ಮಕ್ಕಳು ಎಸ್.ಎಸ್.ಎಲ್.ಸಿ. (10ನೇ ತರಗತಿ) ಹಾಗೂ ಪಿ.ಯು.ಸಿ. (ಪ್ಲಸ್ 2) ಪರೀಕ್ಷೆಗಳಲ್ಲಿ ಶೇ. 95ಕ್ಕಿಂತ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾಗಿದ್ದಲ್ಲಿ, ದೃಢೀಕತ ಅಂಕಪಟ್ಟಿ ಮತ್ತು ನಿಗದಿತ ಪ್ರಪತ್ರದಲ್ಲಿ ವಿವರಗಳನ್ನು www.akbms.com ನಲ್ಲಿರುವ ಅರ್ಜಿಗಳನ್ನು ಡೌನ್‌ಲೋಡ್ ಮಾಡಿ, ಭರ್ತಿ ಮಾಡಿದ ಅರ್ಜಿಯನ್ನು ಈ ಕೆಳಕಂಡ ವಿಳಾಸಕ್ಕೆ **ದಿನಾಂಕ 01–10–2023** ರೊಳಗಾಗಿ ಕಳುಹಿಸುವುದು.

ಅಧ್ಯಕ್ಷರು, **ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ**
ನಂ. 3070, ಗಾಯತ್ರಿ ಭವನ, 9ನೇ ಮುಖ್ಯರಸ್ತೆ, 14ನೇ ಕ್ರಾಸ್
ಬನಶಂಕರಿ 2ನೇ ಹಂತ, ಬೆಂಗಳೂರು – 568 070

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :**
**+91 8310071674**

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

## Application for Pratibha Puraskara

(To be furnished by the candidate)

Affix Recent Passport Size Photograph Here

| | |
|---|---|
| 1. Name of the candidate in Block letters | |
| 2. Date of Birth | |
| 3. Name of parents/Gardian : Father | |
| Mother | |
| Gardian | |
| 4. Mother Tongue | |
| 5. Examination passed with total marks obtained with percentage | |
| 6. Name of the school/college where studied | |
| 7. Residential address | |
| 8. Landline & Mobile Phone numbers | |
| 9. e-mail ID | |
| 10. Educational Qualification of Father<br>Mother | |
| 11. Occupation of Father<br>Mother | |
| 12. Course to which now admitted and name of the college | |
| 13. Has any other member of your family achieved distinction in academic career? | |

**NOTE:** Please do not forget to enclose two passport size photographs and copy of marks card.

Please send this to **AKBMS,** No. 3070, "Gayathri Bhavana", 14th Cross, 9th Main, BSK 2nd Stage, Bengaluru - 560 070.

Date : **Signature of the Candidate** **Signature of the Parents**

## ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿಪ್ರ ಸಂಘಟನೆ ಸಭೆಗಳು






## ಮಾನ್ಯ ಅಧಕ್ಷರು ಮತ್ತು ಪದಾಧಿಕಾರಿಗಳಿಂದ ಮಠ–ಮಂದಿರಗಳಿಗೆ ಭೇಟಿ





## ಪ್ರತಿಭಾವಂತ ವಿಪ್ರ ವಿದ್ಯಾರ್ಥಿಗಳಿಗೆ ಪುರಸ್ಕಾರ, ಮೈಸೂರು





PERIODICAL RATE

VIPRANUDI KANNADA MONTHLY

RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 29-09-2023 Date of Publishing 28-09-2023

# ಶುಭಾಶಯಗಳು

## ಡಾ|| ಉದಯ್ ಬಿ. ಗರುಡಾಚಾರ್

## ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



**Dr. Uday B. Garudachar**

**MLA, Chickpet Assembly Constituency**

/BGUdayBJP www.udaygarudachar.in

If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar